ಕಲ್ಯಾಣ ಕಿರಣ

ಅಕ್ಟೋಬರ್ - 2000 ಬೆಲೆ : 5-00



Digitalized by e-Sahithya Documentation Forum
Sponsored by Sarayu Foundation Trust



★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ
ಸಂಚಿಕೆ 10 | ಅಕ್ಟೋಬರ್-2000 | ವಾರ್ಷಿಕ ಚಂದಾ 50/- ರೂ

ದಾರಿ ತಪ್ಪಿದ ಲಿಂಗವಂತರಿಗೆ ಹಿತೋಪದೇಶ

ಲಿಂಗವಂತ ಧರ್ಮವನೇನ ಮಾಡಿಬಿಟ್ಟೀರಪ್ಪ
ಇಂಥಾ ಧರ್ಮ ಲೋಕದಲ್ಲಿ ಸಿಕ್ಕೀತೇನ್ರಪ್ಪ ? ॥ ಪ ॥
ಶರಣರ ಸಂಗವಿಲ್ಲ ಇಷ್ಟಲಿಂಗ ಪೂಜೆಯಿಲ್ಲ
ಧರ್ಮದ ಮಾರ್ಗವ ಬಿಟ್ಟು ಕೆಡ್ತೀರಪ್ಪಯ್ಯ , ನೀವು ಕೆಡ್ತೀರಪ್ಪಯ್ಯ ॥ ಅ. ಪ ॥

ಅಷ್ಟಾವರಣವನ್ನೇ ಬಿಟ್ಟು ಮಣ್ಣು ಮಸಿಯ ಹಣೆಯಲಿಟ್ಟು
ಶರಣ ಧರ್ಮಕ್ಕೆ ದ್ರೋಹ ಬಗೆದೀರಪ್ಪಯ್ಯ
ಬಸವ ತತ್ತ್ವವನ್ನು ಬಿಟ್ಟು ಭಾಷೆ ಹೀನರಾಗಿ ಭವದ
ಬಾಧೆಯಲ್ಲಿ ಬಿದ್ದು ನೀವು ಕೆಡ್ತೀರಪ್ಪಯ್ಯ ॥1॥

ಹೆಣ್ಣು ಹೊನ್ನು ಮಣ್ಣಿಗಾಗಿ, ಲಿಂಗಧ್ಯಾನವನ್ನು ಬಿಟ್ಟು
ಸುಳ್ಳು ಠಕ್ಕ ನುಡಿದು ನೀವು ಕೆಡ್ತೀರಪ್ಪಯ್ಯ
ಇಂದು ನಾಳೆ ಎಂಬ ಮಂದ ಬುದ್ಧಿಯನ್ನು ಬಿಟ್ಟು ನೀವು
ಬೇಗ ಬೇಗ ಲಿಂಗಪೂಜೆ ಮಾಡಿರಪ್ಪಯ್ಯ ॥2॥

ಗುರು ಕೊಟ್ಟ ಲಿಂಗ ಬಿಟ್ಟು ಗುಡಿ ಗೋಪುರವ ತಿರುಗಿ
ಭಂಗದ ಪಡುತ್ತ ನೀವು ಕೆಡ್ತೀರಪ್ಪಯ್ಯ
ಗುರು-ಲಿಂಗ-ಜಂಗಮವ ಪೂಜಿಸಲು ಅರಿಯದೆ
ಮಾರಿ ಮಸಣಿಗ್ಹೋಗಿ ನೀವು ಕೆಡ್ತೀರಪ್ಪಯ್ಯ ॥3॥

ಗುರು ಪುತ್ರರಾಗಿ ಹುಟ್ಟಿ ದೇವ ಧ್ಯಾನವನ್ನು ಬಿಟ್ಟು
ನವಗ್ರಹಗಳ ಪೂಜೆ ಮಾಡ್ತೀರಪ್ಪಯ್ಯ
ಲಿಂಗದೇವನ ಪೂಜೆ ಬಿಟ್ಟು ಹಾದಿ ಬೀದಿ ದೈವಂಗಳಿಗೆ
ಅಡ್ಡಬಿದ್ದು ಮರಳಿ ಮರಳಿ ಬರ್ತೀರಪ್ಪಯ್ಯ ॥4॥

ಸತ್ಯವಿಲ್ಲದ ಭಕ್ತಿಯ ನೀವು ಮಾಡ್ತೀರಪ್ಪಯ್ಯ
ಸತ್ತು ಹೋದವರ ಕತೆಗಳ ಕೇಳ್ತೀರಪ್ಪಯ್ಯ
ಹಿಂದಿನ ಪುಣ್ಯದಿಂದ ಲಿಂಗಾಯತರಾಗಿದ್ದೀರಿ
ಬಸವ ಗುರು ದಯದಿಂದ ಮುಕ್ತಿ ಹೊಂದಿರಿ ॥5॥

-ರಚನೆ : ಶರಣ. ಮರಿಬಸಪ್ಪ , ಅಂಚೆ ಪೇದೆ
ರಾಷ್ಟ್ರೀಯ ಬಸವ ದಳ, ಬಿಡದಿ ಗ್ರಾಮ , ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ

ಸಂಚಿಕೆ 10 | ಅಕ್ಟೋಬರ್-2000 | ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಅಕ್ಟೋಬರ್ ತಿಂಗಳಲ್ಲಿ ಬರುವ ಶರಣರ ಜಯಂತಿ-ಉತ್ಸವಗಳು

ಬಸವ ಧರ್ಮ ವಿಜಯೋತ್ಸವ	ಅಕ್ಟೋಬರ್ 8	ವಿಜಯದಶಮಿ
ಅಕ್ಕನಾಗಲಾಂಬಿಕಾ ಸಂಸ್ಮರಣೆ	ಅಕ್ಟೋಬರ್ 8	,,
ಚನ್ನಬಸವಣ್ಣನವರ ಜಯಂತಿ	ಅಕ್ಟೋಬರ್ 28	ದೀಪಾವಳಿ ಪಾಡ್ಯ
(ದೀಪಾವಳಿ ಪಾಡ್ಯ)ವಚನ ದೀಪೋತ್ಸವ	ಅಕ್ಟೋಬರ್ 28	,,

ಮುಖಪುಟ : ವೀರಮಾತೆ ಅಕ್ಕನಾಗಲಾಂಬಿಕೆ. ಹೊದ್ದಿಕೆಯ ನಾಲ್ಕನೆಯ ಪುಟ : ಚಿನ್ಮಯಜ್ಞಾನಿ ಚನ್ನಬಸವಣ್ಣನವರು

E-mail : viswakalyana@yahoo.com E-mail : matemahadevi@hotmail.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಕಲ್ಯಾಣ ಕಿರಣ. DTP : ರಮೇಶ್ ಲಿಂಗಾಯತ

ಸಂಪಾದಕೀಯ-1 : ಲಿಂಗಾಯತ ಧರ್ಮ ದೇವ ಧರ್ಮ

ಸಾಮಾನ್ಯವಾಗಿ ಜಗತ್ತಿನಲ್ಲಿ ಎಲ್ಲ ಧರ್ಮಗಳ ಗ್ರಂಥಗಳನ್ನು ದೇವರವಾಣಿ ಎಂದೇ ಆಯಾ ಧರ್ಮಗಳ ಅನುಯಾಯಿಗಳು ನಂಬುತ್ತಾರೆ. ವೇದಗಳನ್ನು ಅಪೌರುಷೇಯವೆಂದು, ಆಗಮಗಳನ್ನು ಶಿವನ ವಾಣಿಯೆಂದು ಹೇಳಿದರೆ ಕುರ್‌ಆನ್ ಅನ್ನು ಅಲ್ಲಹನ ವಾಣಿ ಎಂದು ಮುಸಲೀಮರು ಹೇಳುತ್ತಾರೆ. ಸಾಮಾನ್ಯ ಶ್ರದ್ಧಾವಂತ ಅನುಯಾಯಿಗಳು. ಸಾಕ್ಷಾತ್ ದೇವರಿಂದಲೇ ತಮ್ಮ ಧರ್ಮಗ್ರಂಥವು ಬಂದಿದೆ ಎಂದು ಪ್ರತಿಪಾದಿಸುವರು. ದೇವನನ್ನು ಯಾವ ಹೆಸರಿನಿಂದಲೇ ನಾವು ಕರೆಯಲಿ ದೇವನು ಒಬ್ಬ ಎಂದಾಗ ಎಲ್ಲ ಗ್ರಂಥಗಳು ಒಂದೆ ತರಹದ ವಿಚಾರವನ್ನು ಪ್ರತಿಪಾದಿಸಬೇಕಾಗಿತ್ತು. ಕೆಲವೊಂದು ನೈತಿಕ ಮೌಲ್ಯಗಳ ಪ್ರತಿಪಾದನೆಯ ದೃಷ್ಟಿಯಲ್ಲಿ ತುಸು ಸಾಮ್ಯವನ್ನು ಪ್ರತಿಪಾದಿಸಿದರೂ ಸಾಮಾಜಿಕ ಸಿದ್ಧಾಂತಗಳಲ್ಲಿ, ತತ್ವಜ್ಞಾನ ದೃಷ್ಟಿಯಲ್ಲಿ ಸಾಕಷ್ಟು ವ್ಯತ್ಯಾ ಕಾಣುತ್ತೇವೆ. ಅದ್ದರಿಂದ ಯಾವುದೇ ಧರ್ಮಶಾಸ್ತ್ರ ದೇವರ ನೇರವಾಣಿ ಎನ್ನುವುದು ಸ್ವಲ್ಪ ಚಿಂತನೆ ಮಾಡಬೇಕಾದುದೇ ಸರಿ.

ಹಾಗಾದರೆ ಅದು ದೇವರ ವಾಣಿಯಲ್ಲವೆ ? ಇನ್ನೊಂದು ಅರ್ಥದಲ್ಲಿ ಸರಿ. ನಿರಾಕಾರನು, ನಿರವಯವನು ಆದ ಪರಮಾತ್ಮನು ಕೆಲವೊಂದು ಮಹಾನ್ ಚೇತನಗಳನ್ನು ಆಯ್ಕೆ ಮಾಡಿಕೊಂಡು ಅವರಲ್ಲಿ ತನ್ನ ಅನುಗ್ರಹವನ್ನು ಅವತೀರ್ಣಗೊಳಿಸಿ, ಅವರ ಅಂತರಾತ್ಮಕ್ಕೆ ಪ್ರೇರಣೆ ನೀಡುವ ಮೂಲಕ ತನ್ನ ಸಂದೇಶವನ್ನು ಸಂವಹನ ಮಾಡುವನು ಆ ದೈವೀ ಸಂದೇಶ ಒಂದೆ ಇದ್ದರೂ ದೇಶ, ಕಾಲಗಳ ಹಿನ್ನೆಲೆಯಲ್ಲಿ ಅದು ವ್ಯತ್ಯಾಸವನ್ನು ಪಡೆಯುತ್ತದೆ. ಆಕಾಶದಿಂದ ಬೀಳುವ ಮೋಡದ ನೀರು ಒಂದೇ ಇದ್ದರೂ ತಾನು ಹರಿವ ಭೂಮಿಯ ಮಣ್ಣಿನ ಗುಣವನ್ನು ಅದು ಪಡೆದುಕೊಂಬಂತೆ. ಸಾಮಾನ್ಯವಾಗಿ ಜ್ಞಾನಿಗಳು, ಮಹಾತ್ಮರು ಪರಮಾತ್ಮನ ಧ್ಯಾನದಲ್ಲಿರುವಾಗ ಅವರು ದೇವನೊಡನೆ ತಾದಾತ್ಮ್ಯವನ್ನು ಸಾಧಿಸುತ್ತಾರೆ. ಅದಕ್ಕೆ ಭಾವಲಿಂಗೈಕ್ಯ ಸ್ಥಿತಿ ಎನ್ನಲಾಗುವುದು. ಆಗ ಅವರು ಅನೇಕ ಬಗೆಯ ದಾರ್ಶನಿಕ ಅನುಭವ (Mystic experience)ಪಡೆದು ದ್ರಷ್ಟಾರರು ಎನ್ನಿಸಿಕೊಂಡು ತಮ್ಮ ಅನುಭವಗಳನ್ನು ವಾಣಿಯ ರೂಪದಲ್ಲಿ, ಬರಹದ ರೂಪದಲ್ಲಿ ಜಗತ್ತಿಗೆ ಕೊಡುತ್ತಾರೆ. ಹೀಗಾಗಿ ಅವರ ವಾಣಿಯೂ, ದಾರ್ಶನಿಕರ ಮೂಲಕ ಬಂದ ದೇವರ ಸಂದೇಶವಾದ ಕಾರಣ ದೈವೀವಾಣಿ (Divine ordinance)ಯೇ ಆಗುತ್ತದೆ.

ಇಲ್ಲಿ ಒಂದು ಎಚ್ಚರಿಕೆಯ ಮಾತು ಅಗತ್ಯ. ಲೋಕದ ಹಿತದ ದೃಷ್ಟಿಯಿಂದ ನಿಜ ಸಂತರು, ದಾರ್ಶನಿಕರು ಕೊಡುವ ಅಮೂಲ್ಯ ವಿಚಾರಗಳಿಗೆ ಪುರೋಹಿತ ಶಾಹಿಗಳು, ಸ್ವಾರ್ಥಿಗಳು ಅನೇಕ ಬಗೆಯ ಕಲುಷಿತ ವಿಚಾರಗಳನ್ನು ಸೇರಿಸುವುದುಂಟು, ಪ್ರಕೃತಿ ಕೊಟ್ಟ ಅಕ್ಕಿಗೆ ಸುಳ್ಳು ವ್ಯಾಪಾರಿಗಳು ಕಲ್ಲು ಹರಳು ಸೇರಿಸಿ, ಮಾರುವಂತೆ ; ಶುದ್ಧ ಹಾಲಿಗೆ ನೀರು ಸೇರಿಸಿ ಮಾರುವಂತೆ.

ಜಗತ್ತಿನಲ್ಲಿ ಅನೇಕ ಧರ್ಮಗಳಿವೆ. ಐತಿಹಾಸಿಕ ಕ್ರಮದಲ್ಲಿ ತೆಗೆದುಕೊಂಡರೆ, 1. ವೇದಪೂರ್ವದ ಶೈವ 2. ವೇದಾಧಾರಿತ ವೈದಿಕ, 3. ಇಸ್ರೇಲಿನ ಯಹೂದಿ 4. ಬೌದ್ಧ 5. ಜೈನ, 6. ಏಸು ಕ್ರಿಸ್ತರ ಕೊಡುಗೆಯಾದ ಕ್ರೈಸ್ತ 7. ಮೊಹಮ್ಮದರ ಕೊಡುಗೆಯಾದ ಇಸ್ಲಾಂ 8. ಬಸವಣ್ಣನವರಿಂದ ಸ್ಥಾಪಿತವಾದ ಲಿಂಗಾಯತ 9. ಗುರುನಾನಕರ ಕೊಡುಗೆಯಾದ ಸಿಖ್ ಧರ್ಮ.

'ಶಿವ' ಎಂದರೆ ಮಂಗಲ ಎಂಬ ಅರ್ಥವಿದ್ದರೂ ಯೋಗಿರಾಜ ಶಿವನಿಂದ ಸ್ಥಾಪಿತವಾದುದು ಶೈವ ಧರ್ಮ ಎಂಬ ಅರ್ಥಬರುವುದು. ವೇದ ಪದವು ವಿದ್-ತಿಳಿ ಎಂಬ ಪದದಿಂದ ಉತ್ಪತ್ತಿಯಾಗಿ 'ಜ್ಞಾನ' ಎಂಬ ಅರ್ಥನೀಡಿದರೂ 'ವೇದ' ಎಂಬ ಶಾಸ್ತ್ರದ ಆಧಾರದ ಮೇಲೆ ರೂಪುಗೊಂಡುದು ವೈದಿಕ ಧರ್ಮ

Digitalized by e-Sahithya Documentation Forum
Sponsored by Sarayu Foundation Trust

ಜನಾಂಗವಾಚಕವಾದುದು. ಎಂಬ ಅರ್ಥಬರುವುದು. ಇಸ್ರೇಲಿನಲ್ಲಿ ಹುಟ್ಟಿದ ಯಹೂದಿ ಧರ್ಮ ಬೌದ್ಧ ಧರ್ಮವಾದರೆ, ಜಿನ ಬುದ್ಧ-ಜ್ಞಾನವನ್ನು ಪಡೆದವನು, ಗೌತಮ ಬುದ್ಧರಿಂದ ಕೊಡಲ್ಪಟ್ಟುದು ತೀರ್ಥಂಕರರಿಂದ ಎಂದರೆ ತನ್ನ ತಾನು ಗೆದ್ದವ, ಇಂದ್ರಿಯ ನಿಗ್ರಹಿ ಎಂಬರ್ಥದಲ್ಲಿ ಜಿನ ಮೇಸಾಯಿಯಾ, ಬೋಧಿಸಲ್ಪಟ್ಟುದು. ಜೈನ ಧರ್ಮ, ಏಸು, ಕ್ರಿಸ್ತ- ಕ್ರೈಸ್ತ ಎಂದರೆ ದೇವರ ಪ್ರತಿನಿಧಿ ಕ್ರೂರವಾದ ಇವರಿಂದ ಕೊಡಲ್ಪಟ್ಟುದು ಕ್ರೈಸ್ತಧರ್ಮ. ಇಸ್ಲಾಂ ಎಂದರೆ ಶಾಂತಿ, ಬುಡಕಟ್ಟುಗಳ ಜನರು ಇಟ್ಟುಕೊಂಡು ರೀತಿಯಲ್ಲಿ ಪರಸ್ಪರ ಜಗಳವಾಡುತ್ತಿದ್ದುದನ್ನು ಗಮನಿಸಿ ಶಾಂತಿಯನ್ನೇ ಗುರಿಯನ್ನಾಗಿ ಸಿಖ್ ಇಬ್ರಾಹಿಂ, ಮೊಹಮ್ಮದ್ (ಕಡೆಯ ಪ್ರವಾದಿ)ರು ಕೊಟ್ಟುದು ಇಸ್ಲಾಂ, ಇದು ಗುಣವಾಚಕ ಪದ. ಬಸವಣ್ಣನವರು ಎಂದರೆ ಶಿಷ್ಯ ; ಇಲ್ಲಿ ಶರಣ ಎಂಬ ಪದವು ಹೊರಹೊಮ್ಮುವುದು. ಧರ್ಮಗುರು ವಿವಿಧ ಪದಗಳ ಕೊಟ್ಟುದು ಲಿಂಗ-ಆಯತ ಧರ್ಮ. ಲಿಂಗ ಎಂದರೆ ದೇವರು. ಆಂಗ್ಲಭಾಷೆಯಲ್ಲಿ ನಾಲ್ಕೂ ಒಂದೊಂದು ಅಕ್ಷರ ಸೇರಿಸಿ ಹೆಸರಿಡುವ ಪರಿಪಾಠ ಉಂಟು. ಉದಾ: NEWS ವಾರ್ತೆಗಳು. ಎಂಬ ಪದಗಳ ದಿಕ್ಕಿನಿಂದ ಬಂದ ಸುದ್ದಿ ಎಂಬುದನ್ನು ಹೇಳಲಿಕ್ಕೆ North, East, West, South ಉತ್ಪತ್ತಿ ಮಾಡುತ್ತದೆಯೋ ಸೇರಿಸಿNEWS ಆಗಿದೆ. ಅದೇ ರೀತಿ GOD ಸಹ ಯಾವುದು ಸೃಷ್ಟಿಯನ್ನು (D) ಆ ಶಕ್ತಿಯೇ (G) ಪರಿಪಾಲಿಸುತ್ತದೆಯೋ (O), ಪ್ರಳಯವನ್ನು ಉಂಟು ಮಾಡುತ್ತದೆಯೋ ಅದುವೇ ದೇವು GOD. ಈ ಪದಕ್ಕೆ ತತ್ಸಮಾನವಾದ ಒಂದು ಪದ ಸಂಸ್ಕೃತದಲ್ಲಿದ್ದರೆ ಅನೇಕ ಪದಗಳು 'ಲಿಂಗ'-ಸೇಶ್ವರವಾದಿಗಳಾದ, ಪರಮಾತ್ಮನ ಪ್ರತಿನಿಧಿಯಾದ ಬಸವಣ್ಣನವರಿಗೆ ಸೃಷ್ಟಿಕರ್ತನನ್ನು ಲಭ್ಯವಿದ್ದರೂ ಅದರ ಅರ್ಥಗರ್ಭಿತತ್ವ, ಆಳ ಮತ್ತು ಸಮಗ್ರತೆಯಿಂದಾಗಿ (God's religion) "ಲಿಂಗದೇವ" ಎಂದು ಕರೆದರು. ತಾವು ಕೊಟ್ಟ ಧರ್ಮಕ್ಕೆ ದೇವ ಧರ್ಮ ಎಂದು ಹೆಸರಿಡಲು ಬಯಸಿ ಲಿಂಗಾಯತ ಧರ್ಮ ಎಂದು ಕರೆದರು.

> ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು
> ಆರೋ ಮಾಡಿದ ಪಾಪಕ್ಕೆ ತಾನೇ ಕೈಯಾಗುವನು.
> ಸರಿಯೆ ದೇವಭಕ್ತಂಗಿವನು ?
> ಸರಿಯೇ ಲಿಂಗಭಕ್ತಂಗಿವನು ? -ಬ.ವ.ದೀ 581

ಲಿಂಗಭಕ್ತ ಎಂದರೆ ದೇವಭಕ್ತ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಲಿಂಗ ಎನ್ನುವ ಪದದಲ್ಲೇ ದೇವ ಎನ್ನುವುದು ಅಂತರ್ಗತವಾಗಿದ್ದರೂ ದೇವರನ್ನು ಗೌರವಪೂರ್ಣವಾಗಿ ಸಂಬೋಧಿಸಬಯಸಿ 'ಲಿಂಗದೇವ' ಎಂದು ಕರೆದರು. ಆದ್ದರಿಂದ ಲಿಂಗ-ಆಯತ ಧರ್ಮ ಎಂಬ ಪದದಲ್ಲಿ ದೇವ ಧರ್ಮ ಎಂಬುದು ಅಂತರ್ಗತವಾಗಿದ್ದು, ಜಗತ್ತಿನ ಎಲ್ಲ ಧರ್ಮಗಳಲ್ಲಿ ದೇವನ ಹೆಸರನ್ನು ಹೊತ್ತು ಇರುವ ಧರ್ಮ ಬಸವಣ್ಣನವರು ಕೊಟ್ಟ 'ಲಿಂಗಾಯತ' ಮಾತ್ರ ಎನ್ನಿಸಿ ಅಪಾರವಾದ ಅಭಿಮಾನ-ಆನಂದ ಉಂಟಾಗುತ್ತವೆ. ನಿರಾಕಾರ ದೇವನನ್ನು ನಂಬಿ ಅವನನ್ನು ಗೋಳಾಕಾರದ ಇಷ್ಟಲಿಂಗರೂಪದಲ್ಲಿ ಸಾಕಾರಗೊಳಿಸಿಕೊಂಡು, ಅಂಗದ ಮೇಲೆ ಧರಿಸಿ, "ನಾನು ದೇವರನ್ನು ಅಂಗದ ಮೇಲೆ ಧರಿಸಿಕೊಂಡವನು" ಎಂಬ ಅಭಿಮಾನದಿಂದ ಬೀಗುವಂತೆ ಧರ್ಮಪಿತರು ಮಾಡಿದ್ದಾರೆ.

ಇಸ್ಲಾಂ, ಕ್ರೈಸ್ತ, ಸಿಖ್ ಧರ್ಮಗಳೂ ಏಕೇಶ್ವರವಾದವನ್ನು ಬೋಧಿಸಿವೆ ಅಂದಾಗ ಲಿಂಗಾಯತ ಧರ್ಮದ ವಿಶೇಷವೇನು ? ಎಂದು ಒಬ್ಬರು ಕೇಳಿದರು. ಅಹುದು, ಆ ಎಲ್ಲ ಧರ್ಮಗಳು ಏಕೇಶ್ವರವಾದವನ್ನು ಹೇಳಿದ್ದರೂ ಆ ಒಬ್ಬ ದೇವನನ್ನು ಪೂಜಿಸುವ ವಿಧಾನವನ್ನು ಹೇಳಿಲ್ಲ, ಪೂಜಿಸಲು ಸಾಧನವೊಂದನ್ನು ಕೊಟ್ಟಿಲ್ಲ. ಆದರೆ ಧರ್ಮಪಿತ ಬಸವಣ್ಣನವರು ದೇವನೊಬ್ಬ ಎಂದು ಹೇಳಿ, ಏಕೇಶ್ವರವಾದವನ್ನು ಬೋಧಿಸಿ, ಅಂಥ ದೇವನಿಗೆ ಮನುಷ್ಯರ, ಪಶುಪಕ್ಷಿ, ಕ್ರಿಮಿ-ಕೀಟಗಳ ರೂಪ

Digitalized by e-Sahithya Documentation Forum
Sponsored by Sarayu Foundation Trust

ಕೊಡುವುದು ಉಚಿತವಲ್ಲ ಎಂದು ಸಾರಿ, ಆ ದೇವನ ಕೊಡುಗೆಯಾದ ಬ್ರಹ್ಮಾಂಡದ ಆಕಾರದಲ್ಲಿ ಇಷ್ಟಲಿಂಗವನ್ನು ಕುರುಹುಗೊಳಿಸಿ ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಅರ್ಥಾತ್ ಇಷ್ಟಲಿಂಗದ ರೂಪದಲ್ಲಿ ಪೂಜಿಸುವ ಏಕದೇವೋಪಾಸನೆ ಹೇಳಿದರು. ಹೀಗಾಗಿ ಇದು ದೇವ ಧರ್ಮ.

ಸೃಷ್ಟಿಕರ್ತನ ಆರಾಧನೆ-ಒಂದು ಶ್ರೇಷ್ಠ ಆಚರಣೆ

ಒಂದು ದಿನ ಓರ್ವ ಶರಣೆ ಹೇಳಿದಳು, "ಉದಯ ಟಿ.ವಿ.ಯಲ್ಲಿ ಚಿನ್ಮಯ ಮಿಷನ್‌ನ ಓರ್ವ ಸ್ವಾಮಿಗಳ ಪ್ರವಚನವಿತ್ತು. ಅವರು ಹೇಳಿದರು ಪೂಜೆ ಒಂದು ಬಗೆಯ ಕೃತಜ್ಞತಾ ಸಮರ್ಪಣೆ (thanks giving) ಎಂದು ಕೆಲವರು ಹೇಳುತ್ತಾರೆ. ದೇವರಿಗೆ ನಾವೇನು ಕೃತಜ್ಞತೆ ಸಲ್ಲಿಸುವ ಅಗತ್ಯವಿದೆ ? ಪೂಜೆ ಅಗತ್ಯವಿಲ್ಲ ; ಧ್ಯಾನ ಮುಂತಾಗಿ ಮಾಡುವುದು ನಮ್ಮ ಆತ್ಮಶಾಂತಿಗಾಗಿ ಎಂದು ಹೇಳಿದರು. ಅವರು ನಿಮ್ಮ ಹೆಸರು ಹೇಳದಿದ್ದರೂ ನಿಮ್ಮನ್ನೇ ಟೀಕಿಸುವ ಉದ್ದೇಶವಿತ್ತು" ಎಂದು.

ಹಿಂದು ಧರ್ಮದಲ್ಲಿ ದೇವನಿಗೆ ಯಾವ ಬೆಲೆ ಇದೆ ? ಯಾವ ಸ್ಥಾನವಿದೆ ? ಸೃಷ್ಟಿಕರ್ತನ ಸ್ಥಾನ ಅಲ್ಲಿ ನಗಣ್ಯ. 33 ಕೋಟಿ ದೇವತೆಗಳು, ಪಂಚಭೂತಗಳು, ಪ್ರಾಣಿಗಳು, ಗಿಡ-ಮರಗಳು, ಹಾವು-ಗೋವುಗಳು ಈ ಎಲ್ಲವುಗಳ ಪೂಜೆಯಲ್ಲಿ "ದೇವರು" ಹಿಂದು ಧರ್ಮದಲ್ಲಿ ಕಳೆದೇ ಹೋಗಿದ್ದಾನೆ. ಅಷ್ಟವಿಧಾರ್ಚನೆ-ಷೋಡಶೋಪಚಾರ ಎಂಬ ಕ್ರಿಯೆ ಶೈವ ಮೂಲದಿಂದ ಬಂದು ಸೇರದಿದ್ದರಂತೂ ವೈದಿಕ ಆಚರಣೆಯ ಹಿಂದೂ ಧರ್ಮ ಬರೀ ಹೋಮ-ಹವನ, ಪಂಚಭೂತ, ಪ್ರಾಣಿಗಳ ಪೂಜೆಯಲ್ಲಿಯೇ ಮುಳುಗಿ ಹೋಗಿ ಬರಡಾಗುತ್ತಿತ್ತು.

Dr. Zaehner ಎಂಬ ವಿದ್ವಾಂಸರು. Hinduism ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ. "It does not matter for a Hindu, whether he believes in God or not, still he can be a Hindu." "ದೇವರಲ್ಲಿ ನಂಬಿಕೆ ಇರಲಿ, ಇಲ್ಲದಿರಲಿ ಹಿಂದುವು ಹಿಂದುವಾಗಿರಬಲ್ಲ. ಅದೇ ಮಾತು ಕ್ರೈಸ್ತ-ಇಸ್ಲಾಂ-ಸಿಖ್ ಲಿಂಗಾಯತ ಧರ್ಮಗಳಿಗೆ ಅನ್ವಯಿಸಲಾರವು. ಏಕೆಂದರೆ ಈ ನಾಲ್ಕು ಧರ್ಮಗಳಲ್ಲಿ ಸೃಷ್ಟಿಕರ್ತನಿಗೆ ಅಗ್ರ ಪೀಠ. ಏಸು, ಮೊಹಮ್ಮದ್, ಗುರುನಾನಕ್, ಬಸವಣ್ಣ ಮುಂತಾದವರು ಆ ದೇವನಿಂದಾಗಿ ದೊಡ್ಡವರಾದರು. ಹೀಗಾಗಿಯೇ ಈ ಧರ್ಮಗಳಲ್ಲೆಲ್ಲ ಸೃಷ್ಟಿಕರ್ತನನ್ನು ವೈಭವಿಸಿದ್ದಾರೆ, ಮೆರೆಸಿದ್ದಾರೆ, ಪ್ರಾರ್ಥಿಸಿದ್ದಾರೆ ಇವರಾರೂ ತಮ್ಮನ್ನು ತಾವು ವೈಭವಿಸಿಕೊಂಡಿಲ್ಲ. ಅದೇ ಹಿಂದೂ ಧರ್ಮದಲ್ಲಿ ಆ ಸೃಷ್ಟಿಕರ್ತನ ಸರ್ವೋತ್ತಮಿಕೆಯನ್ನು ಕಾಪಾಡುವ ಪ್ರಯತ್ನವು ಇಲ್ಲದೆ ಇರುವುದರಿಂದ ಮಣ್ಣುಕಲ್ಲು, ಗಿಡಗಂಟಿ, ಆಮೆ, ಹಂದಿ, ನಾಯಿ ಕಾಗೆಗಳೂ ದೇವರಾಗುವುದಲ್ಲದೆ "ನಾನೇ ಭಗವಾನ್" ಎಂದು ಅಸಂಖ್ಯಾತರು ಪೈಪೋಟಿ ನಡೆಸುವರು. ಒಬ್ಬೊಬ್ಬ ಸಂತ ಅಥವಾ ಸಂತ ವೇಷಧಾರಿ ಹುಟ್ಟಿದಾಗಲೂ ಸೃಷ್ಟಿಕರ್ತನನ್ನು ಮರೆಸಿ ತನ್ನನ್ನು ಮೆರೆಸಿಕೊಳ್ಳುವನು. ಈಗಾಗಲೇ 33 ಕೋಟಿ ದೇವತೆಗಳಿಂದ ಭಾರವಾದ ಭಾರತ ಆರ್ಥಿಕ ದಾರಿದ್ರ್ಯ, ಬೌದ್ಧಿಕ ದಾರಿದ್ರ್ಯಗಳೆರಡರಲ್ಲಿ ಬಳಲುತ್ತ ಸಾಕ್ಷಿ ಮಹಾರಾಜ್, ಕಲ್ಕಿ ಮಹಾರಾಜ್, ಚಂದ್ರಾಸ್ವಾಮಿ- ಇಂಥ ಹೊಸ ಹೊಸ "ದೇವರು"ಗಳ ಗೊಂದಲದಲ್ಲಿ ಸಿಗುತ್ತದೆ. ಸೃಷ್ಟಿಕರ್ತನ ಕಲ್ಪನೆಯನ್ನೇ ಹೊಂದಲು ಅಸಮರ್ಥರಾದ ಹಿಂದುಗಳು ಯಾರಾದರೊಬ್ಬ ಹುಟ್ಟಿ ತನ್ನನ್ನು ತಾನು ಮೆರೆಸಿಕೊಳ್ಳುತ್ತಿದ್ದಂತೆಯೇ ಅವನ/ಳ ಹಿಂದೆ ದುಡುದುಡು ಓಡುವರು. ಅರ್ಧಬೆಲೆಗೆ ಸಾಮಾನು ಕೊಡುತ್ತೇವೆ, ನೋಟು ದ್ವಿಗುಣ ಮಾಡುತ್ತೇವೆ ಎಂದು ಮೋಸಗಾರರು ಬರುತ್ತಲೇ ಪುನಃಪುನಃ ಮೋಸಕ್ಕೆ ಒಳಗಾಗುವರು, ಒಬ್ಬ ಸೃಷ್ಟಿಕರ್ತನ ಪರಿಕಲ್ಪನೆ ಬಲವಾಗಿ ಬೇರೂರಿದ್ದರೆ ಹಿಂದು ಸಮಾಜವು ಇಷ್ಟು ದುರ್ಬಲವಾಗುತ್ತಲೇ ಇರಲಿಲ್ಲ. ಪುರೋಹಿತರಿಗೆ ದೇವರ ಸಂಖ್ಯೆ ಜಾಸ್ತಿಯಾದಷ್ಟು ಸಂಪಾದನೆ

ಜಾಸ್ತಿಯಾಗುವುದರಿಂದ ಅವರೆಂದೂ ಅಧ್ಯಾತ್ಮವನ್ನು, ಏಕೇಶ್ವರವಾದವನ್ನು ಬೋಧೆ ಮಾಡಲು ಹೋಗುವುದೇ ಇಲ್ಲ. ಪೂಜೆ, ಅಷ್ಟವಿಧಾರ್ಚನೆ ಲಿಂಗಾಯತ ಧರ್ಮದಲ್ಲಿ ಇವೆ. ಇತರ ಏಕೇಶ್ವರವಾದಿ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳಲ್ಲಿ ಕೇವಲ ಪ್ರಾರ್ಥನೆ ಇದೆ. ಆದರೆ ಅದರಲ್ಲಿ ಒಬ್ಬ ದೇವನ ಮಹಿಮೆಯನ್ನು ಮನದುಂಬಿ ಕೊಂಡಾಡಲಾಗುತ್ತದೆ. ಆ ಧರ್ಮಗಳ ಶಕ್ತಿ ಇರುವುದೇ ಒಬ್ಬ ದೇವ. ಒಬ್ಬ ಗುರು, ಒಂದು ಗ್ರಂಥದಲ್ಲಿ. ಹಿಂದು ಧರ್ಮದ ದೌರ್ಬಲ್ಯ ಇರುವುದೇ ಬಹುದೇವತೆ-ಬಹುಗುರು-ಬಹುಗ್ರಂಥ ವಿಶ್ವಾಸದಲ್ಲಿ.

ಆತ್ಮ ಶಾಂತಿ

"ಸಾಧನೆಯ ಗುರಿ ಕೇವಲ ಆತ್ಮಶಾಂತಿ" ಎಂದು ತಿಳಿದು ಸಾಧಕರು ಅದರಲ್ಲೇ ತಲ್ಲೀನರಾಗುವುದರಲ್ಲೇ ಹಿಂದೂ ಸಮಾಜದಲ್ಲಿ ಸಂಘಟಿತ ಶಕ್ತಿ (United force) ಇಲ್ಲದಿರುವುದು ; ಕಡೆಗೆ ಈ ಶಾಂತಿ ನಿರ್ವೀರ್ಯತನಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ಸಂಘ ಪರಿವಾರ ಮಾತ್ರ, ಹೊರಗೆ ಆಡದಿದ್ದರೂ, ಒಳಗೆ ಅರ್ಥಮಾಡಿಕೊಂಡಿದೆ. ಪಾರ್ವತಿ ಎಂಬ ಓರ್ವ ಮಹಿಳೆ ಹೇಳುತ್ತಿದ್ದರಂತೆ "ಮಾತಾಜಿ ಮೊದಲು ಆತ್ಮಸಾಧನೆ ಕುರಿತು ಆಸಕ್ತರಾಗಿದ್ದರು. ಈಗೀಗ ಅವರು ಹೆಚ್ಚು ಸಮಾಜ ಮುಖಿಯಾಗಿ ಗೊಂದಲದಲ್ಲಿ ಸಿಕ್ಕಿದ್ದಾರೆ" ಎಂದು. ನಾನು ಸಮಾಜ ಮುಖಿ (social minded)ಯಾಗಿರುವುದು ನೂರಕ್ಕೆ ನೂರು ಸತ್ಯ ; ಆದರೆ ಬಹಿರ್ಮುಖಿ (extrovert) ಆಗಿಲ್ಲ. ಇದಕ್ಕೆ ಪ್ರೇರಣೆ ಅಪ್ಪ ಬಸವಣ್ಣನವರ ಮಹಾನ್ ಆದೇಶ, "ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ. ಜಂಗಮದೊಳಗೆ ಲಿಂಗಯ್ಯನಿದ್ದಾನೆ ಎಂದುದು ಲಿಂಗದೇವನ ವಚನ".

ಒಂದು ಕೋಣೆ ಇರುತ್ತದೆ. ಅದರಲ್ಲಿ ತುಂಬಾ ಕಸ-ಕಡ್ಡಿ-ಕೊಳೆ ಬಿದ್ದಿರುತ್ತದೆ ಎಂದುಕೊಳ್ಳುವ. ಕೆಲವು (ಸೋಮಾರಿ) ಸಾಧಕರು ತಾವು ಪೂಜೆ ಧ್ಯಾನಕ್ಕೆ ಕುಳಿತುಕೊಳ್ಳುವಷ್ಟು ಜಾಗ ಮತ್ರ ಗುಡಿಸಿಕೊಂಡು ಪೂಜೆ/ಧ್ಯಾನ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರು ಕೋಣೆಯಲ್ಲಿ ಇಷ್ಟು ಕೊಳೆ-ಕಸ ತುಂಬಿರುವಾಗ ಅದು ಹೇಗೆ ನೆಮ್ಮದಿಯಿಂದ ಪೂಜೆ/ಧ್ಯಾನ ಮಾಡಲು ಸಾಧ್ಯ. ಕೋಣೆಯನ್ನು ಸ್ವಚ್ಛ ಮಾಡುವುದೂ ಒಂದು ತಪಸ್ಸೇ ಎಂದು ಮೊದಲು ಕೋಣೆಯನ್ನು ಓರಣಗೊಳಿಸಿಕೊಳ್ಳುತ್ತಾರೆ. ನಂತರ ಪೂಜೆಗೆ ಕೂರುತ್ತಾರೆ. ಈ ಎರಡು ದೃಷ್ಟಿಕೋನಗಳಲ್ಲಿರುವ ವ್ಯತ್ಯಾಸವೇ ವೇದಾಂತ ಮತ್ತು ಶರಣ ಧರ್ಮದಲ್ಲಿರುವ ವ್ಯತ್ಯಾಸ. ಸಮಾಜವು ಜಾತಿವರ್ಣವರ್ಗ ಮೂಢನಂಬಿಕೆ, ಶೋಷಣೆಗಳಿಂದ ನರಕವಾಗಿರುವಾಗ ತಾನೊಬ್ಬನೇ ಆತ್ಮಶಾಂತಿಯನ್ನು ಕಂಡುಕೊಳ್ಳುತ್ತೇನೆ ಎನ್ನುವುದು ಸ್ವಾರ್ಥವಲ್ಲವೆ ? ಅದಕ್ಕಾಗಿಯೇ ಷಟಸ್ಥಲದಲ್ಲಿ ಅಂಗಸ್ಥಲ-ಲಿಂಗಸ್ಥಲ ಎಂಬ ಎರಡು ಭಾಗಗಳುಂಟು. ಅಂಗಸ್ಥಲದಲ್ಲಿ ಸಾಧಕನು ತಾನು ಪರಿಪೂರ್ಣತೆಗೆ ಪ್ರಯತ್ನಿಸುವನು ; ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನಾಗಿ ಶಬ್ದಮುಗ್ಧತ್ವ (ವೇದಾಂತದ ಪರಮಗುರಿ) ಪಡೆದು ಅಲ್ಲೇ ನಿಲ್ಲದೆ ಪುನಃ ಅವರೋಹಣ ಮಾಡಿ ಮಹಾಭಕ್ತ ಸ್ಥಲದಲ್ಲಿ ನಿಂತು ಲೋಕ ಜಾಗೃತಿ, ಸೇವೆಯಲ್ಲಿ ತೊಡಗುವನು. ಇದು ಲಿಂಗಸ್ಥಲ. ಎಂಥಾ ಅದ್ಭುತ ಪರಿಕಲ್ಪನೆ !

ಸಮಾಜ ಮುಖಿಗಳಾಗಿ ನಾವು ಕಾರ್ಯೋನ್ಮುಖರಾಗಿದ್ದರೂ ಗೊಂದಲಕ್ಕಾಗಲಿ, ದುಃಖ ನಿರಾಶೆಗಾಗಲಿ ಒಳಗಾಗುವುದಿಲ್ಲ. ಏಕೆಂದರೆ ಸಮಾಜದ ಗುಣ, ದೌರ್ಬಲ್ಯ ಏನೆಂದು ಸುಧಾರಕರಿಗೆ ಗೊತ್ತಿರುತ್ತದೆ. ಒಬ್ಬ ಪ್ರಾಮಾಣಿಕ ವೈದ್ಯ ನಿಷ್ಠೆಯಿಂದ ರೋಗಿಯ ಆರೈಕೆ ಮಾಡುತ್ತಾನೆ, ಶಸ್ತ್ರ ಚಿಕಿತ್ಸೆ ಮಾಡುತ್ತಾನೆ. ಆದರೂ ರೋಗಿ ಗುಣಮುಖನಾಗದೆ, ಸತ್ತುಹೋಗುತ್ತಾನೆ. ರೋಗಿ ಸತ್ತು ಹೋದುದಕ್ಕೆ ವೈದ್ಯನು ಅಳುತ್ತಾ ಕೂರುವುದಿಲ್ಲ. "ನಾನು ಮಾಡುವುದನ್ನು ಅಂತಃಸಾಕ್ಷಿಯಾಗಿ, ಕರ್ತವ್ಯಪ್ರಜ್ಞೆಯಿಂದ

Digitalized by e-Sahithya Documentation Forum
Sponsored by Sarayu Foundation Trust

ಪ್ರಾಮಾಣಿಕವಾಗಿ ಮಾಡಿದ್ದೇನೆ. ಆಯುಷ್ಯ ಭಾಗ್ಯ ಇಲ್ಲ." ಎಂದು ಸಮಾಧಾನ ತಾಳಿಕೊಳ್ಳುತ್ತಾನೆ. "ಲಿಂಗದೇವ" ಎಂಬ ಅದ್ಭುತ ವಜ್ರವನ್ನು ಬಸವ ವಚನ ಎಂಬ ಚಿದ್‌ಗಣಿಯಿಂದ ತೆಗೆದುಕೊಟ್ಟೆ ; ಜನರು ನಿಧಾನಕ್ಕೆ ಅರ್ಥಮಾಡಿಕೊಂಡು ಅರ್ಥವನ್ನರಿತು, ಆನಂದವನ್ನು ಅನುಭವಿಸುತ್ತಿದ್ದಾರೆ. ಹಾಡಿ ಕೊಂಡಾಡಿದ್ದಾರೆ. ಇನ್ನೂ ಕೆಲವರಿಗೆ ಅರ್ಥ ಮಾಡಿಕೊಳ್ಳುವ ಬೌದ್ಧಿಕ ಸಾಮರ್ಥ್ಯವಿಲ್ಲ, ಸಹೃದಯತೆ ಇಲ್ಲ ; ಅರ್ಥವಾದರೂ ಅಳವಡಿಸಿಕೊಳ್ಳುವ ಧೈರ್ಯವಿಲ್ಲ. ಅಂಥವರಿಗಾಗಿ ನಾವು ಅಳುತ್ತಾ ಕೂರುತ್ತೇವೆಯೆ ? 800 ವರ್ಷ ಕಳೆದರೂ ಇನ್ನೂ ಧರ್ಮಗುರು ಬಸವಣ್ಣನವರ ವ್ಯಕ್ತಿತ್ವ-ಸಾಧನೆ-ಸಂದೇಶ ಅರಿಯಲಾರದ ಮಂದ ಬುದ್ಧಿಯ ಅನುಯಾಯಿಗಳು ವಿಪುಲ ಸಂಖ್ಯೆಯಲ್ಲಿದ್ದಾರೆ. ಅವರ ಅಸಮರ್ಥತೆಗಾಗಿ ನಾವೇಕೆ ಗೊಂದಲಕ್ಕೊಳಗಾಗುತ್ತೇವೆ ? ಸಾಮಾಜಿಕ ಚಿಂತನೆ ಮೈಗೂಡಿಸಿಕೊಂಡಿರುವುದರಿಂದಲೇ ಕ್ರೈಸ್ತ-ಇಸ್ಲಾಂ-ಸಿಖ್ ಧರ್ಮಗಳು ಜಾಗತಿಕ ಬಲಿಷ್ಠ ಶಕ್ತಿಗಳಾಗಿ ಮುನ್ನಡೆಯುತ್ತಿರುವುದು

ಚಿನ್ಮಯ ಮಿಷನ್ ಸ್ವಾಮಿಗಳು ಹೇಳಿದ ಆತ್ಮ ಶಾಂತಿಯ ಗುರಿ, ಲಿಂಗಾಯತ ಧರ್ಮದ ಮೊದಲ ಮೆಟ್ಟಿಲು, ಆತ್ಮ ಶಾಂತಿ, ಸಮಾಜ ಶಾಂತಿ, ರಾಷ್ಟ್ರ ಶಾಂತಿ, ವಿಶ್ವಶಾಂತಿ ನಾಲ್ಕೂ ಅಗತ್ಯ. ಎಲ್ಲಕ್ಕೂ ಮಿಗಿಲಾದುದು ಆತ್ಮವು ಯಾವ ಮೂಲದಿಂದ ಬಂದಿದೆಯೋ ಆ ಮೂಲವನ್ನು ಸೇರುವ ಗುರಿ, ಆ ಮೂಲವೇ ಸೃಷ್ಟಿಕರ್ತ, ಲಿಂಗದೇವ. ಜೀವನ (Soul's)ಚಕ್ರವು ಪೂರ್ತಿಯಾಗುವುದೇ ಆತ್ಮವು ಪರಮಾತ್ಮನನ್ನು ಸೇರಿದಾಗ.

ವನದ ಕೋಗಿಲೆ ಮನೆಗೆ ಬಂದರೆ ತನ್ನ ವನವ ನೆನೆವುದ ಮಾಣ್ಬುದೆ ?
ಮಲೆಯ ಗಜವು ಮನೆಗೆ ಬಂದರೆ ತನ್ನ ಮಲೆಯ ನೆನೆವುದ ಮಾಣ್ಬುದೇ ?
ಲಿಂಗದೇವನ ಶರಣರು ಮರ್ತ್ಯಕ್ಕೆ ಬಂದಡೆ
ತಮ್ಮ ಆದಿ ಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ ? -ಬ.ವ.ದೀ 1357

ಆ ಸೃಷ್ಟಿಕರ್ತ ಮಹಾದಾನಿ, ವಿಶ್ವವನ್ನು ಸೃಷ್ಟಿಸಿ ಕೊಟ್ಟವನು, ಸಚರಾಚರಗಳನ್ನು, ಮಾನವ ಜೀವವನ್ನು ಕೊಟ್ಟ ದಾತ. ಅವನನ್ನು ಕುರಿತು ಧ್ಯಾನಿಸುವುದಷ್ಟೇ ಸಾಲದು, ಪ್ರಾರ್ಥಿಸಬೇಕು, ಪೂಜಿಸಲೂ ಬೇಕು. ಒಂದನೆಯದಾಗಿ ಹಿಂದುಗಳಲ್ಲಿ ಪೂಜಿಸಲು ದೇವರ ಕುರುಹಾಗಿ ಏನೂ ಇಲ್ಲ ; ಇರುವುವೆಲ್ಲ ದೇವತೆಗಳೆ ! ಪೂಜಿಸುವ ವಿಧಾನವೂ ಬಲು ಯಾಂತ್ರಿಕ. ಸೇಶ್ವರವಾದಿ, ದಾರ್ಶನಿಕ ಹೃದಯಿ ಧರ್ಮಪಿತ ಬಸವಣ್ಣನವರು ಕೊಟ್ಟ ಇಷ್ಟಲಿಂಗವೂ ಅಷ್ಟೇ ಸುಂದರ ಮತ್ತು ಪರಿಪೂರ್ಣ. ಪೂಜೆಯ ವಿಧಾನವೂ ಅಷ್ಟೇ ಮಾರ್ದವತೆಯಿಂದ ಕೂಡಿದ ಭಾವಸಂಪತ್ತಿನ ಪ್ರಕ್ರಿಯೆ. ಹೀಗಾಗಿ ಲಿಂಗಾಯತ ಧರ್ಮದಲ್ಲಿ ಬರುವ ಇಷ್ಟಲಿಂಗಾರಾಧನೆ ಅತ್ಯಂತ ಮಧುರವಾದ ಒಂದು ಅನುಭವ. ಇದರಲ್ಲಿ 5 ಹಂತಗಳಿವೆ. 1. ಅಷ್ಟವಿಧಾರ್ಚನೆ (ಭಕ್ತಿಯೋಗ) 2. ಲಿಂಗಸ್ತವನ (ಜ್ಞಾನ ಯೋಗ) 3. ಲಿಂಗಾನುಸಂಧಾನ (ತ್ರಾಟಕಯೋಗ) ಲಿಂಗಧ್ಯಾನ (ರಾಜಯೋಗ/ಕುಂಡಲಿನಿಯೋಗ)5. ಲಿಂಗ ಕರುಣೋದಕ-ಕರುಣಪ್ರಸಾದ. ಇದು ಪರಿಪೂರ್ಣ ಪೂಜಾ ವಿಧಾನ. ಇಲ್ಲಿ ಭಕ್ತಿ ಇದೆ. ಜ್ಞಾನವಿದೆ, ಯೋಗವಿದೆ, ಧ್ಯಾನವಿದೆ. ಇಂಥ ಒಂದು ಪೂಜಾ ವಸ್ತುವು ಇಷ್ಟಲಿಂಗವು ಸಮತಾವಾದಿ ಸಮಾಜ ಕಟ್ಟುವ ಸೂತ್ರವಾಗಿದೆ. ಕೂದಲು ವಿಪುಲವಾಗಿದ್ದವಳು, ಚೆಂದಾಗಿ ಮುಡಿಕಟ್ಟುವಳು ; ಇಲ್ಲದಾಕೆ ಏನು ಮಾಡಬೇಕು ? ಕೂದಲು ಇಲ್ಲದಾಕೆ ಅಪಹಾಸ್ಯ ಮಾಡಿದರೆ ಕೂದಲಿದ್ದವಳು ಬೇಸರಪಡಬೇಕಿಲ್ಲ, ಇಲ್ಲದವಳ ಬಗ್ಗೆ ಮರುಕಪಡಬೇಕು ಅಷ್ಟೆ ! ಬನ್ನಿರಿ ಆರಾಧಿಸೋಣ ; ಬದುಕನ್ನು ಕೊಟ್ಟ ಸೃಷ್ಟಿಕರ್ತನನ್ನು ದಿನನಿತ್ಯ ಕೃತಜ್ಞತೆಯಿಂದ ಕೊಂಡಾಡಿ ಆರಾಧಿಸೋಣ, ಆನಂದಿಸೋಣ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಸಂಪಾದಕೀಯ-2 : ಧ್ರುವೀಕರಣಕ್ಕಿದು ಸೂಕ್ತ ಕಾಲ

ಹೊಸ ಸಹಸ್ರಮಾನದ ಮೊದಲ ವರ್ಷ 2001ರಲ್ಲಿ ನಡೆಯುವ ಜನಗಣತಿಯು ಮತ್ತು ಸಹಸ್ರಮಾನದ ಮೊದಲ ವರ್ಷವು ಬಸವ ಯುಗಕ್ಕೆ ನಾಂದಿ ಹಾಡಬೇಕು. ಬಸವ ಧರ್ಮದ ವನವಾಸ ಮತ್ತು ಅಜ್ಞಾತವಾಸಕ್ಕೆ ಪೂರ್ಣವಿರಾಮ ಹಾಕಬೇಕು. ಪಾಂಡವರಿಗೆ ಜೂಜಾಟದಲ್ಲಿ ಸೋತಾಗ ಕೌರವರು 12ವರ್ಷ ವನವಾಸ ಮತ್ತು 1 ವರ್ಷ ಅಜ್ಞಾತವಾಸ ವಿಧಿಸಿದರಂತೆ. ಆಗ ಪಾಂಡವರು 12 ವರ್ಷ ವನಗಳಲ್ಲಿ ತಿರುಗಿ, ನಂತರ ವಿವಿಧ ವೇಷ ತೊಟ್ಟು 1 ವರ್ಷ ಕಾಲ ಕಳೆದರಂತೆ. ಧರ್ಮಪಿತ ಬಸವಣ್ಣನವರ ಗಡಿಪಾರು, ಲಿಂಗೈಕ್ಯದ ನಂತರ ವಚನ ವಾಙ್ಮಯವು ವನವಾಸವನ್ನು ಅನುಭವಿಸಿತು. 1904ರಲ್ಲಿ ವೀರಶೈವ ಮಹಾಸಭೆಯು ಸ್ಥಾಪನೆಯಾದ ನಂತರ ಹಾನುಗಲ್ ಕುಮಾರ ಸ್ವಾಮಿಗಳು ಮತ್ತು ಅವರ ಮಾತಿನಲ್ಲಿ ವಿಶ್ವಾಸವಿಟ್ಟು ನಂಬಿದ ಲಿಂಗಾಯತ ಗಣ್ಯರಿಂದಾಗಿ ಸುಮಾರು 96 ವರ್ಷಕಾಲ ವೀರಶೈವ-ಶೈವದ ವೇಷ ತೊಟ್ಟು ಅಜ್ಞಾತವಾಸ ಮಾಡಿ, ಹಿಂದು ಧರ್ಮದ ಒಳಗಣ ಒಂದು ಜಾತಿಯಾಗಿ (ರಾಜಪುತ್ರನಾದ ಭೀಮ ಅಡಿಗೆ ಭಟ್ಟನಾದಂತೆ) ಅಜ್ಞಾತವಾಸವನ್ನು ಅನುಭವಿಸಿದೆ. ಈ ಅಜ್ಞಾತವಾಸದ ದಾಸ್ಯದ ವೇಷ ಕಳಚುವ ಸೂಕ್ತ ಕಾಲ ಇದೀಗ ಲಿಂಗಾಯತ ಧರ್ಮಕ್ಕೆ ಬಂದಿದೆ.

ಇಷ್ಟಲಿಂಗವನ್ನು ಕಟ್ಟಿಕೊಂಡೂ ಸಹ ಏಕರೂಪದ ನಂಬಿಕೆ, ಆಚಾರಕ್ಕೆ ಬದ್ಧರಾಗದ ಮಠಾಧೀಶರು, ಅವರನ್ನು ನಂಬಿದ ಅನುಯಾಯಿಗಳು, ಯಾವ ಮಠಾಧೀಶರ, ಸಂಘಟನೆಯ ಸಂಪರ್ಕವೇ ಇಲ್ಲದ ಸಮುದಾಯ ಲಿಂಗಾಯತ ಸಮಾಜದಲ್ಲಿದೆ. ಇಲ್ಲಿ 4 ಬಗೆಯ ವಿಚಾರಗಳನ್ನು ಕಾಣಬಹುದು.

1. ಮಂತ್ರಪುರುಷ ಬಸವಣ್ಣನವರನ್ನೇ ಧರ್ಮಗುರುವೆಂದು ನಂಬಿಕೊಂಡು ಶುದ್ಧ ಶರಣ ಪಥದಲ್ಲಿ ನಡೆಯುವ ನಿಜ ಲಿಂಗಾಯತರು.

2. ಶ್ರೀ ಗುರು ಬಸವಲಿಂಗಾಯನಮಃ ಮಂತ್ರವನ್ನು ಸುಮ್ಮನೇ ತಗುಲಿ ಹಾಕಿಕೊಂಡು ಸಹ, ಧರ್ಮಗುರು ಬಸವಣ್ಣನವರಲ್ಲಿ, ಅವರ ತತ್ವಗಳಲ್ಲಿ ನಿಷ್ಠೆ ಇಲ್ಲದವರು, ಬಹುದೇವತೋಪಾಸಕರೂ ಆದ ಕೆಲವು ವಿರಕ್ತರು ಮತ್ತು ಅವರ ಅನುಯಾಯಿಗಳು.

3. ಮೂಗು ಕೊಟ್ಟಂತಹ ದೇವನನ್ನು ಮರೆತು ಮೂಗುತಿ ಕೊಟ್ಟವರನ್ನು ಹೊಗಳುವಂತಹ, ಧರ್ಮವನ್ನು ಕೊಟ್ಟ ಬಸವ ಗುರುವನ್ನು ಮರೆತು ವೀರಶೈವ ಮಹಾಸಭೆ- ಶಿವಯೋಗ ಮಂದಿರ ಹುಟ್ಟು ಹಾಕಿ ಲಿಂಗಾಯತ ಸಮಾಜದ ಶುಚಿತ್ವವನ್ನೇ ಕೆಡಿಸಿದ ಹಾನುಗಲ್ ಕುಮಾರ ಸ್ವಾಮಿಗಳವರ ಅಭಿಮಾನಿಗಳಾದ ಮಠಾಧೀಶರು ಮತ್ತು ವೀರಶೈವ ಮಹಾಸಭೆ ಎಂಬ ಸಂಸ್ಥೆ ; ಇವರಿಗೆ ಧರ್ಮಗುರು ಬಸವಣ್ಣನವರು ನಗಣ್ಯ.

''ವೀರಶೈವ ಮಹಾಸಭೆ ನಮ್ಮ ಧರ್ಮದ ಸಂಸ್ಥೆ, ಇಲ್ಲೇಕೆ ಧರ್ಮಗುರು ಬಸವಣ್ಣನವರಿಗೆ ಗೌರವವಿಲ್ಲ ? ಎಂದು ನಮಗೂ ಬಹಳ ಕಾಲ ಸಂದೇಹವಿತ್ತು. ಅವರು ನಡೆಸುವ ಸಭೆಗಳಲ್ಲಿ ಧರ್ಮಪಿತರ ಫೋಟೋ ಇಡುತ್ತಿದ್ದುದೇ ಇಲ್ಲ. ಯಾರಾದರೂ ಆಕ್ಷೇಪಿಸಿದಾಗ ಆಮಂತ್ರಣವಿಲ್ಲದ ಅತಿಥಿ (uninvited guest) ಯನ್ನಾಗಿ ಭಾವಿಸಿ ಎಲ್ಲಾದರೂ ಒಂದು ಚಿಕ್ಕ ಭಾವಚಿತ್ರ ತಂದು ಇಡುತ್ತಿದ್ದರು. ಈಗ ಅವರ ಅಂತರಂಗವು ಬಯಲಾಗುತ್ತಿದೆ.

ಆದ್ದರಿಂದ ನಿಜ ಲಿಂಗಾಯತರಾದ ಬಸವಭಕ್ತರು ಅನ್ಯ ಪಂಥೀಯರಾದ ವೀರಶೈವವಾದಿಗಳ ಸಭೆಗೆ ಹೋಗಿ, ಅಲ್ಲಿ ಬಸವ ಭಾವಚಿತ್ರ ಇಲ್ಲ ಎಂದು ತಕರಾರು ಮಾಡಿ ಒತ್ತಾಯಪೂರ್ವಕವಾಗಿ ಇಡಿಸುವ ಬದಲು ಅಂಥ ಸಭೆಗಳಿಗೆ ಹೋಗದಿರುವುದೇ ಸೂಕ್ತ. ಉದ್ದೇಶಪೂರ್ವಕವಾಗಿ ಮರೆತಿದ್ದರೂ

ನೀವು ಕೇಳಿದಾಗ ಅವರು ವಿರೋಧಿಸವೆ, ಫೋಟೋ ಸಿಗಲಿಲ್ಲ ಎನ್ನುವರು. ನಿಮ್ಮ ಮನೆಯಲ್ಲಿ ಒಂದು ಭವ್ಯ ಸಮಾರಂಭ ಇರುತ್ತದೆ ಎಂದುಕೊಳ್ಳಿ, ಆಗ ನಿಮ್ಮ ತಾಯಿ-ತಂದೆಯರನ್ನು ನಿರ್ಲಕ್ಷಿಸಿ ಹರಕು ಬಟ್ಟೆ ಉಡಿಸಿ ಅಗೌರವಿಸುವಿರಾ ? ಹಾಗೆ ಅಗೌರವಿಸುವುದಾದರೆ ನಿಮ್ಮ ತಾಯಿ-ತಂದೆ ಬಗ್ಗೆ ನಿಮಗೆ ತಿರಸ್ಕಾರವಿದೆ ಎಂದರ್ಥ. ಗೌರವವಿದ್ದರೆ ಮೊದಲು ಅವರನ್ನು ಗೌರವಿಸುತ್ತೀರ ಅಲ್ಲವೆ ?

4. ಪಂಚ ಪೀಠದವರು, ಅವರ ಶಾಖಾ ಮಠಗಳು, ಅವರ ಅನುಯಾಯಿಗಳು ಇವರು ಪೂರ್ಣ ಪ್ರಮಾಣದ ಶ್ರೀ ಗುರು ಬಸವಣ್ಣನವರ ವಿರೋಧಿಗಳು ಮತ್ತು ಬಸವ ತತ್ವದ ವಿರೋಧಿಗಳು.

ಈಗ ನಾಲ್ಕನೆಯ ವರ್ಗದವರ ಬಗ್ಗೆ ಯಾರೂ ಚಿಂತಿಸುವ ಕಾರಣವಿಲ್ಲ. ಏಕೆಂದರೆ ಅವರಿಗೆ ಧರ್ಮಗುರು ಬಸವಣ್ಣನವರ ವಿಚಾರಧಾರೆ ಕಂಡರೆ ಅಲರ್ಜಿ. ಅವರ ಅಡ್ಡಪಲ್ಲಕ್ಕಿ, ಆಡಂಬರ, ಬಂಗಾರದ ಕಿರೀಟ, ವಜ್ರದುಂಗುರ, ಪಟ್ಟೆ ಪೀತಾಂಬರ ಕಂಡರೆ ನಮಗೂ ಅಲರ್ಜಿ. ಬೆವರು ಸುರಿಸುತ್ತ ಭಾರವಾದ ಅಡ್ಡಪಲ್ಲಕ್ಕಿ ಹೊರುವ ಕಾರ್ಮಿಕರನ್ನು ಕಂಡು (ಅವರ ಭಕ್ತರು ಶ್ರೀಮಂತರಿದ್ದರೂ ತಾವು ಪಲ್ಲಕ್ಕಿ ಹೊರದೆ ಕೂಲಿಕೊಟ್ಟು ಹೊರಿಸುತ್ತಾರೆ) ಬಸವ ಭಕ್ತರ ಕರುಳು ಚುರುಗುಟ್ಟುತ್ತದೆ.

ಇನ್ನು ಮೊದಲನೆಯ ವರ್ಗವೆಂದರೆ ಅಪ್ಪಟ ಬಸವ ಭಕ್ತರು, ಶರಣ ಪಥಿಕರು. ಪ್ರಥಮ ಬಾರಿಗೆ ಲಿಂ॥ ಡಿ.ಸಿ.ಪಾವಟೆಯವರು ವಾಯುವಿಹಾರಕ್ಕೆ ಬಂದಾಗ ಧಾರವಾಡದಲ್ಲಿ ಭೇಟಿಯಾದರು. ಆಗ ಅವರು ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಕಂಡು ಒಂದು ಪ್ರಸಂಗವನ್ನು ನೆನಪಿಸಿಕೊಂಡರು. ''ಶಿವಯೋಗ ಮಂದಿರದಲ್ಲಿ ಪೂಜ್ಯ ಸ್ವಾಮಿಗಳು ಒಂದು ಭಾಷಣ ಮಾಡಿದರು ಸಣ್ಣ ವಯಸ್ಸು, ಭಾರೀ ತೇಜಸ್ವಿಗಳು. ಅವರು ಕೊಟ್ಟ ಒಂದು ಉದಾಹರಣೆ ನನಗೆ ಇನ್ನೂ ಅಚ್ಚಳಿಯದೆ ಉಳಿದಿದೆ'' ಎಂದು ವಿವರಿಸಿದರು. ಅಂದು ಅಪ್ಪಾಜಿ ಹೇಳಿದ್ದರಂತೆ, ''ಗುರು-ವಿರಕ್ತರು ಲಿಂಗಾಯತ ಸಮಾಜದ ಎರಡು ಕಣ್ಣುಗಳಿದ್ದಂತೆ. ಎರಡೂ ಸಹಕರಿಸಿದರೆ ತಾನೇ ನೋಟ? ಸಮಾಜವು ತನ್ನ ಹೆಗಲಿನ ಮೇಲೆ ಇಬ್ಬರನ್ನೂ ಕೂರಿಸಿಕೊಂಡಿದೆ. ಬಲ ಭುಜದ ಮೇಲೆ ವಿರಕ್ತರು ಎಡಭುಜದ ಮೇಲೆ ಗುರುವರ್ಗದವರು. ಇವರು ಇಬ್ಬರೂ ಮೇಲೆ ಕುಳಿತೇ ಜಗಳವಾಡಿದರೆ ಆಗ ಲಿಂಗಾಯತ ಸಮಾಜ ಇಬ್ಬರನ್ನು ಕೈಬಿಟ್ಟು ತಾನು ಸಾಗಬೇಕಾಗುತ್ತದೆ.'' ಶರಣ ಡಿ.ಸಿ.ಪಾವಟೆಯವರು ಭೇಟಿಯಾದಾಗಲೊಮ್ಮೆ ಈ ಉದಾಹರಣೆ ನೆನಪಿಸಿಕೊಳ್ಳುತ್ತಿದ್ದರು.

ಎಂಥಾ ಪ್ರಸಾದವಾಣಿ, ಭವಿಷ್ಯವಾಣಿ ! ಅದು ಈಗ ನಿಜವಾಗುತ್ತಿದೆ. ವಿರಕ್ತರು (ಕೇವಲ ಕೆಲವರನ್ನು ಬಿಟ್ಟರೆ ಉಳಿದವರು) ಧರ್ಮಗುರು ಬಸವಣ್ಣನವರನ್ನು ನಿಧಾನವಾಗಿ ಕೈಬಿಡುತ್ತಿದ್ದಾರೆ ; ಗುರುವರ್ಗದವರು ಎಂದೋ (ಕಾಶೀನಾಥ ಶಾಸ್ತ್ರಿಗಳ ಕಾಲದಲ್ಲೇ) ಕೈಬಿಟ್ಟಿದ್ದಾರೆ. ಈಗ ಪ್ರಾಜ್ಞ ಸಮಾಜ ಈ ಇಬ್ಬರನ್ನು ಕೈಬಿಟ್ಟು ಧರ್ಮಗುರುವನ್ನು ತಲೆಯ ಮೇಲೆ ಹೊತ್ತು ಅವರು ಕೊಟ್ಟ ವಚನ ಸಾಹಿತ್ಯದ ಕೈ ದೀವಿಗೆಯ ಬೆಳಕಿನಲ್ಲಿ ನಡೆಯುವುದು ಅನಿವಾರ್ಯವಾಗುತ್ತಿದೆ. ನಾನು 1976ರಲ್ಲಿ ಇಂಗ್ಲೆಂಡಿಗೆ ಹೋದಾಗ ಅಲ್ಲಿ ಜೆಸ್ಯೂಟ್ ಚಳುವಳಿ ಆರಂಭವಾಗಿತ್ತು ಒಳ್ಳೆಯ ಜನಪ್ರಿಯತೆ ಪಡೆಯುತ್ತಿತ್ತು. ಅವರ ಉದ್ದೇಶ ಹೀಗಿತ್ತು. ಕ್ರೈಸ್ತರಲ್ಲಿ ಬರುವ ಕೆಥೋಲಿಕ್ ಚರ್ಚ್ ಸಮಾಜದ ಮೇಲೆ, ಹಿಡಿತ ಸಾಧಿಸಿ ರಾಜರು, ಶ್ರೀಮಂತರುಗಳ ಹಿಡಿತದಲ್ಲಿ ಸಿಕ್ಕಿ ಶೋಷಣೆಯ ಸಾಧನವಾದಾಗ ಪ್ರಾಟೆಸ್ಟೆಂಟ್ ಚಳುವಳಿ ಮಾರ್ಟಿನ್ ಲೂಥರನಿಂದ ಪ್ರಾರಂಭವಾಯಿತು. ಜನ ಸಾಮಾನ್ಯರ ಹಿತದೃಷ್ಟಿಯಿಂದ ಅದು ಪ್ರಾರಂಭವಾದರೂ ನಂತರ ಬಲಗೊಂಡು ಬೆಳೆದು ರಾಜಕೀಯ ಬಲ ಪಡೆದಾಗ ಅದೂ ಕೆಲವೆಡೆ ಶೋಷಣೆಯ ಸಾಧನವಾಯಿತು. ಹೀಗಾಗಿ ಕೆಥೋಲಿಕ್ ಚರ್ಚ್ ಬೇಡ, ಪ್ರಾಟೆಸ್ಟೆಂಟ್ ಚರ್ಚೂ ಬೇಡ ನೇರವಾಗಿ ಜೇಸಸ್‌ನ ಆರಾಧಕರಾಗೋಣ ಎಂಬ ಒಂದು ಗಾಳಿ ಬಹಳವಾಗಿ ಎದ್ದಿತ್ತು. ಲಿಂಗಾಯತ ಸಮಾಜದ ಹಿನ್ನೆಲೆಯಲ್ಲೂ ಈ ವಿಚಾರಧಾರೆ ಬಹಳ ಪ್ರಸ್ತುತ ಎನಿಸುತ್ತದೆ. ವಿರಕ್ತವರ್ಗ-ಗುರುವರ್ಗದವರು ಬಸವ

Digitalized by e-Sahithya Documentation Forum
Sponsored by Sarayu Foundation Trust

ತತ್ವಕ್ಕೆ ವಿಮುಖರಾಗಿ ನಡೆಯುತ್ತಿರುವುದನ್ನು ನೋಡಿದರೆ ಲಿಂಗಾಯತರು ಧರ್ಮಗುರು ಬಸವಣ್ಣನವರನ್ನು ದೃಢವಾಗಿ ನಂಬಿ ವಚನಸಾಹಿತ್ಯದ ಬೆಳಕಿನಲ್ಲಿ ನೇರವಾಗಿ ಸಾಗುವುದೇ ಸುರಕ್ಷಿತ ಎನ್ನಿಸುತ್ತಿದೆ.

ಆದ್ದರಿಂದ ಭಿನ್ನಭಿನ್ನ ವಿಚಾರಗಳ ಜನರು, ಮನಸ್ಸಿನಲ್ಲಿ ಒಂದಿಟ್ಟುಕೊಂಡು ಹೊರಗಡೆ ಒಂದು ನುಡಿಯುವ ವೀರಶೈವ ಮಹಾಸಭೆಯಂತಹ ಸಂಸ್ಥೆ, ಇಂಥವರೆಲ್ಲರೂ ಲಿಂಗಾಯತ ಸಮಾಜದೊಳಗೆ ಇದ್ದುಕೊಂಡು ವೀರಶೈವ-ಲಿಂಗಾಯತಗಳನ್ನು ಸಮೀಕರಿಸಿ ನಿರಂತರವಾಗಿ ಗೊಂದಲದಲ್ಲೇ ಸಮಾಜವನ್ನು ಕೊಂಡೊಯ್ಯುವ ಕುತಂತ್ರ ನಡೆಸಿರುವಾಗ ಧ್ರುವೀಕರಣ ಅತ್ಯಂತ ಸೂಕ್ತ ಪ್ರಕ್ರಿಯೆ. ನಾವು ಕೊಟ್ಟಿರುವ ನಾಲ್ಕು ವರ್ಗಗಳಲ್ಲಿ ಮೊದಲನೆಯ ವರ್ಗವು ಲಿಂಗಾಯತ ಧರ್ಮವನ್ನು ನಿಷ್ಠೆಯಿಂದ ಅನುಕರಿಸುವಂಥದ್ದು ಉಳಿದೆಲ್ಲ 3 ಗುಂಪುಗಳು ವೀರಶೈವದ ವೇಷವನ್ನು ಧರಿಸುವುದೇ ಸೂಕ್ತ. ಈ ಲೇಖನ ಓದಿದ ಮೇಲೆ ನಿಮ್ಮ ಕಣ್ಣೆದುರಿಗೆ ತೋರಿ ಬರುವ ಮಠಗಳು, ಗುರುಗಳು, ಸಂಘ ಸಂಸ್ಥೆಗಳನ್ನು, ವ್ಯಕ್ತಿಗಳನ್ನು ನೀವೇ ವರ್ಗೀಕರಿಸಿರಿ.

ಒಂದು ಧರ್ಮಕ್ಕೆ ಒಂದೇ ನಂಬಿಕೆ, ಆಚಾರ, ವಿಚಾರ, ಸೈದ್ಧಾಂತಿಕ ನಿಲುವು ಧಾರ್ಮಿಕ ಸಂವಿಧಾನ, ಸಾಮಾಜಿಕ ವ್ಯವಸ್ಥೆ ಇರಬೇಕು. ಅದು ಬಿಟ್ಟು ಹಿಂದು ಧರ್ಮದಂತೆ ಪರಸ್ಪರ ವಿರೋಧಾಭಾಸವಾದ ವಿಚಾರಧಾರೆ ಇರುವುದು ಸರಿಯಲ್ಲ. ಒಂದು ಕುಟುಂಬದವರು ತಮ್ಮ ಮನೆಯ ಒಂದು ಸಂತೋಷ ಕೂಟದಲ್ಲಿ ಆನಂದಿಸುತ್ತಿರುತ್ತಾರೆ ಎಂದುಕೊಳ್ಳೋಣ. ಆಗ ನೆರೆಮನೆಯವರು ಬಂದು ಗೊಂದಲವನ್ನು ಎಬ್ಬಿಸುವುದು ಎಷ್ಟು ನೋವಿನ ಪ್ರಸಂಗವೋ ಹಾಗೆ ಅಪ್ಪ ಬಸವಣ್ಣನ ಅಮ್ಮ-ವಚನ ಸಾಹಿತ್ಯದ ಮಕ್ಕಳಾದ ಲಿಂಗಾಯತ ಧರ್ಮೀಯರು ತಮ್ಮದೇ ಆದ ಪೂಜೆ-ಪ್ರಾರ್ಥನೆಗಳಿಂದ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತರನ್ನು ಕೊಂಡಾಡುತ್ತಲಿರುವಾಗ ವೀರಶೈವವಾದಿಗಳೆಂಬ ನೆರೆಮನೆಯವರು ವಿನಾಕಾರಣ ಪ್ರವೇಶಿಸಿ ಗೊಂದಲ ಉಂಟು ಮಾಡುವುದು ಸೂಕ್ತವಲ್ಲ. ಇಂಥ ಗೊಂದಲ ಇಲ್ಲದ್ದರಿಂದ ಕ್ರೈಸ್ತ, ಮುಸ್ಲಿಂ, ಸಿಖ್, ಬೌದ್ಧ, ಜೈನ ಸಮಾಜಗಳು ಸುಂದರ ಬಂಧುರವಾಗಿ ಬೆಳೆದಿವೆ. ಈ ಹಿನ್ನೆಲೆಯಲ್ಲಿ ಧ್ರುವೀಕರಣ ಅಗತ್ಯ ಮತ್ತು ಆಕರ್ಷಣೀಯ ಕೇಂದ್ರಶಕ್ತಿ ಧರ್ಮಗುರು ಬಸವಣ್ಣನವರು ಎಂಬುದನ್ನು ಮನದಟ್ಟು ಮಾಡಿಕೊಳ್ಳೋಣ.

ಬ್ರಾಡ್ ಬೀಮನ್ ಎಂಬ ಆಂಗ್ಲ ವಿದ್ವಾಂಸರು ಹೇಳುತ್ತಾರೆ. ''ಲಿಂಗಾಯತರು ಇನ್ನೂ ಅನೇಕ (ಭಾರತೀಯ) ಜನಾಂಗಗಳಂತೆ ಜಗತ್ತಿನ ತುಂಬೆಲ್ಲ ಚದುರಿದ್ದಾರೆ. ಇನ್ನಿತರ ಜನಾಂಗಗಳು ಲಿಂಗಾಯತರಷ್ಟು ಚೆನ್ನಾಗಿ ಸಂಘಟಿತರಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಲಿಂಗಾಯತರು ಬಸವಣ್ಣನವರು ಕೊಟ್ಟ ವೈಶಿಷ್ಟ್ಯಪೂರ್ಣವಾದ ಸಿದ್ಧಾಂತದಿಂದ ಬಂಧಿತರಾಗಿದ್ದಾರೆ.'' (ಇದರ ಆಂಗ್ಲ ಉಕ್ತಿಗೆ ಇದೇ ಸಂಚಿಕೆಯ ಪುಟ 14 ನೋಡಿರಿ.)

ಹೀಗೆ ಧರ್ಮಗುರು ಬಸವಣ್ಣನವರೇ ಆತ್ಮ, ಪ್ರಾಣ, ಹೃದಯ, ಮೆದುಳು ಎಲ್ಲವೂ ಆಗಿರುವಂತಹ ಒಂದು ಜನಾಂಗವಾಗಿ ಲಿಂಗಾಯತ ಸಮಾಜ ಧ್ರುವೀಕರಣಗೊಳ್ಳುವುದು ಎಂದಿಗಿಂತಲೂ ಇಂದು ಅಗತ್ಯವಾಗಿದೆ.

-ಮಾತಾಜಿ

ಧರ್ಮಪಿತ ಬಸವಣ್ಣನವರ ವಚನಗಳು-ಅಮಿತ, ಅನುಪಮ, ಅನುಭವದ ಅಮರ ವಾಣಿಗಳು

ವಿಶೇಷ ಸೂಚನೆ : ಕಲ್ಯಾಣ ಕಿರಣವು ಬಹಳ ಮಹತ್ವಪೂರ್ಣ ಲೇಖನಗಳಿಂದ ಜನಜಾಗೃತಿ ಮಾಡುವುದರಿಂದ ಚಂದಾದಾರರಲ್ಲದಿದ್ದರೂ ಅನೇಕರಿಗೆ ಪತ್ರಿಕೆ ಕಳಿಸಲಾಗುತ್ತಿದೆ. ಅದರ ಆಜೀವ ಸದಸ್ಯತ್ವ (500 ರೂ) ಅಥವಾ ವಾರ್ಷಿಕ ಸದಸ್ಯತ್ವ (50 ರೂ.) ಕಳಿಸಿ ಕೊಡಿರಿ.

ಚಿ.ಮೂ ಅವರ ವೀರಶೈವ ಧರ್ಮ ಚರಿತ್ರೆ-ಭಾಗ 2

ವಿಮರ್ಶೆ ಭಾಗ-4

-ಮಾತಾಜಿ

(ಡಾ॥ ಎಂ. ಚಿದಾನಂದಮೂರ್ತಿಯವರ ಲೇಖನ, ಕನ್ನಡ ಪ್ರಭಾದ ಮೇ ದಿ.24 ಮತ್ತು 25ರ ಸಂಚಿಕೆಯಲ್ಲಿ ಪ್ರಕಟವಾಯಿತು. ಆ ಲೇಖನದ ಎರಡು ಭಾಗಗಳನ್ನು ಕ್ರಮವಾಗಿ ಜುಲೈ ಮತ್ತು ಆಗಸ್ಟ್ ಕಲ್ಯಾಣಕಿರಣಗಳಲ್ಲಿ ಪ್ರಕಟಿಸಲಾಯಿತು. ಹಾಗೆಯೇ ಅವುಗಳ ವಿಮರ್ಶೆಯನ್ನು ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಸಂಚಿಕೆಗಳಲ್ಲಿ ಮಾಡಲಾಗಿದೆ. ಅಪೂರ್ಣವಾಗಿದ್ದರಿಂದ ಈಗ ಮುಂದುವರಿಸಲಾಗಿದೆ. ಚಿದಾನಂದ ಮೂರ್ತಿಯವರ ವಿಚಾರಗಳಿಗಾಗಿ ಆಗಸ್ಟ್-2000 ಕಲ್ಯಾಣ ಕಿರಣ ನೋಡಿರಿ.)

ಆಗಮಗಳು : ಪಂಚ ಪೀಠಗಳು :

ವೀರಶೈವರ ಪಂಚಪೀಠಗಳ ಮೂಲ ಆಚಾರ್ಯರು ಐದು ಪ್ರಸಿದ್ಧ ''ಹಿಂದೂ'' ದೇವಾಲಯಗಳ ಶಿವಲಿಂಗಗಳಿಂದ ಮೂಡಿ ಬಂದವರು ಎಂಬ ಶ್ರದ್ಧೆ ಇದೆ. ಕಾಶಿಯ ವಿಶ್ವೇಶ್ವರ ಲಿಂಗದಿಂದ ಮೂಡಿ ಬಂದ ವಿಶ್ವಾರಾಧ್ಯರ ಪೀಠವು ಹಿಂದೂ ಮಠವಲ್ಲವೆಂಬುದು ಹಾಸ್ಯಾಸ್ಪದ. ಕಲ್ಕತ್ತೆಯ ಶ್ರೀ ರಾಮಕೃಷ್ಣಾಶ್ರಮವು ತನ್ನದು ಹಿಂದೂ ಸಂಸ್ಥೆಯಲ್ಲವೆಂದು ಘೋಷಿಸಿಕೊಂಡದ್ದನ್ನು ಸರ್ವೋನ್ನತ ನ್ಯಾಯಾಲಯ ತಿರಸ್ಕರಿಸಿತು. ಪಂಚಪೀಠಗಳ ಪೂಜ್ಯರು ವೀರಶೈವರು ಹಿಂದೂಗಳೆಂಬುದನ್ನು ಈಗಾಗಲೇ ಬಹಿರಂಗವಾಗಿ ಸಾರಿದ್ದಾರೆ. ಆ ಪರಂಪರೆಯ ಗುರುಗಳೆಲ್ಲ ಶಿವಾಗಮಗಳಷ್ಟೇ ವೇದಗಳನ್ನೂ ಗೌರವಿಸುತ್ತಾರೆ. ಆಗಮಗಳು ಶಿವನ ವಾಣಿಯೆಂದೂ ವೇದಗಳು ಶಿವನ ಉಸಿರೆಂದೂ ಆಗಮಗಳೇ ಹೇಳಿವೆ. - ಎರಡಕ್ಕೂ ವಿರೋಧವೇ ಇಲ್ಲ. ಶಿವಾಗಮಗಳಲ್ಲಿ ವೀರಶೈವರನ್ನು ''ಲಿಂಗಿ ಬ್ರಾಹ್ಮಣ'' ''ವೀರಶೈವ ದ್ವಿಜ''ರೆಂದು ಕರೆದಿವೆ. ಅದನ್ನೇ ಹಿಂದೆ ಹೇಳಿದ ಪರಳಿ, ಬನವಾಸಿ ಮೊಕದ್ದಮೆಗಳಲ್ಲಿ ವೀರಶೈವ ವಿದ್ವಾಂಸರು ಎತ್ತಿ ಹಿಡಿದರು. ಇಂದಿನ ಹಿಂದೂ ಸಮಾಜದ ಜೀವನವು ಕರ್ಮಪ್ರಧಾನ ಯಜ್ಞ, ಯಾಗ ಕೇಂದ್ರೀಕೃತವಾಗಿರುವುದಕ್ಕಿಂತ ಮೂರ್ತಿ ಪ್ರತಿಷ್ಠಾಪನೆ, ದೇವತಾ ಪೂಜೆಗಳನ್ನು ಪ್ರತಿಪಾದಿಸುವ ಆಗಮಗಳ ಭಕ್ತಿಮಾರ್ಗ ಕೇಂದ್ರಿತವೆಂಬುದನ್ನು ನೆನೆದರೆ ಆಗಮಗಳ ಮಹತ್ವವು ವಿದಿತವಾಗುತ್ತದೆ. (ಇದು ಹಿಂದೂ ಧರ್ಮದ ಎಲ್ಲ ಪ್ರಭೇದಗಳಿಗೂ -ವೈಷ್ಣವಕ್ಕೂ ಅನ್ವಯವಾಗುತ್ತದೆ.) -ಡಾ॥ ಚಿ.ಮೂ.

ಡಾ॥ ಚಿ.ಮೂ. ಅವರಿಗೆ ವಿವೇಕೋದಯವಾದಂತೆ ತೋರುತ್ತಿದೆ. ಇದರಿಂದ ಸಂತೋಷವೆನಿಸಿ ಅವರನ್ನು ಅಭಿನಂದಿಸುತ್ತೇವೆ. ಈ ನಮ್ಮ ಸಂತೋಷವನ್ನು ಇನ್ನಷ್ಟು ವರ್ಧಿಸಿದೆ. ದಿ22-9-2000ರಂದು ಶ್ರೀಯುತರು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆ. ಅದರ ಪೂರ್ಣಪಾಠವನ್ನು ಇದೇ ಸಂಚಿಕೆಯ 39-40ನೆಯ ಪುಟಗಳಲ್ಲಿ ಕೊಡಲಾಗಿದೆ.

ವೀರಶೈವ ಪಂಚಪೀಠದವರಾಗಲಿ, ಶ್ರೀ ರಾಮಕೃಷ್ಣ ಮಿಷನ್‌ನವರಾಗಲಿ ತಾವು ಹಿಂದೂಗಳು ಅಲ್ಲ ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದ. ಆದ್ದರಿಂದ ಅಖಿಲ ಭಾರತ ವೀರಶೈವ ಮಹಾಸಭೆಯವರು ಡಾ॥ ಚಿ.ಮೂ.ಅವರ ಹಿತೋಪದೇಶದಿಂದಲಾದರೂ ಬುದ್ಧಿ ಕಲಿಯಲಿ ಮತ್ತು ಉಭಯತರೂ ಅಂದರೆ ವೀರಶೈವ ಮಹಾಸಭೆ ಮತ್ತು ಡಾ॥ ಚಿ.ಮೂ. ವಚನ ಸಾಹಿತ್ಯೋಕ್ತ ಧರ್ಮದ ತಂಟೆಗೆ ಬರದೆ ಇರಲಿ.

1. ಡಾ॥ ಚಿ.ಮೂ ಹೇಳುವಂತೆ ವೀರಶೈವ ಪಂಚಪೀಠಗಳು ಐದು ಸ್ಥಾವರಲಿಂಗಗಳೊಡನೆ (ಆ ಸ್ಥಾನಗಳಲ್ಲಿ ಇವರಿಗೆ ಉಜ್ಜನಿ ಹೊರತು ಪಡಿಸಿ ಯಾವ ಮಹತ್ವದ ಸ್ಥಾನವಿಲ್ಲದೆ ಅವೆಲ್ಲವೂ ಬ್ರಾಹ್ಮಣ ಪೂಜಾರಿಗಳಿಂದ ಪೂಜಿಸಲ್ಪಡುತ್ತಿದ್ದರೂ) ನಿಕಟ ಸಂಬಂಧ ಹೊಂದಿವೆ. ಆದರೆ ಧರ್ಮಗುರು

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣನವರ ಲಿಂಗಾಯತವು ಸ್ಥಾವರಲಿಂಗಗಳ ಪೂಜೆಯೊಡನೆ ಪೂರ್ಣವಾಗಿ ಸಂಬಂಧ ಕಳಚಿಕೊಂಡಿದೆ.

ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ ;
ತ್ರೇತ್ರಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ ;
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ ;
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ ; ಈ ನಾಲ್ಕು ಮೂಲಸ್ಥಾನ,
ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೇ ಲಿಂಗವೆಂದು ನಂಬಿದೆ, ಲಿಂಗದೇವಾ.

ಎಂಬ ವಚನದಲ್ಲಿ ಎರಡು ಅರ್ಥಗಳಿವೆ. 1. ಒಂದು ಜಾಗದಲ್ಲಿ ನೆಲೆ ನಿಂತ ಸ್ಥಾವರಲಿಂಗಕ್ಕಿಂತ ಅಂಗದ ಮೇಲೆ ನೆಲೆ ನಿಂತ ಜಂಗಮ ಲಿಂಗವಾದ ಇಷ್ಟಲಿಂಗದ ಆರಾಧನೆ ಶ್ರೇಷ್ಠ. ಇದು ಸ್ವಾವಲಂಬನೆಯನ್ನು ಕಲಿಸುತ್ತದೆ. ಪುರೋಹಿತನ ಮಧ್ಯಸ್ಥಿಕೆಯನ್ನು ತೊಡೆದು ಹಾಕುತ್ತದೆ.

2. ಜಂಗಮ ಲಿಂಗವೆಂದರೆ, ಜ್ಞಾನಿಗಳಾದ ಪವಿತ್ರಾತ್ಮರು, ನಡೆದಾಡುವ ಚೇತನಗಳಾದ ಮಾನವರು, ಇವರ ಸೇವೆಯು ತೀರ್ಥಕ್ಷೇತ್ರ ಯಾತ್ರೆಗಿಂತಲೂ ಶ್ರೇಷ್ಠ.

ವೀರಶೈವ ಪಂಚಪೀಠದವರು ಸ್ಥಾವರಲಿಂಗಗಳೊಡನೆ ನಿಕಟ ಸಂಬಂಧ ಹೊಂದಿ ರುದ್ರಾಭಿಷೇಕ ಮಾಡುತ್ತ, ರಾಮಕೃಷ್ಣ ಮಿಷನ್‌ನವರು ಕಾಳಿಯ ಪೂಜೆ ಮಾಡುತ್ತ ಹೋಮ ಹವನ ಮಾಡುತ್ತ ಹಿಂದುಗಳಲ್ಲ ಎಂದು ಕೆಲವು ಲಾಭಕ್ಕಾಗಿ ಹೋರಾಟ ಮಾಡಹೋದರೆ ಸೋಲುವುದು ಮಾತ್ರವಲ್ಲ, ಅಪ್ರಾಮಾಣಿಕತೆಯ ತುಟ್ಟ ತುದಿಯನ್ನು ಏರಿದಂತಾಗುತ್ತದೆ. ಚಿ.ಮೂ ಹೇಳುವಂತೆ ವೈದಿಕ ಪ್ರಧಾನ ಗುಂಪುಗಳು ಕರ್ಮಪ್ರಧಾನ ಯಜ್ಞ-ಯಾಗ ಕೇಂದ್ರೀಕೃತವಾಗಿದ್ದರೆ, ಪಂಚಪೀಠದವರು ಇನ್ನಿತರ ಶೈವ ಮಾರ್ಗಿಗಳು ಮೂರ್ತಿ ಪ್ರತಿಷ್ಠಾಪನೆ, ದೇವತಾಪೂಜೆ, ರುದ್ರಾಭಿಷೇಕ ನಿರತರಾಗಿದ್ದಾರೆ. ಈ ಎರಡೂ ಅಂದರೆ ವೇದಾಧಾರಿತ ವೈದಿಕ ಸಂಪ್ರದಾಯ, ಆಗಮಾಧಾರಿತ ಶೈವ ಸಂಪ್ರದಾಯಗಳು ಹಿಂದೂ ಪರಂಪರೆಯ ಅವಿಭಾಜ್ಯ ಅಂಗ. ಆದರೆ ಧರ್ಮಪಿತ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವೇ ಬೇರೆ. ಇಲ್ಲಿ ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳು ಹೇಳುವುದನ್ನು ನೆನಪಿಸಿಕೊಳ್ಳಬಹುದಾಗಿ. 'Buddha and Basava' ಎಂಬ ಪುಸ್ತಕದಲ್ಲಿ ಏಕದೇವೋಪಾಸನೆಯ ಬಗ್ಗೆ ಹೀಗೆ ಬರೆಯುತ್ತಾರೆ.

"Basava was an advocate of strict monotheism. He was against Vedic priest-craft as well as Agamic temple-craft. He supported neither the naturalism of the Vedas nor the polytheism of the Agamas ; but maintained a consistent monotheism. The stringent cry of Basava that there is but one God who is to be saught not in the temples nor in the rituals, but in the righteous acts of man was enthusiastically hailed by the then distressed multitudes ; that the heart is common to all and the God seated in the heart is one in all. This was the monotheism preached by Basava. The accomodating nature, the democratic policy and the monotheistic creed all combined to make the new faith, progressive and popular religion of the masses. If it is true that the religious consciousness of any country or community reflects itself into political system, the absence

of a strictly monotheistic creed in India crystalled into the absence of a centralised state.

ಧರ್ಮಪಿತ ಬಸವಣ್ಣನವರು ವೈದಿಕ ಧರ್ಮದ ಪುರೋಹಿತಶಾಹಿ, ಶೈವದ ದೇವಾಲಯ ಶಾಹಿ, ವೇದಗಳ ಪ್ರಕೃತಿ ಪೂಜೆ, ಆಗಮಗಳ ಬಹುದೇವತೋಪಾಸನೆ ಖಂಡಿಸಿ ಲಿಂಗಾಯತ ಧರ್ಮವನ್ನು ಕೊಟ್ಟಿರುವುದರಿಂದ ಲಿಂಗಾಯತವು ತನ್ನ ತತ್ತ್ವ, ಆಚಾರ, ವಿಚಾರಗಳಿಂದ ಅವೈದಿಕ, ಅಹಿಂದು ಧರ್ಮ ಎನ್ನಿಸಿಕೊಳ್ಳಲು ಸಾಧ್ಯವಾಗಿದೆ.

ಚಿ.ಮೂ. ಅವರ ಲೇಖನಕ್ಕೆ ಸಂಬಂಧಿಸಿದಂತೆ ಪಂಚಪೀಠಗಳ ಇತಿಹಾಸದ ಪ್ರಸ್ತಾಪವು ವಿಷಯಾಂತರಕ್ಕೆ ಕಾರಣವಾಗುವುದಾದರೂ ಕೆಲವೊಂದು ವಿಚಾರಗಳನ್ನು ಓದುಗರ ಮುಂದಿಡುತ್ತೇನೆ. ಲಿಂಗಾಯತ ಧರ್ಮವು ಸ್ಥಾಪನೆಗೊಂಡುದು ಧರ್ಮಪಿತ ಬಸವಣ್ಣನವರಿಂದ. ಲಿಂಗದೇವನ ಪರಿಕಲ್ಪನೆ ನೀಡಿ ಆ ಲಿಂಗದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಪೂಜಿಸಲು ಕಲಿಸಿ, ಮೊಟ್ಟ ಮೊದಲನೆಯ ಇಷ್ಟಲಿಂಗವನ್ನು ಧರಿಸಿ ಮೊದಲನೆಯ ಲಿಂಗಾಯತರಾದರು ಧರ್ಮಪಿತ ಬಸವಣ್ಣನವರು. ಎರಡನೆಯ ಲಿಂಗಾಯತಳು ಧರ್ಮಪಿತರಿಂದ ದೀಕ್ಷೆ ಪಡೆದ ಅಕ್ಕನಾಗಲಾಂಬಿಕೆ. ನಂತರ ಈ ಧರ್ಮವು ಜಾತಿ ಮತ ಭೇದವಿಲ್ಲದೆ ಇಷ್ಟಲಿಂಗ ಎಂಬ Nucleus (ಜೀವಕಣಗಳ ಕೇಂದ್ರಭಾಗ) ಸುತ್ತ ಬೆಳೆಯಿತು. ವೀರಶೈವವು ಬಸವ ಪೂರ್ವದ ಶೈವ ಪ್ರಭೇದ. ಶೈವದ ಮೂಲ ಪುರುಷ ಯೋಗಿರಾಜ ಶಿವ. ಶೈವದೊಳಗಣ ಒಂದು ಶಾಖೆ ವೀರಶೈವ. ಇದಕ್ಕೆ ಯಾರೂ ಸ್ಥಾಪಕರಿಲ್ಲ. ಕಲಿಯುಗ, ದ್ವಾಪರ, ತ್ರೇತ್ರಾಯುಗ, ಕೃತಯುಗಗಳಲ್ಲಿ ಲಿಂಗೋದ್ಭವರಾಗಿ ಜನಿಸಿ, ವೀರಶೈವವನ್ನು ರೇಣುಕಾದಿ ಆಚಾರ್ಯರು ಸ್ಥಾಪಿಸಿದರು ಎಂಬುದೊಂದು ಕಟ್ಟುಕಥೆ. ಇದರ ಜನಕರು ಕೈಲಾಸವಾಸಿ ಕಾಶೀನಾಥ ಶಾಸ್ತ್ರಿಗಳು. ಇದಕ್ಕೆ ಪ್ರೇರಕರು ರಂಭಾಪುರಿ ಮಠ ಮತ್ತು ಹೂಲಿ (ಬೆಳಗಾಂವ ಜಿಲ್ಲೆ)ಯ ಮಠಾಧೀಶರುಗಳು. ಇವರುಗಳು ಹೇಳುವ 5 ಸ್ಥಾವರಲಿಂಗಗಳಲ್ಲಿ ಕಾಶಿ, ಕೇದಾರ, ಶ್ರೀಶೈಲ ಮತ್ತು ಕೊಲ್ಲಿಪಾಕಿಗಳಲ್ಲಿ ಈ ಪೀಠದ ಸ್ವಾಮಿಗಳಿಗೆ ವಿಶೇಷ ಪೂಜೆಯ ಹಕ್ಕಿಲ್ಲ. ಒಂದು ವೇಳೆ ಸಂಭವಿಸಿರುವುದೇ ಆದರೆ ಜಡವಾದ ಸ್ಥಾವರಲಿಂಗದಲ್ಲಿ ಉದ್ಭವವಾಗುವುದು ಒಂದು ಅಸಾಮಾನ್ಯ ಘಟನೆ ಅಂಥ ಘಟನೆ ನಡೆದು ಲಿಂಗೋದ್ಭವರಿಂದ ಆ ಪೀಠಗಳು ಸ್ಥಾಪನೆಯಾಗಿದ್ದರೆ ಆ ಪೀಠಗಳವರಿಗೆ ಎಂಥ ಸಾಂಪ್ರದಾಯಿಕ ಗೌರವ ಅಲ್ಲಿ ದೊರೆಯಬೇಕಿತ್ತಲ್ಲವೆ ? ಎಲ್ಲ ಮಾನವರಂತಿದ್ದ ಮಾದರಸ-ಮಾದಲಾಂಬಿಕೆಯೆಂಬ ತಾಯಿತಂದೆಗಳ ಹೊಟ್ಟೆಯಲ್ಲಿ ಹುಟ್ಟಿದ ಧರ್ಮಗುರು ಬಸವಣ್ಣನವರು ; ಅವರ ಧರ್ಮವನ್ನು ಸ್ವೀಕಾರ ಮಾಡಿ ನಡೆದ ಶಿವಯೋಗಿ ಸಿದ್ಧರಾಮೇಶ್ವರ, ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ನೆಲೆಸಿದ್ದ, ಸಂಚರಿಸಿದ ಕಡೆಯಲ್ಲೆಲ್ಲ ಲಿಂಗಾಯತ ಧರ್ಮ-ಸಮಾಜಗಳು ಹಬ್ಬಿ ಹಸರಿಸಿದವು. ಲಿಂಗೋದ್ಭವರು ಇದ್ದಿದ್ದರೆ ಅವರು ಉದ್ಭವವಾದ ಮತ್ತು ಸಂಚರಿಸಿದಲ್ಲೆಲ್ಲ ಅವರು ಸ್ಥಾಪಿಸಿದುದೇ ನಿಜವಿದ್ದರೆ ಅವರ ವೀರಶೈವವು ಏಕೆ ಬೆಳೆಯಲಿಲ್ಲ ?

ಧರ್ಮಪಿತ ಬಸವಣ್ಣನವರು ಎಲ್ಲ ಜಾತಿ ಮತ ಪಂಥಗಳವರಿಗೆ ಇಷ್ಟಲಿಂಗ ದೀಕ್ಷೆ ತನ್ಮೂಲಕ ಸಮಾನತೆ ನೀಡಿದರು. ಇಂಥ ಸಮಾನತೆ, ಪ್ರಗತಿಪರ ಚಿಂತನೆ, ಏಕದೇವೋಪಾಸನೆ ಲಿಂಗಾಯತ ಧರ್ಮದ ಮಹತ್ವಪೂರ್ಣ ತತ್ತ್ವಗಳು. ಪಂಚ ಆಚಾರಗಳು ಹೀಗಿವೆ :

1. ಲಿಂಗಾಚಾರ - ಇಷ್ಟಲಿಂಗನಿಷ್ಠೆ ಸಹಿತವಾದ ಏಕದೇವೋಪಾಸನೆ
2. ಸದಾಚಾರ - ಕಾಯಕ-ದಾಸೋಹ ಸೂತ್ರಗಳಿಂದ ಕೂಡಿದ ಆರ್ಥಿಕ ಸಮಾನತೆ
3. ಶಿವಾಚಾರ - ಜಾತಿವರ್ಣವರ್ಗರಹಿತ ಸಾಮಾಜಿಕ ಸಮಾನತೆ
4. ಗಣಾಚಾರ - ಅನ್ಯಾಯ, ಅಸತ್ಯ, ಶೋಷಣೆಯ ವಿರುದ್ಧ ಅಹಿಂಸಾತ್ಮಕ ಹೋರಾಟ

Digitalized by e-Sahithya Documentation Forum
Sponsored by Sarayu Foundation Trust

5. ಭೃತ್ಯಾಚಾರ - ದಾಸೋಹಂ ಭಾವದಿಂದ ಸಮಾಜ ಸೇವೆ

ಈ ಐದು ತತ್ವಗಳು ರಾಷ್ಟ್ರೀಯ-ಸಾಮಾಜಿಕ ನೀತಿಗಳು. ಇವಕ್ಕೂ ಪಂಚಪೀಠದ ಸ್ವಾಮಿಗಳ ಆಚರಣೆಗೂ ಅಜ-ಗಜಾಂತರ ವ್ಯತ್ಯಾಸ. ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳು ಬಸವ ಆದಿ ಪ್ರಮಥರ ಅಪ್ಪಟ ಕೊಡುಗೆ. ಆದರೂ ಕೆಲವು ವೀರಶೈವವಾದಿಗಳು ಸಂಸ್ಕೃತ ಶ್ಲೋಕಗಳನ್ನು ಬರೆದು ತೂರಿಸಿ, ಬಸವ ಪೂರ್ವದಲ್ಲಿ ಇವಿದ್ದವು ಎಂದು ಸಾಧಿಸಲು ಹೋಗುತ್ತಾರೆ. ಒಂದು ವೇಳೆ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳಿಂದ ಕೂಡಿದ ಒಂದು ತತ್ವ ಸಮುಚ್ಛಯ ಇದ್ದಿದ್ದೇ ಆಗಿದ್ದರೆ ಅವು ಕರ್ನಾಟಕದಲ್ಲಿ, ಅದೂ ಪಂಚಪೀಠದ ಅಭಿಮಾನಿ ವಿದ್ವಾಂಸರ ಹೆಸರಲ್ಲಿ ಮುದ್ರಣಗೊಂಡ ಪುಸ್ತಕಗಳಲ್ಲಿ ಮಾತ್ರ ಇರದೆ, ಆಂಧ್ರ, ತಮಿಳುನಾಡು, ಕೇರಳಗಳಲ್ಲಿ ಸಹ ಇರಬೇಕಿತ್ತು. ಹೋಗಲೀ, ಪಾಪ ಆ ಜನರಿಗೆ ಇಂಥ ಪ್ರಗತಿಪರ ಸೂತ್ರಗಳು ತಿಳಿಯದಷ್ಟು ಹಿಂದುಳಿದಿದ್ದಾರೆ. ಎಂದೇ ಭಾವಿಸಿದರೂ ಕನಿಷ್ಠ ಪಕ್ಷ 5 ಜನ ಆಚಾರ್ಯರ ಹೆಸರಾದರೂ ಪಳೆಯುಳಿಕೆಯಂತೆ (fossil) ತಿಳಿದಿರಬೇಕಿತ್ತು. ಯಾವುದೇ ಮೂಲೆಯಲ್ಲಿರುವ ಅತ್ಯಂತ ಹಿಂದುಳಿದ ಸ್ಥಿತಿಯ ಲಿಂಗಾಯತನಿಗೆ ತನ್ನ ಧರ್ಮ, ಇಷ್ಟಲಿಂಗದ ಮಹತ್ವ ತಿಳಿದಿರದಿದ್ದರೂ ತನ್ನ ಧರ್ಮಗುರು ಬಸವಣ್ಣ ಎಂಬುದು ತಿಳಿದಿರುತ್ತದೆ.

ಆದರೆ ಆ ನಂಬಿಕೆ ತಿಳುವಳಿಕೆಯನ್ನು ಕೆಡಿಸುವ ಪ್ರಯತ್ನವು 1904ರಲ್ಲಿ ವೀರಶೈವ ಮಹಾಸಭೆ ಸ್ಥಾಪನೆಯಾದಾಗಿನಿಂದ, ಪಂಚಪೀಠದವರಿಂದ ಚಿ.ಮೂ. ಡಾ|| ಕೆ.ಎಂ.ಶಿವಕುಮಾರಸ್ವಾಮಿ ಮುಂತಾದ ಬರಹಗಾರರಿಂದ ನಿರಂತರವಾಗಿ ಸಾಗಿದೆ. ಇಷ್ಟು ಆದರೂ ಧರ್ಮಗುರು ಬಸವಣ್ಣನವರ ಅಚ್ಚಳಿಯದ ಪ್ರಭಾವವನ್ನು ಕೆಡಿಸಲು ಇಂಥ ಮಹನೀಯರುಗಳಿಗೆ ಸಾಧ್ಯವಾಗುತ್ತಿಲ್ಲ. ಓರ್ವ ಬ್ರಿಟಿಷ್ ವಿದ್ವಾಂಸರು ತೀರಾ ಇತ್ತೀಚೆಗೆ ಬರೆದ The Diaspora of Lingayats of Karnataka ಎಂಬ ಪ್ರಬಂಧದಲ್ಲಿ ಬರೆದಿರುವ ಈ ಮಾತುಗಳು ಜ್ವಲಂತ ಸಾಕ್ಷಿಯಾಗಿವೆ.

The new dimension for the Lingayats as other communities of India is their own Diaspora throughout the world. Other communities of India may not organize themselves as thoroughly as the Lingayats. The answer may be because Lingayats are bound together by a unique set of philosophies, set forth by Basava. -Brad Beaman

ಪಂಚ ಆಚಾರ್ಯರು 5 ಲಿಂಗಗಳಲ್ಲಿ ಹುಟ್ಟಿರುವುದು ಅಸಂಭವ ; ಆದರೂ ಹುಟ್ಟಿದರು ಎಂದುಕೊಳ್ಳುವಾ. ಆದರೆ ಇವರ ಮಾತೃಭಾಷೆಗಳು ಯಾವುವು ? ಕೇದಾರ-ಗಡವಾಲ್, ಹಿಂದಿ, ಕಾಶಿ-ಹಿಂದಿ, ಶ್ರೀಶೈಲ-ತೆಲುಗು, ಕೊಲ್ಲಿಪಾಕಿ-ತೆಲುಗು, ಉಜ್ಜನಿ-ಕನ್ನಡ ಇರಬೇಕಿತ್ತು. ಇವರು ಸ್ಥಾಪಿಸಿದ ವೀರಶೈವದ ಆಚಾರ-ವಿಚಾರಗಳನ್ನು ಆಯಾ ಭಾಷೆಗಳಲ್ಲೇಕೆ ಬರೆಯಲಿಲ್ಲ? ಎಲ್ಲರೂ ಸೇರಿ ಒಂದೇ ಸಿದ್ಧಾಂತ ಶಿಖಾಮಣಿಯನ್ನು ಶಿವಯೋಗಿ ಶಿವಾಚಾರ್ಯನಿಗೆ ಹೇಳಿ ಬರೆಸಿದರೆ ? ರೇಣಾಕಾಚಾರ್ಯರು ಅಗಸ್ತ್ಯಮುನಿಗೆ ಕೃತಯುಗದಲ್ಲಿ ಹೇಳಿದ ಮಾತನ್ನು ಕಲಿಯುಗದ 16ನೇ ಶತಮಾನದ ಶಿವಯೋಗಿ ಶಿವಾಚಾರ್ಯ ಕೇಳಿಸಿಕೊಂಡು ಬರೆಯಲು ಯಾವುದಾದರೂ ರೆಕಾರ್ಡೆಡ್ ಕೆಸೆಟ್ಟು ಸಿಕ್ಕವೆ ? ಶಂಕರಾಚಾರ್ಯರಿಗೆ ರೇಣುಕಾಚಾರ್ಯರು ದೀಕ್ಷೆ ಕೊಟ್ಟರೆಂದು ಪಂಚಪೀಠದ ಗುರುಗಳು, ಅವರ ಅಭಿಮಾನಿಗಳು ಹೇಳಿಕೊಳ್ಳುತ್ತಾರಲ್ಲ, ಕೃತಯುಗದ ರೇಣುಕಾಚಾರ್ಯರು 8ನೆಯ ಶತಮಾನದ ಶ್ರೀ ಶಂಕರಾಚಾರ್ಯರಿಗೆ ಹೇಗೆ ಕೊಟ್ಟರು ? ಒಂದು ವೇಳೆ ಇವರು ವಾದಿಸುವಂತೆ

ಇಷ್ಟಲಿಂಗದಾತ ಬಸವಣ್ಣನವರಿಗೆ ಮೊದಲೇ ಇಷ್ಟಲಿಂಗ ಇದ್ದಿದ್ದು. ಅದನ್ನು ರೇಣುಕರು ಶಂಕರಾಚಾರ್ಯರಿಗೆ ಕೊಟ್ಟಿದ್ದರೆ ಇವರು ಅದನ್ನೇಕೆ ಧರಿಸಿಕೊಳ್ಳಲಿಲ್ಲ. ಕೊಟ್ಟ ಗುರುಗಳನ್ನು ಕೊಂಡಾಡಲಿಲ್ಲ? ಗುರು ಕೊಟ್ಟ ಇಷ್ಟಲಿಂಗ ತ್ಯಜಿಸಿ ಲಿಂಗದ್ರೋಹಿಯಾದರೆ? ದೀಕ್ಷೆ ಕೊಟ್ಟ ಗುರುವನ್ನು ಸ್ತುತಿಸದೆ, ಕೃತಜ್ಞತೆ ತೋರದೆ ಗುರುದ್ರೋಹಿಯೂ ಆದರೆ ?

ಬಸವಪೂರ್ವದಲ್ಲಿ ಈ 5 ಜನ ಆಚಾರ್ಯರುಗಳು ಇದ್ದುದೇ ಆದರೆ ಬೇಡರ ಕಣ್ಣಪ್ಪ, ಸಿರಿಯಾಳ ಸೆಟ್ಟಿಯಂಥವರನ್ನು ಸ್ಮರಿಸಿ ಕೊಂಡಾಡಿದ ಬಸವಣ್ಣನವರು ಆಚಾರ್ಯರನ್ನೇಕೆ ಸ್ಮರಿಸಲಿಲ್ಲ, ಸ್ತುತಿಸಲಿಲ್ಲ. ಸರಿ, ಧರ್ಮಗುರು ಬಸವಣ್ಣನವರು ಸ್ವಾರ್ಥಿಗಳಾಗಿ, ತಾವೇ ಕೀರ್ತಿಶಾಲಿಗಳಾಗಬೇಕೆಂದು ಬಯಸಿ 5 ಜನ ಆಚಾರ್ಯರನ್ನು ಉದ್ದೇಶ ಪೂರ್ವಕವಾಗಿ ಸ್ಮರಿಸಿಲ್ಲ ಎಂದು ಊಹಿಸೋಣ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದೆಲ್ಲ ಶರಣರು ಬಂದರಲ್ಲ, ಅವರಾದರೂ ಧರ್ಮಪಿತ ಬಸವಣ್ಣನವರ ಸ್ವಾರ್ಥವನ್ನು (?) ಬಯಲಿಗೆಳೆದು ಖಂಡಿಸಿ, ಐದು ಜನ ಆಚಾರ್ಯರನ್ನು ಕೊಂಡಾಡುತ್ತಿದ್ದರಲ್ಲ ? ಯಾವುದೂ ಸಾಹಿತ್ಯ ಕೊಡದೆ ಅದೆಂತು ಅವರುಗಳು ಆಚಾರ್ಯರು, ಸ್ಥಾಪಕರು ಆಗಲು ಸಾಧ್ಯ ?

ಈಗ ಸುಮಾರು 20 ವರ್ಷಗಳ ಹಿಂದೆ ರೇಣುಕಾದಿ ಪಂಚಾಚಾರ್ಯರು ಕಾಲ್ಪನಿಕ ವ್ಯಕ್ತಿಗಳೇ ವಿನಾ ಐತಿಹಾಸಿಕ ವ್ಯಕ್ತಿಗಳಲ್ಲ ಎಂದು ಶ್ರಮಪಟ್ಟು ವಾದಿಸುವ ಅವಶ್ಯಕತೆ ಇತ್ತು. ಈಗ ಅದೇನು ಬಲವಾಗಿ ಉಳಿದಿಲ್ಲ. ರೇವಣಸಿದ್ಧರು, ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಮರುಳಸಿದ್ಧರು, ಏಕೋರಾಮ, ಮಾತ್ರ ಐತಿಹಾಸಿಕ ವ್ಯಕ್ತಿಗಳು ಎಂಬುದು ಮತ್ತು ಇವರಲ್ಲಿ ಕೆಲವರು ಧರ್ಮಪಿತ ಬಸವಣ್ಣನವರ ಸಮಕಾಲೀನರು ಮತ್ತು ಕೆಲವರು ನಂತರದವರು ಎಂಬುದು ಖಚಿತವಾಗಿದೆ. ಸುಮಾರು ಒಂದು ಶತಮಾನದ ಅವಧಿಯಲ್ಲಿ ಪಂಚಪೀಠದವರು ಮತ್ತು ಅವರ ಅಭಿಮಾನಿ ಬರಹಗಾರರು ಹುಟ್ಟಿಸಿದ್ದ ಗೊಂದಲದ ಸಿಕ್ಕುಗಳು ಒಂದೊಂದೇ ಬಿಡುತ್ತಲಿರುವದು ಸಮಾಧಾನಕರ ಸಂಗತಿ.

ಡಾ|| ಚಿ.ಮೂ ಅವರು ಹೀಗೆ ಹೇಳುತ್ತಾರೆ : ಸಿದ್ಧಗಂಗೆ, ಸುತ್ತೂರು, ಹುಬ್ಬಳ್ಳಿಯ ಮಠಗಳಂತೆ ಇಂದಿನ ವೀರಶೈವ ಮಠಗಳು ನೂರಾರು "ವೇದ ಆಗಮ ಸಂಸ್ಕೃತ ಪಾಠಶಾಲೆ" ನಡೆಸುತ್ತಿವೆ. ಹಿಂದಿನ ಯಾವುದೇ ವೀರಶೈವ ಪುರಾಣ ತೆಗೆದರೂ, ಶಿವನ ಕೈಲಾಸವು ವೇದ ಘೋಷದಿಂದ ತುಂಬಿದ್ದಿತೆಂಬ ವರ್ಣನೆ ದೊರಕುತ್ತದೆ. ವೇದಾಧ್ಯಯನವು ಸ್ತ್ರೀಯರಿಗೂ ಶೂದ್ರರಿಗೂ ಕೂಡದು ಎಂಬ ಬ್ರಾಹ್ಮಣರ ಪ್ರತಿಪಾದನೆಯನ್ನು ಉಲ್ಲಂಘಿಸಿದ ವೀರಶೈವರು ಇಬ್ಬರಿಗೂ ವೇದಾಧ್ಯಯನ ಮಾಡಿಸಿದರು ; ದಲಿತರಿಗೂ ಮಾಡಿಸಿದರು. ಕ್ರಿ.ಶ. ೧೮೬೦ರಲ್ಲಿದ್ದ ಗುಬ್ಬಿಯ ಮಲ್ಲಣ್ಣನು ಅಸ್ಪೃಶ್ಯರಿಗೆ ವೇದಗಳನ್ನು ಕಲಿಸಿದ ವಿಷಯ ದಾಖಲಾಗಿದೆ. ೧೮೭೮ರಲ್ಲಿ ಆರಂಭವಾದ ಮೈಸೂರಿನ ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣೇತರರಿಗೆ ಪ್ರವೇಶ ಸಿಕ್ಕಿದ್ದು ೧೯೫೦ರಲ್ಲಿ ; ಅದೂ ಮುಖ್ಯವಾಗಿ ವೀರಶೈವರ ಹೋರಾಟದಿಂದ. ೧೯೧೭ರಲ್ಲಿ ಸಿದ್ಧಗಂಗೆಯ ವೇದ, ಆಗಮ, ಸಂಸ್ಕೃತ ಪಾಠಶಾಲೆ ವೀರಶೈವರಿಗಾಗಿ ಆರಂಭವಾದರೂ ಎಲ್ಲ ವರ್ಗದವರಿಗೂ ತನ್ನ ಬಾಗಿಲನ್ನು ತೆರೆದಿಟ್ಟಿತು. ಸಿದ್ಧಗಂಗೆಯ ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿಯವರ ಸ್ಪಷ್ಟ ಅಭಿಪ್ರಾಯಗಳು ಗಮನಾರ್ಹ- ವೀರಶೈವ ಧರ್ಮ ಹಿಂದೂ ಧರ್ಮದ ಅರ್ಥಾತ್ ಶೈವ ಧರ್ಮದ ಒಂದು ಶಾಖೆ. ಅನೇಕ ರಾಜಕಾರಣಿಗಳಿಗೆ ಹಿಂದೂ ಧರ್ಮದ ಜಾಯಮಾನವೇ ಗೊತ್ತಿಲ್ಲ". ಪಂಚ ಪೀಠಗಳ ಪರವಾಗಿ ಹೇಳಿಕೆ ನೀಡಿರುವ ಪೂಜ್ಯ ಶ್ರೀ ರಂಭಾಪುರಿ ಸ್ವಾಮೀಜಿಯವರು "ವೀರಶೈವರು ಹಿಂದೂಗಳೇ". ವಿರಕ್ತ ಪೀಠ, ಗುರು ಪೀಠಗಳ ಇಬ್ಬರು ಪ್ರಮುಖ ಪೀಠಾಧ್ಯಕ್ಷರ ಅಭಿಪ್ರಾಯಗಳನ್ನು ಎಲ್ಲರೂ ಗಮನಿಸಬೇಕು.

Digitalized by e-Sahithya Documentation Forum
Sponsored by Sarayu Foundation Trust

ನಿಜವಾಗಿ ಹೇಳಬೇಕೆಂದರೆ ಈ ವಾಕ್ಯವೃಂದದಲ್ಲಿರುವ ಅನೇಕ ವಿಚಾರಗಳಿಗೆ ನಾನು ಉತ್ತರ ಕೊಡುವುದು ಏನೂ ಅಗತ್ಯವಿಲ್ಲ. ಏಕೆಂದರೆ ಈ ಮಾತುಗಳೆಲ್ಲ ವೀರಶೈವಕ್ಕೆ ಸಂಬಂಧಿಸಿದವು. ಲಿಂಗಾಯತ ಧರ್ಮಕ್ಕಲ್ಲ. ಆದರೆ ಕೆಲವು ಮುಗ್ಧ ಲಿಂಗಾಯತರು ವೀರಶೈವವನ್ನೇ ಲಿಂಗಾಯತ ಎಂದು ತಿಳಿದು ಮೋಸಕ್ಕೆ ಒಳಗಾಗುತ್ತಿರುವುದರಿಂದ ನಾವು ಸತ್ಯ ಸಂಗತಿ ಬರೆಯಬೇಕಾಗಿದೆ. ಓರ್ವ ವೈದ್ಯರು ಔಷಧದ ಚೀಟಿ ಬರೆದುಕೊಡುತ್ತಾರೆ. ಮೆಡಿಕಲ್ ಷಾಪಿಗೆ ವ್ಯಕ್ತಿ ಹೋಗುತ್ತಾನೆ. ಅವನ ಬಳಿ ಆ ವೈದ್ಯರು ಬರೆದುಕೊಟ್ಟ ಔಷಧಿ ಇಲ್ಲ. ಬೇರೆ ಇದೆ. ಅವನ ಹತ್ತಿರ ಇರುವ ಔಷಧಿ ಬಹಿಷ್ಕೃತವಾದವು. ಅವನು ನ್ಯಾಯವಾಗಿ ಮಾರಬಾರದು. ಆದರೆ ತನ್ನ ಸರಕು ಖರ್ಚಾಗಲೆಂದು ಅವನು ಮಾರುತ್ತಾನೆ. ''ತೊಗೊಳ್ಳಿ ಸ್ವಾಮಿ, ವೈದ್ಯರು ಬರೆದುಕೊಟ್ಟುದು ಇಲ್ಲೆಲ್ಲೂ ಸಿಗಲ್ಲ. ಇದೂ ಅದೇ, ಬೇರೆ ಕಂಪನಿಯದು ಅಷ್ಟೆ! ಎಂದು ಆ ಮುಗ್ಧರಿಗೆ ಮಾರಿ, ತನ್ನ ಮಾಲು ಖರ್ಚು ಮಾಡಿ ದುಡ್ಡು ಮಾಡಿಕೊಳ್ಳುತ್ತಾನೆ. ಅದು ದಿನಾಂಕ ಮುಗಿದು ಹೋದ ಮತ್ತು ಬಹಿಷ್ಕೃತ ಮಾಲು. ಆಗ ಸರಕಾರ ಪ್ರಕಟಣೆ ಹೊರಡಿಸಿ ಜನರಿಗೆ ಮೋಸ ಹೋಗದೆ ಇರಲು ಹೇಳುತ್ತದೆ. ಈಗ ನಮ್ಮದು ಅದೇ ಕರ್ತವ್ಯವಾಗಿದೆ.

ಧರ್ಮಗುರು ಬಸವಣ್ಣನವರು ವಚನ ವಾಙ್ಮಯ ಎಂಬ ಔಷಧ ಚೀಟಿಯಲ್ಲಿ ಅಷ್ಟಾವರಣ, ಪಂಚಾಚಾರ, ಷಟಸ್ಥಲ ಇವೆಲ್ಲ ಭವರೋಗಕ್ಕೆ ಮದ್ದು, ಗುರು-ಲಿಂಗ-ಜಂಗಮ ಸಮಾಜ ಕಟ್ಟುವ ಸೂತ್ರ ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ತತ್ತ್ವಜ್ಞಾನ-ಸಾಹಿತ್ಯ-ಆಚರಣೆ ತಿಳಿಯದ ಜನರು ''ನಮ್ಮ ಧರ್ಮದ ಸ್ವಾಮಿಗಳು ಎಂದು ನಂಬಿ ಪಾಪ, ವೀರಶೈವವಾದಿ ಮಠದ ಸ್ವಾಮಿಗಳ ಬಳಿ ಹೋಗುತ್ತಾರೆ. ಅಲ್ಲಿ ಕೊಡುತ್ತಿರುವ ಜ್ಞಾನ (ಔಷಧಿ) ತನ್ನ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ್ದುಅಲ್ಲ ಎಂಬುದನ್ನು ತಿಳಿಯದ ಲಿಂಗಾಯತ ಶ್ರೀ ಸಾಮಾನ್ಯ ಭಕ್ತ ಆ ಕೆಲವು ಮಠಗಳಲ್ಲಿ, ಸ್ವಾಮಿಗಳಲ್ಲಿ ಸಿಗುತ್ತಿರುವ ತತ್ತ್ವಜ್ಞಾನ ಆಚರಣೆ, ಪೂಜಾವಿಧಾನ ಲಿಂಗಾಯತ ಧರ್ಮಕ್ಕೆ ಹೊಂದದ್ದು ಎಂದು ತಿಳಿಯದೆ, ಬಸವಾದಿ ಪ್ರಮಥರಿಂದ ಬಹಿಷ್ಕರಿಸಲ್ಪಟ್ಟ ಮತ್ತು ಎಂದೋ date expire (ದಿನಾಂಕ ಮುಗಿದಿರುವ) ಆಗಿರುವ ಆಚರಣೆಗಳನ್ನು ನಂಬಿ ಆ ಔಷಧಗಳನ್ನು ತಿನ್ನುತ್ತಿದ್ದಾರೆ. ಹೀಗಾಗಿಯೇ ಲಿಂಗಾಯತ ಸಮಾಜವು ನಿರೀಕ್ಷಿಸಿದಷ್ಟು ಆರೋಗ್ಯಶಾಲಿಯಾಗಿಲ್ಲ. ವಚನ ಸಾಹಿತ್ಯದ ಅಧ್ಯಯನ ಆರಂಭವಾದ ಮೇಲೆ ಲಿಂಗಾಯತರಿಗೆ ತಿಳಿಯುತ್ತಿದೆ, ವಚನ ಸಾಹಿತ್ಯದ ಪ್ರಿಸ್ಕ್ರಿಪ್ಷನ್ ಚೀಟಿಯಲ್ಲಿ ಬಸವಾದಿ ಪ್ರಮಥರು ಬರೆದು ಕೊಟ್ಟುದೇ ಬೇರೆ. ಚಿ.ಮೂ ಅವರು ಉಲ್ಲೇಖಿಸಿರುವ ಸಿದ್ಧಗಂಗಾ, ಸುತ್ತೂರು, ಹುಬ್ಬಳ್ಳಿಯ ಮಠಗಳಲ್ಲಿ ಪ್ರಚಲಿತವಿರುವ ಆಚರಣೆಗಳೇ ಬೇರೆ? ಎಂಬುದು.

ಚನ್ನಪಟ್ಟಣದಲ್ಲಿ ಪೂಜ್ಯ ಶ್ರೀ ಲಿಂ॥ ಲಿಂಗಾನಂದ ಮಹಾಸ್ವಾಮಿಗಳ ಪ್ರವಚನ ನಡೆದಿತ್ತು. ಮುಕ್ತಾಯಕ್ಕೆ ಸುತ್ತೂರು ಮಠಾಧೀಶರಾದ ಹಿಂದಿನ ಪೂಜ್ಯ ಶ್ರೀಗಳನ್ನು ಆಹ್ವಾನಿಸಲಾಗಿತ್ತು. ಕರುಣ ಪ್ರಸಾದ ಪಡೆಯಲು ಪೂಜ್ಯ ಅಪ್ಪಾಜಿ ಜೊತೆಗೆ ನಾನೂ ಹೋಗಿದ್ದೆ. ಶಿವಸ್ತೋತ್ರಗಳಿಂದ ಕೂಡಿದ ಇಷ್ಟಲಿಂಗಪೂಜೆಯನ್ನು ಪೂರೈಸಿದರು. ಆಗ ಅಪ್ಪಾಜಿ ಕೇಳಿದರು. ಸುತ್ತೂರು ಮಠದ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಂದಲೇ ಅಪ್ಪಾಜಿಯವರಿಗೆ ಕ್ರಿಯಾ ಜಂಗಮದೀಕ್ಷೆ ಆಗಿತ್ತು. ''ಗುರುಗಳೇ, ತಾವು ಅಂಗೈಯಲ್ಲಿ ಇಟ್ಟುಕೊಂಡುದು ಪರಾತ್ಪರ ಪರವಸ್ತುವಿನ ಕುರುಹು ಇಷ್ಟಲಿಂಗ. ಹೇಳುತ್ತಿರುವ ಮಂತ್ರ ಪೌರಾಣಿಕ ಶಿವನನ್ನು ಉದ್ದೇಶಿಸಿದ್ದು. ಕೈಲಾಸವಾಸಿ ಪಾರ್ವತಿ ವಲ್ಲಭನ ಕುರುಹಲ್ಲ ಈ ಇಷ್ಟಲಿಂಗ. ಇದು ಹೇಗೆ ಅಂದರೆ ತಾಯಿಯ ಪಾದ ಹಿಡಿದು ಪಾದಪೂಜೆ ಮಾಡುತ್ತ ಹೆಂಡತಿಯ ವರ್ಣನೆ ಮಾಡದಂತೆ ಆಗುತ್ತದೆ''.

ಪೂಜ್ಯ ಶ್ರೀಗಳು ಮುಗುಳ್ನಕ್ಕರು. ''ಗೊತ್ತಿದೆ, ಪರಿಹಾರ ಗೊತ್ತಿಲ್ಲ.'' ಎಂದರು. ಸಿದ್ಧಗಂಗಾ ಮಠದ ಪೂಜ್ಯರು ಗಣಪತಿಯ ಪೂಜೆ, ಪ್ರತಿಷ್ಠಾಪನೆ ಮಾಡುವುದಲ್ಲದೆ ಯಾವ ದೇವತೆಯ ಗುಡಿಯ

ಪ್ರಾರಂಭೋತ್ಸವಕ್ಕೂ ಹೋಗುತ್ತಾರೆ. ಇವರು ಮಾಡುವ ಆಚರಣೆ ನೋಡಿ ಇದೇ ಲಿಂಗಾಯತ ಧರ್ಮ ಎಂದು ಚಿ.ಮೂ ಅಂಥ ವಿದ್ವಾಂಸರು ಶಾಸನ ಬರೆಯುವುದಾದರೆ ಭ್ರಷ್ಟಾಚಾರ ಮಾಡುವ ಸರ್ಕಾರಿ ಅಧಿಕಾರಿ, ಮಂತ್ರಿಗಳನ್ನು ನೋಡಿ ಭಾರತದ ಸಂವಿಧಾನದಲ್ಲಿ ಭ್ರಷ್ಟಾಚಾರವೂ ಒಂದು ಅತ್ಯಗತ್ಯ ಆಚರಣೆ ಎಂದು ಬರೆಯಬೇಕಾದೀತು. ಓರ್ವ ವ್ಯಕ್ತಿ ಅಪರಾಧ ಎಸಗಿದ್ದಾನೆ ಎಂದು ಪೋಲೀಸರು ನ್ಯಾಯಾಲಯಕ್ಕೆ ಕರೆತರುತ್ತಾರೆ ಎಂದುಕೊಳ್ಳುವಾ. ಅವನು ತಪ್ಪಿತಸ್ಥ ಅಲ್ಲ ಎಂದೇ ಹೇಳುತ್ತಾನೆ. ಆಗ ನ್ಯಾಯಾಧೀಶರು ಸಂವಿಧಾನವನ್ನು ಅನ್ವಯಿಸಿ ನೋಡಿ ಆತ ಮಾಡಿದ್ದು ತಪ್ಪೇ ಸರಿಯೆ ನಿರ್ಧರಿಸುತ್ತಾರೆ. ಹಾಗೆಯೇ ಯಾರಾದರೂ ಲಿಂಗಾಯತ ಸ್ವಾಮಿಗಳು ವಿಶಿಷ್ಟ ಆಚರಣೆ ಮಾಡುತ್ತಿದ್ದರೆ ಅವರ ಆಚರಣೆ ಧರ್ಮ ಸಮ್ಮತವೇ ಎಂಬುದನ್ನು ವಚನ ಸಾಹಿತ್ಯ ಸಂವಿಧಾನದ ಆಧಾರದಿಂದ ನಿರ್ಣಯಿಸಬೇಕು.

ನಿಮಗೇನಾದರೂ ವಿಶೇಷ, ಬೃಹತ್ ಸಮಾರಂಭದಲ್ಲಿ ಎಲ್ಲರಿಗೂ ಕಡುಬು ಉಣ್ಣಿಸಬೇಕೆಂಬ ಬಯಕೆ ಇದೆಯೆ? ಮಾಡಿಕೊಡುವ ಅಡಿಗೆ ಭಟ್ಟರು ಯಾರು ಎಂಬ ಚಿಂತೆಯುಂಟೆ? ಇನ್ನೇನೂ ಚಿಂತಿಸುವ ಕಾರಣವಿಲ್ಲ. ಗಣಪತಿ ಹಬ್ಬದಲ್ಲಿ ಇಪ್ಪತ್ತು ಸಾವಿರ ಕಡುಬು ಮಾಡಿ ದಾಖಲೆ ನಿರ್ಮಿಸಿರುವ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳನ್ನು ಆಹ್ವಾನಿಸಿರಿ. ನಿಮ್ಮ ಇಷ್ಟಪೂರ್ತಿಯಾಗಿ ನಿಮ್ಮ ಬಂಧುಮಿತ್ರರಿಗೆ ಕಡುಬಿನ ಊಟ ಮಾಡಿಸಬಹುದು. ಆಶ್ಚರ್ಯವೆ? ಮುಂದೆ ಓದಿರಿ.

ಈ ಲೇಖನವನ್ನು ನಾನು ಬರೆಯುತ್ತಿರುವಾಗಲೇ ಅಂಚೆ ಪೇದೆ ಬಂದು ಸಿದ್ಧಗಂಗಾ ಮಠದಿಂದ ಹೊರಡುವ ಮಾಸಪತ್ರಿಕೆ ಸಿದ್ಧಗಂಗಾದ ಸೆಪ್ಟಂಬರ್ 2000ದ ಸಂಚಿಕೆ ಕೊಟ್ಟ. ಮುಖಪುಟದ ಮೇಲೆ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು ಕೈಯಲ್ಲೇನೋ ಹಿಡಿದು ಕುಳಿತ, ಅವರ ಜೊತೆಗೆ ಸಾಲಾಗಿ ಕುಳಿತ ಕೈಯಲ್ಲಿ ಏನೋ ಹಿಡಿದುಕೊಂಡ ವಿದ್ಯಾರ್ಥಿಗಳ ಚಿತ್ರ ಕಂಡಿತು. ಮೊದಲ ಬಾರಿಗೆ ನನಗೆ ತುಂಬಾ ಸಂತೋಷವಾಯಿತು. ಅಂತೂ ಸಾಮೂಹಿಕ ಇಷ್ಟಲಿಂಗಾರ್ಚನೆಯ ತರಬೇತಿಯನ್ನು ಸ್ವಾಮಿಗಳು ಮಕ್ಕಳಿಗೆ ನೀಡುವಂತೆ ತೋರುತ್ತದೆ. ಲಿಂಗಾಯತ ಧರ್ಮದ ಭವಿಷ್ಯ ಉಜ್ವಲವಾಗುವ ಶುಭಸಂಕೇತ ಎಂದುಕೊಂಡು ಆತುರದಿಂದ ಒಳಪುಟಗಳನ್ನು ವಿವರಣೆಗಾಗಿ ತೆರೆದೆ. ಸ್ವಾಮಿಗಳು ಗಣಪತಿಯ ಹಬ್ಬಕ್ಕಾಗಿ ಕಡುಬು ಮಾಡುತ್ತಿದ್ದರು. ವಿದ್ಯಾರ್ಥಿಗಳು ಸಹಕರಿಸುತ್ತಿದ್ದರು. ಅಂತೂ ಇಪ್ಪತ್ತು ಸಾವಿರ ಕಡುಬು ತಯಾರಾಗಲು ಸ್ವಾಮಿಗಳು ಪರಿಶ್ರಮಪಟ್ಟರು. ಆಹಾ, ನಮ್ಮ ಮಠಾಧೀಶರದು ಎಂಥಾ ಅದ್ಭುತ ಸಾಧನೆ?! ನನ್ನ ಉತ್ಸಾಹ ಜರ್‍ರನೆ ಇಳಿದುಹೋಯಿತು.

ಒಂದು ಪ್ರಸಂಗ ನೆನಪಾಗುತ್ತಿದೆ. ಒಮ್ಮೆ ನೆಹರೂ ರಷ್ಯಕ್ಕೆ ಹೋದಾಗ ಅಲ್ಲಿ ಅಧ್ಯಕ್ಷರೊಡನೆ ಊರ ಹೊರಗಿನ ಹೆದ್ದಾರಿಯಲ್ಲಿ ಕಾರಿನಲ್ಲಿ ಸಾಗುತ್ತಿದ್ದರಂತೆ. ಆಗ ಆ ಅಧ್ಯಕ್ಷರು, ''ನೆಹರೂಜಿ ಭಾರತೀಯರು ಎಷ್ಟು ಅನಾಗರಿಕರು. ಎಲ್ಲೆಂದರಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತಾರೆ'' ಎಂದರಂತೆ ನೆಹರೂ ಅವರಿಗೆ ಬಲು ನಾಚಿಕೆಯಾಯಿತಂತೆ.

ಮಾತನಾಡದೆ ಮೌನ ತಳೆದರು. ಪ್ರಯಾಣ ಹಾಗೆ ಆರಾಮವಾಗಿ ಸಾಗಿದಾಗ ರಸ್ತೆಯಿಂದ ತುಸುದೂರದಲ್ಲಿ ಓರ್ವ ಮೂತ್ರ ವಿಸರ್ಜನೆಗೆ ತೊಡಗಿದ್ದನಂತೆ. ಗಮನಿಸಿದ ನೆಹರೂ ಅವರ ಮುಖ ನಗೆಯಿಂದ ಮಿಂಚಿತಂತೆ. ಅಲ್ಲಿ ನೋಡಿ, ನಿಮ್ಮ ದೇಶದವರೂ......'' ಎಂದು ತೋರಿಸಿದರು. ಅಧ್ಯಕ್ಷರ ಮುಖ ನಿಸ್ತೇಜವಾಯಿತಂತೆ. ಕೋಪದಿಂದ ಆ ವ್ಯಕ್ತಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಗಾಡಿ ನಿಲ್ಲಿಸಿ ವಿಚಾರಿಸಿದಾಗ ಅವನು ಒಬ್ಬ ಭಾರತೀಯನೇ ಆಗಿದ್ದನಂತೆ.

ಸಿದ್ಧಗಂಗಾ ಮಠದಲ್ಲಿ ಅಂತೂ ಸಾಮೂಹಿಕ ಇಷ್ಟಲಿಂಗಾರ್ಚನೆ ವಿದ್ಯಾರ್ಥಿಗಳಿಗೆ ಕಲಿಸುವ ವಿಶೇಷ ಯೋಜನೆ ಇದ್ದಂತೆ ತೋರುತ್ತೆ ಎಂದು ಹಿಗ್ಗಿ ಹೀರೇಕಾಯಿ ಆಗಿದ್ದ ನನಗೂ ಸ್ವಾಮಿಗಳ ಕಡುಬಿನ ಕಾಯಕ ನೋಡಿ ಹೀಗೇ ನಾಚಿಕೆ ಆಯಿತು. ಅದನ್ನೊಂದು ದೊಡ್ಡ ಸಾಧನೆಯೆಂಬಂತೆ

Digitalized by e-Sahithya Documentation Forum
Sponsored by Sarayu Foundation Trust

ಬರೆದಿರುವುದನ್ನು ನೋಡಿ ಮಾತೆ ಹೊರಡದಾದವು.

ಕೆಲವೊಂದು ವಿಚಾರಗಳನ್ನು ಪ್ರಕಟಣೆಗಳನ್ನು ನನ್ನ ಗಮನಕ್ಕೆ ತರಬೇಡಿ. ತಪ್ಪು ಕಂಡರೆ ನನಗೆ ವಿಮರ್ಶಿಸದೆ ಇರಲು ಸಾಧ್ಯವಾಗದು ಎಂದು ನಮ್ಮ ಸಿಬ್ಬಂದಿಗೆ ಹೇಳಿದ್ದೇನೆ. ಆದರೆ ಸಿದ್ಧಗಂಗಾ ಪತ್ರಿಕೆ ನನ್ನ ಕೈಗೇ ಸಿಗಬೇಕೆ !

ಪುಟ 15ರಲ್ಲಿ ಒಂದು ಮಂಟಪ ಕಟ್ಟಿ ಗಣಪತಿ ಇಟ್ಟಿದ್ದಾರೆ. ಮಠದ ಕಿರಿಯ ಶ್ರೀಗಳು ಪೂಜೆಯನ್ನು ಸಂಭ್ರಮದಿಂದ ನೋಡುತ್ತಿದ್ದಾರೆ. ಪ್ರತಿವರ್ಷ ಎಷ್ಟು ಜನ ಶ್ರೀಮಠದಿಂದ ವಿದ್ಯಾರ್ಥಿಜೀವನ ಪೂರೈಸಿ ಹೋಗುತ್ತಾರೋ ಅಷ್ಟು ಜನ ಲಿಂಗಾತಯರು ತಮ್ಮ ಧರ್ಮಕ್ಕೆ ವಿರುದ್ಧವಾದ ಆಚರಣೆ ಕಲಿತು ಹೋದರೆ, ಇದೇ ಲಿಂಗಾಯತ ಧರ್ಮ, ಎಂದು ಲಿಂಗಾಯತೇತರರು ತಪ್ಪು ತಿಳಿದು ಹೋಗುತ್ತಾರೆ.

ಇಷ್ಟಲಿಂಗಧಾರಿಗಳಿಗೆ ಗಣಪತಿ ಪೂಜೆ ಮಾನ್ಯವಲ್ಲ. ಇಷ್ಟಲಿಂಗದ ಹೊರತು ಅನ್ಯ ಪೂಜೆ ನಿಷಿದ್ಧ.

ಬೇಡವೋ ಇಲಿಚಯ್ಯಾ
ಮೊನ್ನೆ ಬಂದು ನಮ್ಮ ಶಿವದಾರವ ಕಡಿದೆ !
ಇಂದು ಬಂದು ನಮ್ಮ ವಸ್ತ್ರವ ಕಡಿದೆ !
ಬೇಡವೋ ಇಲಿಚಯ್ಯ !
ನಿನಗಂಜರು, ನಿನ್ನ ಗಣಪತಿಗಂಜರು
ಕೂಡಲ ಚನ್ನ ಸಂಗನ ಶರಣರು ಕಂಡಡೆ
ನಿನ್ನ ಹಲ್ಲ ಕಳೆವರು ; (ಅವನ) ದಂತವ ಮುರಿವರು ! *-ಚನ್ನಬಸವಣ್ಣನವರ ವಚನ 1134*

ವೀರಭದ್ರ ನಂದಿ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ
ನಮ್ಮ ಕುಲದೈವಂಗಳೆಂದು ಹೇಳುವವರಿಗೆ
ಗುರುವಿಲ್ಲ, ಲಿಂಗವಿಲ್ಲ ಪಾದೋದಕ ಪ್ರಸಾದವಿಲ್ಲ
ಕೂಡಲ ಚನ್ನ ಸಂಗಮದೇವಾ *-ಚನ್ನಬಸವಣ್ಣನವರ ವಚನ 215*

ಗಣಪತಿ ಪೂಜೆ ಮಾಡದೆ ಇದ್ದರೆ ಇಲಿಗಳು ಶಿವದಾರ, ವಸ್ತ್ರಗಳನ್ನು ಕಡಿಯುತ್ತವೆ ಎಂದು ಯಾರೋ ಮೂಢಭಕ್ತರು ಹೇಳಿದ ಮಾತನ್ನು ವಿಡಂಬಿಸಿ, ಚಿನ್ನಯಜ್ಞಾನಿ ಚನ್ನಬಸವಣ್ಣನವರು ಇಲಿಚಯ್ಯನನ್ನು ಕುರಿತು ಹೇಳುತ್ತಾರೆ. ಶರಣರು ಹೆದರಿ ಪೂಜಿಸುವುದಿಲ್ಲ, ನಿನ್ನ ಹಲ್ಲನ್ನು ಕಳೆಯುತ್ತಾರೆ. ಅವನ (ಗಣಪತಿಯ) ದಂತವನ್ನು (ಈಗಾಗಲೇ ಪಾಪ ಏಕದಂತನಾಗಿದ್ದಾನೆ) ಮುರಿಯುತ್ತಾರೆ. ಎಂಥಾ ಆತ್ಮವಿಶ್ವಾಸ ಶರಣರದು. ನಮ್ಮ ಗಣಪತಿ ಧರ್ಮಗುರು ಬಸವಣ್ಣನವರೇ ವಿನಾ ವಿಕೃತ ಶರೀರದ ಕಾಲ್ಪನಿಕ ದೇವತೆ ಗಣಪತಿಯಲ್ಲ. ಲಿಂಗಾಯತ ಸ್ವಾಮಿಗಳು ಗಣಪತಿಯ ಪೂಜೆ ಮಾಡುವುದು ನಿಜಕ್ಕೂ ತಪ್ಪು. ಶೈವ ಕವಿಗಳಾದ ಹರಿಹರ ಆರಂಭದಲ್ಲಿ ಶಿವಸ್ತೋತ್ರವನ್ನು ಮಾಡುತ್ತಾನೆ. ಬ್ರಾಹ್ಮಣ ಮೂಲದಿಂದ ಬಂದ ಚಾಮರಸ ಕಾವ್ಯದ ಆದಿಯಲ್ಲಿ ಗಣಪತಿ ಸ್ತೋತ್ರ ಮಾಡದೆ ಶ್ರೀ ಮದಮಲ ಎಂದು ಆರಂಭಿಸಿ, ಗುರುಗುಹೇಶ್ವರ ಲಿಂಗ ಶರಣಾರ್ಥಿ ಎನ್ನುತ್ತಾನೆ. ಬ್ರಾಹ್ಮಣ ಕವಿಯಾದ ಭೀಮಕವಿ ಕೂಡ ಶ್ರೀ ಗುರುವೆ ಎಂದು ಹಾಡಿ ಆರಂಭದಲ್ಲಿ ಬಸವ ಮಹಾಗುರುವನ್ನು ಸ್ತುತಿಸುತ್ತಾನೆ. ಹೀಗೆ ಬ್ರಾಹ್ಮಣ ಮೂಲದಿಂದ ಬಂದ ಶಿವಕವಿಗಳು ಸಹ ಭಯವನ್ನು ತೊರೆದು ಸ್ತೋತ್ರಗಳನ್ನು ರಚಿಸಿದಾಗ ಇಷ್ಟಲಿಂಗಾರ್ಚಕರಾದ ಲಿಂಗಾಯತ ಮಠಾಧೀಶರಲ್ಲಿ ಪತಿವ್ರತಾ ಭಕ್ತ, ಲಿಂಗನಿಷ್ಠೆ ಅಳವಡದಿದ್ದರೆಂತು.

ನಮ್ಮ ಗಣಪತಿ ಧರ್ಮಗುರು ಬಸವಣ್ಣನವರು ಅವರನ್ನೇ ಕೊಂಡಾಡಲು ವಚನ ಸಾಹಿತ್ಯ ಹೇಳುತ್ತದೆ.

ಬಸವೇಶನೆ ಬಸವರಾಜನೆ ಬಸವಣ್ಣನೇ ಬಸವ ತಂದೆ
ಬಸವ ಕೃಪಾನಿಧಿ ಬಸವ ಪರಮೇಶ್ವರೀಶ್ವರ
ಬಸವಾ ಪ್ರಮಥಾದಿದೇವ ರಕ್ಷಿಸು ಬಸವಾ ॥

ಎನ್ನುತ್ತಾರೆ ಶಿವಯೋಗಿ ಸಿದ್ಧರಾಮೇಶ್ವರರು.

ಲಿಂಗಧಾರಣೆ ಮಾಡಿಕೊಳ್ಳದ ಸ್ವಾಮಿಗಳಿದ್ದರೆ ಅವರು ವೈದಿಕರಾಗಿದ್ದರೆ ಅವರ ಶಾಸ್ತ್ರಗಳು ವೇದ, ಆಗಮ, ಪುರಾಣಗಳು ನ್ಯಾಯ ನಿರ್ಣಾಯಕ ಗ್ರಂಥಗಳು ; ಶೈವರಾಗಿದ್ದರೆ ಆಗಮಗಳು ಅವರ ಶಾಸ್ತ್ರ ಗ್ರಂಥಗಳು. ನಿಜವಾಗಿ ಹೇಳಬೇಕು ಎಂದರೆ ಇಷ್ಟಲಿಂಗಧಾರಿಗಳಾದ ಸ್ವಾಮಿಗಳು ಏಕದೇವ, ಸೃಷ್ಟಿಕರ್ತನನ್ನು ಪೂಜಿಸಬೇಕು ; ನಿರಾಕಾರ ಲಿಂಗದೇವನನ್ನು ಇಷ್ಟಲಿಂಗ ರೂಪದಲ್ಲಿ ಹೊರತುಪಡಿಸಿ ಬೇರೇನನ್ನೂ ಪೂಜಿಸಬಾರದು. ಲಿಂಗಧಾರಣೆ ಇಲ್ಲದೆ ವೀರಶೈವರಾಗಿದ್ದರೆ ಆಗ ಶಿವನನ್ನು ಸ್ಥಾವರಲಿಂಗ, ಅದರ ಸಣ್ಣರೂಪವಾದ ಚರಲಿಂಗ ಹೊರತು ಪಡಿಸಿ ಬೇರಾವ ದೇವತೆಗಳು ಗಣಪತಿ, ಪಾರ್ವತಿ ಇತ್ಯಾದಿ ಪೂಜಿಸಬಾರದು. ಅಶುದ್ಧ ಶೈವರು ಮಾತ್ರ ಶಿವನೊಡನೆ ಪರಿವಾರ ದೇವತೆಗಳನ್ನೆಲ್ಲ ಪೂಜಿಸುವರು. ಶಿವನನ್ನು ವೀರತಮವಾದ, ಏಕದೇವತಾನಿಷ್ಠೆ (monodeitism) ಯೊಡನೆ ಪೂಜಿಸುವುದೇ ವೀರಶೈವ. ಅನೇಕ ಲಿಂಗಾಯತ ಸ್ವಾಮಿಗಳು ಈ ದೃಷ್ಟಿಯಲ್ಲಿ ಲಿಂಗಾಯತರೂ ಅಲ್ಲ, ವೀರಶೈವರೂ ಅಲ್ಲ, ಅಶುದ್ಧ ಶೈವರು ಎಂದರೆ ಉತ್ಪ್ರೇಕ್ಷೆಯಲ್ಲ.

ಹೀಗಾಗಿ ಅವರಿಗೆ ವಚನ ಸಾಹಿತ್ಯ ಓದಲೇ ಭಯವಾಗುತ್ತದೆ. ಏಕೆಂದರೆ ಅದು ಕನ್ನಡಿಯಾಗಿ ಕೆಲಸ ಮಾಡುತ್ತದೆ. ವಚನ ಸಾಹಿತ್ಯ ಓದಿದ ಮೇಲೆ ತಾವು ಮಾಡುತ್ತಲಿರುವುದು ತಪ್ಪು ಎಂದು ಗೊತ್ತಾದರೂ ಶ್ರೀಮಂತ ಭಕ್ತರಿಗೆ ಹೆದರಿ ತಪ್ಪು ಆಚರಣೆ ಬಿಡಲಾರದವರಾಗಿರುತ್ತಾರೆ. ಇಲ್ಲವೇ ಅವರಿಗೇ ಭಯ-ಭ್ರಾಂತಿ ಹೋಗಿರುವುದಿಲ್ಲ. ಬಹಳ ವರ್ಷಗಳಿಂದ ಸಿಗರೇಟು, ಮದ್ಯದ ಚಟ ಅಂಟಿಸಿಕೊಂಡವನು ಪ್ರಾಣವನ್ನಾದರೂ ಬಿಟ್ಟೇನು ಚಟ ಬಿಡಲಾರೆ ಎಂಬಂತೆ ಬಹಳ ವರ್ಷಕಾಲ ಮಾಡುತ್ತ ಬಂದ ತಪ್ಪು ಆಚರಣೆಗಳನ್ನು ಭಯಗ್ರಸ್ತ ಮನಸ್ಸಿನಿಂದ ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತಾರೆ. ನಾನು 1965ಕ್ಕೆ ಮುನ್ನ ಹಿರಿಯರು ಕಲಿಸಿದಂತೆ ಸೋಮವಾರ ನೀಲಕಂಠೇಶ್ವರ, ಮಂಗಳವಾರ ಮಾರಮ್ಮ, ಗುರುವಾರ ಸಾಯಿಬಾಬಾ, ಶುಕ್ರವಾರ ದೇವಿ, ಶನಿವಾರ-ಶನಿ ಹೀಗೆ ಗುಡಿಗುಡಿ ತಿರುಗುತ್ತಿದ್ದೆ.

ಒಂದು ಆಶ್ಚರ್ಯಕರ ಸಂಗತಿ. "ಉಳಿದೆಲ್ಲರ ಮನೆಗಳಲ್ಲಿ ಗಣಪತಿ ಕೂರಿಸುತ್ತಾರೆ. ನಾವೂ ಹಾಗೆ ಕೂರಿಸೋಣ ಎಂದು ನಾವು ಹಠ ಮಾಡಿದರೆ, ಹಿರಿಯರು, "ನಮ್ಮ ಮನೆಗಳಲ್ಲಿ ಗಣಪತಿ ಕೂರಿಸಬಾರದಂತೆ ; ನಾವು ತಿಪ್ಪೇರುದ್ರಸ್ವಾಮಿಯನ್ನು ಮನೆದೇವರಾಗಿ ಹೊಂದಿರುವವರು" ಎನ್ನುತ್ತಿದ್ದರು. ನಮಗೆ ಅರ್ಥವಾಗುತ್ತಿರಲಿಲ್ಲ. ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿಗಳು ಶರಣ ಮಾರ್ಗಿಗಳು. ಶರಣ ಪಥಿಕರಾದ ನಾವು ಗಣಪತಿಯನ್ನು ಕೂರಿಸಬಾರದು ಎಂಬುದನ್ನು ಹೀಗೆ ಹೇಳಿದ್ದರೇನೋ !!

ನವರಾತ್ರಿಯಲ್ಲಿ 9 ದಿವಸ ದೇವಿಪುರಾಣ, ಶ್ರಾವಣ ಶನಿವಾರ ಶನಿಕಥೆ ಓದುತ್ತಿದ್ದೆ. ಇಷ್ಟಲಿಂಗಧಾರಿಗಳಲ್ಲಿ ಪತಿವ್ರತಾ ಭಕ್ತಿ ಅಗತ್ಯ, ಸೃಷ್ಟಿಕರ್ತನೆಂಬ ಪರಮೋಚ್ಚ ಶಕ್ತಿಯನ್ನು ಇಷ್ಟಲಿಂಗರೂಪದಲ್ಲಿ ಆರಾಧಿಸುವ ನಾವು ಅನ್ಯವನ್ನು ಆರಾಧಿಸಬಾರದು ಎಂಬುದು ವಚನ ಸಾಹಿತ್ಯದಿಂದ ಮನವರಿಕೆಯಾಗುತ್ತಲೇ ನಿರ್ಭಯವಾಗಿ ಬಹುದೇವತೋಪಾಸನೆ ಬಿಟ್ಟು ಇಷ್ಟಲಿಂಗ ನಿಷ್ಠೆ

Digitalized by e-Sahithya Documentation Forum
Sponsored by Sarayu Foundation Trust

ಬೆಳೆಸಿಕೊಂಡವು. ಈಗೀಗ ಸಾಕಷ್ಟು ಜನ ಗೃಹಸ್ಥ ಶರಣರೂ ಇಂಥ ತತ್ತ್ವದ ಕಲಿಗಳಾಗುತ್ತಿದ್ದಾರೆ; ಆದರೆ ಅನೇಕ ಮಠಾಧೀಶರಲ್ಲಿ ಆ ಆತ್ಮಸ್ಥೈರ್ಯ ಬೆಳೆಯದಿರುವುದು ಆಶ್ಚರ್ಯಕರ.

ಬೆಂಗಳೂರಲ್ಲಿ ಒಮ್ಮೆ ನಿರಾಕಾರ ದೇವರು, ಏಕದೇವೋಪಾಸನೆ ಕುರಿತು ಬಹಿರಂಗ ಪ್ರವಚನ ಮಾಡುತ್ತಿದ್ದೆ. ಬೆಂಗಳೂರು, ಮೈಸೂರು ನಗರಗಳು ಮೂಢನಂಬಿಕೆಯ ಆಗರಗಳು. ಬಹುಶಃ ಡಾ|| ರಾಜ್‌ಕುಮಾರ್ ಅವರ ಅಪಹರಣ ಪ್ರಸಂಗದಲ್ಲಿ ಬೆಂಗಳೂರು ಜನ ತೋರಿಸಿದ ಮೂಢಭಕ್ತಿಯ ಸಡಗರ ನೋಡಿ ಕರ್ನಾಟಕದ ಜನತೆ ಅರಿತುಕೊಂಡಿರಲೂ ಬಹುದು. ಇಂಥ ನಗರದಲ್ಲಿ ವೈಚಾರಿಕ ಪ್ರವಚನ ಮಾಡುವುದು ಹುಡುಗಾಟವಲ್ಲ. ಓರ್ವರು ಬಹಳ ಪ್ರೌಢರಂತೆ ಕಾಣುತ್ತಿದ್ದರು. ದಿನಾ ಪ್ರವಚನ ಕೇಳುತ್ತಿದ್ದರು. ಒಂದು ದಿನ ಹತ್ತಿರ ಬಂದರು. ಬಹುಶಃ ಇವರಿಗೆ ಮೂಢನಂಬಿಕೆ ಖಂಡನೆ ಸಿಟ್ಟು ತರಿಸಿರಬೇಕು ಎಂದು ಅಂದುಕೊಂಡೆ

''ತಾಯಿ ಧನ್ಯ ಧನ್ಯ, ದೇವರ ಸ್ವರೂಪ ಇಂದು ಅರ್ಥವಾಯಿತು.'' ಎಂದಾಗ ನನಗೆ ದಿಗ್ಭ್ರಾಂತಿಯಾಯಿತು. ಅವರ ಹೆಸರು ವಿ.ಆರ್.ಜೋಷಿ. ಅವರು ಒಂದು ಶ್ಲೋಕವನ್ನು ಹೇಳಿದರು :

> ರೂಪಂ ರೂಪವಿವರ್ಜಿತಸ್ಯ ಭವತೋಧ್ಯಾನೇನ ಯತ್ಕಲ್ಪಿತಂ
> ಸ್ತುತ್ಯಾನಿರ್ವಚನೀಯತಾಖಿಲಗುರೋ ದೂರೀಕೃತಾಯನ್ಮಯಾ ||
> ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥ ಯಾತ್ರಾ ದಿನಾ
> ಕ್ಷಂ ತಮ್ಯಂ ಜಗದೀಶ ತದ್ವಿಕಲತಾದೋಷ ತ್ರಯಂ ಮತ್ಕೃತಂ ||

ಪ್ರಭು ! ರೂಪ ರಹಿತನಾದ ನಿನಗೆ ಧ್ಯಾನದಿಂದ ರೂಪವನ್ನು ಕಲ್ಪಿಸಿದ್ದೇನೆ.
ಜಗದ್ಗುರು ! ಸ್ತುತಿಯಿಂದ ನಿನ್ನ ಅನಿರ್ವಚನೀಯತೆಯನ್ನು ದೂರೀಕರಿಸಿದ್ದೇನೆ.
ಜಗದ್ಗುರು ! ತೀರ್ಥಯಾತ್ರಾದಿಗಳಿಂದ ನಿನ್ನ ಸರ್ವವ್ಯಾಪಿತ್ವವನ್ನು ನಿರಾಕರಿಸಿದ್ದೇನೆ.
ಜಗದೀಶ ! ನನ್ನ ಈ ಮೂರು ಅಪರಾಧಗಳನ್ನು ಕ್ಷಮಿಸೆಂದು ಬೇಡುತ್ತೇನೆ.

ಪುರಾಣಗಳ ಜನಕರಾದ ವ್ಯಾಸ ಮಹರ್ಷಿಗಳು ಹೀಗೆ ಹೇಳಿದ್ದಾರೆ; ಸೃಷ್ಟಿಕರ್ತನ ಕ್ಷಮೆ ಕೋರಿದ್ದಾರೆ. ಆದರೆ ಬಂತೇನು ? ಅಸಂಖ್ಯಾತ ಪುರಾಣಗಳ ಸರಮಾಲೆ ಸೃಷ್ಟಿಸಿ ವ್ಯಾಸರು ಭಾರತೀಯರ ಮನಸ್ಸನ್ನು ಭಯ ಗೊಂದಲಗಳ ಬೀಡಾಗಿ ಮಾಡಿಬಿಟ್ಟಿದ್ದಾರಲ್ಲವೆ ? ಒಬ್ಬ ದೇವರ ಕಲ್ಪನೆ, ಏಕದೇವೋಪಾಸನೆಯ ಮಹತ್ವವನ್ನು ಹಿಂದುಗಳು ತಿಳಿದುಕೊಳ್ಳಲಾರದ ಸ್ಥಿತಿಗೆ ಅವರ ಮನ-ಬುದ್ಧಿಗಳನ್ನು ಮಂಕುಗೊಳಿಸಿದ್ದಾರಲ್ಲವೆ ? ಇದನ್ನೆಲ್ಲ ಬಯಲಿಗಿಟ್ಟು ದೇವರ ಸ್ವರೂಪವನ್ನು ಖಚಿತ ಪಡಿಸಿ, ಕಟ್ಟಿದ ಲಿಂಗಾಯತ ಸಮಾಜದ ಸ್ವಾಮಿಗಳು ಸಹ ಪುನಃ ಬಹುದೇವತೋಪಾಸನೆಯ ಕೆಸರಲ್ಲಿ ಸಿಕ್ಕಿ ಒದ್ದಾಡುವಂತಾಗಿದ್ದಾರಲ್ಲವೆ ? ಎಷ್ಟು ಚೋದ್ಯದ ಸಂಗತಿ !

ಪೂಜ್ಯ ಸಿದ್ಧಗಂಗಾ ಶ್ರೀಗಳ ಬಗ್ಗೆಯಾಗಲೀ, ಸುತ್ತೂರು ಮಠದವರ ಬಗ್ಗೆಯಾಗಲೀ ಪ್ರಸ್ತಾಪಿಸಲು ನನಗೆ ಎಳ್ಳಷ್ಟೂ ಮನಸ್ಸಿರಲಿಲ್ಲ. ಆದರೆ ಚಿ.ಮೂ ಅವರು ಅನವಶ್ಯಕವಾಗಿ ತಪ್ಪು ಸಾಕ್ಷಿಗಳನ್ನಾಗಿ ಅವರನ್ನು ಮುಂದಿಟ್ಟಿದ್ದರಿಂದ, ಅವರ ಆಚರಣೆಗಳನ್ನೇ ಲಿಂಗಾಯತ ಧರ್ಮೀಯರು ಅಧಿಕೃತ ಧರ್ಮಾಚರಣೆ ಎಂದು ತಿಳಿಯಬಾರದು ಎಂದು ನಾನು ಅನಿವಾರ್ಯವಾಗಿ ಪ್ರಸ್ತಾಪಿಸಿದ್ದೇನೆ. ಇವರು ಮತ್ತು ಇನ್ನೂ ಅನೇಕರು ವೇದ, ಆಗಮ, ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದರೆ ಅದೇನೂ ಲಿಂಗಾಯತ ಮಠಾಧೀಶರಿಗೆ ಅನುಕರಣೀಯ ಆದರ್ಶವಲ್ಲ. ಇದರಿಂದ ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ವೈದಿಕ ಮಂತ್ರ, ಪೂಜಾವಿಧಿ ಅನವಶ್ಯಕವಾಗಿ ಒಳಸೇರಿದವು. ಧರ್ಮಗುರು ಬಸವಣ್ಣನವರು ಕೊಟ್ಟ ಪ್ರಗತಿಪರ ಧರ್ಮದ ಮೂಲ ಸ್ವರೂಪ ಗುರುತು ಸಿಗದಷ್ಟು ವಿಕೃತಗೊಂಡು ಇಂದು ವಿಚಾರವಾದಿಗಳಿಂದ ಟೀಕೆಗೆ ಒಳಗಾಗುತ್ತಿದೆ. ಸಂಸ್ಕೃತ ಕಾಲೇಜಿಗೆ ಸಿಕ್ಕುವ ವಿಪುಲವಾದ ಸರ್ಕಾರದ ಧನ ಸಹಾಯಕ್ಕೆ ಆಸೆ ಬಿದ್ದು

ಅನೇಕ ಮಠಾಧೀಶರು ಸಂಸ್ಕೃತ ಪಾಠಶಾಲೆ-ಕಾಲೇಜು ನಡೆಸುತ್ತಾರೆ. ಲಿಂಗಾಯತ ಧರ್ಮಕ್ಕೆ ಸಲ್ಲದ ವಿಚಾರ ಆಚಾರಗಳನ್ನು ವಟುಗಳಲ್ಲಿ ತುಂಬುತ್ತಾರೆ. ಭಾಷಾ ಜ್ಞಾನ ದೃಷ್ಟಿಯಿಂದ ಸಂಸ್ಕೃತ ಓದುವುದು ಬೇರೆ. ಈ ದೃಷ್ಟಿಕೋನವಿದ್ದರೆ ಮಠಾಧಿಕಾರಿ ಮೊದಲು ತನ್ನ ಧರ್ಮವನ್ನು ಆಳವಾಗಿ ತಿಳಿಯಬೇಕು. ವಚನ ಪಾಠಶಾಲೆಗಳನ್ನು ತೆರೆದು ಲಿಂಗಾಯತ ಮಠಾಧೀಶರಿಗೆ, ವಟುಗಳಿಗೆ ತರಬೇತಿ ಕೊಡಬೇಕು. ಕ್ರೈಸ್ತ ಮಿಷನರಿಗಳು ಮೊದಲು ತಮ್ಮ ಸಾಹಿತ್ಯದಲ್ಲಿ ಪರಿಣಿತರಾಗಿ ನಂತರ ಇನ್ನಿತರ ಎಲ್ಲ ಧರ್ಮಗಳ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡುವರು. 1868ರಲ್ಲಿ ಆರಂಭವಾದ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಬ್ರಾಹ್ಮಣರ ಹೊರತು ಇತರರಿಗೆ ಸಂಸ್ಕೃತ ಕಲಿಯಲು ಆಸ್ಪದ ಇರಲಿಲ್ಲವೆಂದು, ವೀರಶೈವರು ಹೋರಾಟ ಮಾಡಿ 1917ರಲ್ಲಿ ಸಿದ್ಧಗಂಗೆಯಲ್ಲಿ ಸಂಸ್ಕೃತ ಪಾಠಶಾಲೆ ತೆರೆದುದಾಗಿ ಶ್ರೀ ಚಿ.ಮೂ ಬರೆದಿದ್ದಾರೆ. ಹೀಗೆ ಹೋರಾಟ ಮಾಡಿ ಸಂಸ್ಕೃತ ಪಾಠಶಾಲೆ ತೆರೆಯುವಲ್ಲಿ 2 ಕಾರಣಗಳನ್ನು ಗುರುತಿಸಬಹುದು. 1. ಆಗಿನ್ನೂ ವಚನ ಸಾಹಿತ್ಯವು ಒಂದು ಧಾರ್ಮಿಕ ಸಂವಿಧಾನ (Canonical literature) ಎಂಬ ತಿಳುವಳಿಕೆ ಲಿಂಗಾಯತರಲ್ಲಿ ಮೂಡಿರಲಿಲ್ಲ. ತಾಡವೋಲೆಗಳು ಪೂಜೆಗೊಳ್ಳುತ್ತಿದ್ದರೂ ಅವುಗಳ ಅಂತಸ್ಸತ್ವವನ್ನು ಜನರು ಅರ್ಥ ಮಾಡಿಕೊಂಡಿರಲಿಲ್ಲ. ಹೀಗಾಗಿ ತಮ್ಮ ಸಮಾಜಕ್ಕೊಂದು ಧಾರ್ಮಿಕ ಸಾಹಿತ್ಯ ಬೇಕು ಎಂದು, ಹೆತ್ತ ತಾಯಿ ಸಿಗದಾಗ ಸಾಕು ತಾಯಿ ಎಂದು, ವೇದಾಗಮಗಳ ಮೊರೆಹೊಕ್ಕಿರುವುದರಲ್ಲಿ ಆಶ್ಚರ್ಯವೇನಿದೆ ?

2. ಹೋರಾಟ ಪ್ರಧಾನ ಧರ್ಮವಾಗಿ ಲಿಂಗಾಯತವು ಜನ್ಮ ತಳೆದುದು ಕೇವಲ ಕೆಲವರ ಸೊತ್ತಾಗಿದ್ದ ಧರ್ಮವನ್ನು ಎಲ್ಲರ ಮನೆಬೆಳಗುವ ಬೆಳಕನ್ನಾಗಿ ಮಾಡಲೆಂದೇ ಬಸವಣ್ಣನವರು ಲಿಂಗಾಯತ ಧರ್ಮ ಕೊಟ್ಟುದು. ಹೀಗಾಗಿ ಸಂಸ್ಕೃತವನ್ನು ಕಲಿಯಲು ಎಲ್ಲರಿಗೂ ಅವಕಾಶ ಕೊಡುವುದಿಲ್ಲ ಎಂಬ ವೈದಿಕ ಸಂಪ್ರದಾಯವನ್ನು ಪ್ರತಿಭಟಿಸಿ ಸಿದ್ಧಗಂಗೆಯಲ್ಲಿ ವೇದ ಆಗಮ ಸಂಸ್ಕೃತ ಪಾಠಶಾಲೆ ತೆರೆದಿದ್ದರೆ ಅದು ಅಭಿನಂದನಾರ್ಹ ಹೋರಾಟ.

ಆದರೆ ಇಂದು ವಾತಾವರಣ ಬದಲಾಗಿದೆ. ಒಂದು ಕಾಲದಲ್ಲಿ ಸಂಸ್ಕೃತ ಕಲಿಯಲು ಅವಕಾಶ ಕೊಡುವುದಿಲ್ಲ ಎಂದವರೇ, ಭಾಷೆಯು ಬೆಳೆಯದ ಲೋಪವನ್ನು ಗುರುತಿಸಿ, ಈಗ ಎಲ್ಲರೂ ಕಲಿಯಿರಿ ಎಂದು ಆಸೆ-ಆಮಿಷ ಒಡ್ಡುತ್ತಿದ್ದಾರೆ. 20ನೆಯ ಶತಮಾನದಲ್ಲಿ ಅಮೂಲ್ಯ ನಿಧಿ ವಚನ ಸಾಹಿತ್ಯ ಬೆಳಕಿಗೆ ಬಂದಿದೆ. ಅದು ಒಂದು ಪರಿಪೂರ್ಣ, ಪ್ರಗತಿಪರ ಧರ್ಮದ ಭಂಡಾರ ಎಂಬುದೂ ಗೋಚರವಾಗಿದೆ. ಆದ್ದರಿಂದ ಇನ್ನು ಅದರ ಅಧ್ಯಯನ, ಅನುಷ್ಠಾನಕ್ಕೆ ಮಠಾಧಿಪತಿಗಳು, ಲಿಂಗಾಯತ ಸಮಾಜ ಅಣಿಯಾಗಬೇಕಾಗಿದೆ.

ಚಿ.ಮೂ ಅವರು ತಮ್ಮ ಲೇಖನದಲ್ಲಿ ವೀರಶೈವವು ಹಿಂದು ಧರ್ಮದ ಅಂಗ ಎಂದು ಪ್ರತಿಪಾದಿಸಿದ್ದಾರೆ. ನಿನ್ನೆ 22-9-2000 ಕರೆದ ಪತ್ರಿಕಾಗೋಷ್ಠಿಗೆ ಆಧಾರವಾಗಿ ಪೂಜ್ಯ ಶ್ರೀ ಸಿದ್ಧಗಂಗಾ ಶ್ರೀಗಳ ಮತ್ತು ರಂಭಾಪುರಿ ಮಠದ ಶ್ರೀಗಳ ಹೇಳಿಕೆ ಒದಗಿಸಿದ್ದಾರೆ. ಶ್ರೀ ದೇಜಗೌ ಕೇಳಿದ ಪ್ರಶ್ನೆಗೆ (ಮಹಾತಪಸ್ವಿ, ಪುಟ 187) ಸಿದ್ಧಗಂಗಾ ಶ್ರೀಗಳು, ''ವೀರಶೈವ ಧರ್ಮ ಹಿಂದೂ ಧರ್ಮದ ಅರ್ಥಾತ್ ಶೈವ ಧರ್ಮದ ಒಂದು ಶಾಖೆ'' ಎಂದು ಹೇಳಿದ್ದಾರೆ. ರಂಭಾಪುರಿ ಶ್ರೀಗಳು, ''ಪರಂಪರೆ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ನಾವು ಹಿಂದೂಗಳೆ'' ಎಂದಿದ್ದಾರೆ ಎಂದೂ ಉಲ್ಲೇಖಿಸಿದ್ದಾರೆ.

ಸಿದ್ಧಗಂಗಾ ಶ್ರೀಗಳು ನುಡಿದ ಮೇಲಿನ ವಾಕ್ಯದಲ್ಲಿ ವೀರಶೈವವೂ ಒಂದು ಧರ್ಮ, ಹಿಂದುವು ಒಂದು ಧರ್ಮ, ಶೈವವೂ ಒಂದು ಧರ್ಮ ! ಒಂದು ಧರ್ಮದಲ್ಲಿ ಇನ್ನೊಂದು ಧರ್ಮ ಹೇಗೆ ಇರಲು ಸಾಧ್ಯ ? ಒಂದು ರಾಜ್ಯದಲ್ಲಿ ಇನ್ನೊಂದು ರಾಜ್ಯ ಇರದು, ಒಂದು ಜಿಲ್ಲೆಯಲ್ಲಿ ಇನ್ನೊಂದು ಜಿಲ್ಲೆ ಇರದು. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಡಾ|| ಚಿ.ಮೂ. ಅವರ ಸಂಶೋಧನ ಪ್ರಬಂಧದಲ್ಲೂ

Digitalized by e-Sahithya Documentation Forum
Sponsored by Sarayu Foundation Trust

ಅಷ್ಟೆ. ಹಿಂದುವು ಒಂದು ಧರ್ಮ, ಶೈವವೂ ಧರ್ಮವೆ, ವೀರಶೈವವೂ ಧರ್ಮವೆ. ಹೀಗೆ ಅಸ್ಪಷ್ಟ ಚಿಂತನಶೈಲಿ ಇರುವುದರಿಂದಲೇ ಇವರು ತಾವೂ ಗೊಂದಲಕ್ಕೆ ಒಳಗಾಗುವರು. ಇತರರನ್ನು ಗೊಂದಲಕ್ಕೆ ಕೆಡಹುವರು.

ಒಂದು ಗಿಡವನ್ನು ಕಲ್ಪಿಸೋಣ. ಒಂದು ಗಿಡದಲ್ಲಿ ಹಲವಾರು ಕೊಂಬೆ ಇರುತ್ತವೆ. ಅದರಲ್ಲಿ ಪುನಃ ರೆಂಬೆ ಇರುತ್ತವೆ. ಹಾಗೆ, ಒಂದು ಧರ್ಮ (religion)ದಲ್ಲಿ ಹಲವಾರು ಮತ ಇರಬಹುದು ; ಪಂಥಗಳು ಇರಬಹುದು. ಉದಾ : ವೈದಿಕ ಧರ್ಮದಲ್ಲಿ ಅದ್ವೈತ , ದ್ವೈತ ಮತಗಳು, ಪುನಃ ಅವುಗಳಲ್ಲಿ ಅನೇಕ ಪಂಥಗಳು ಇರುತ್ತವೆ. ಹಿಂದು ಒಂದು ವೃಕ್ಷ; ಅದರಲ್ಲಿ ವೇದ ಆಧಾರಿತ ವೈದಿಕ ಮತ, ಆಗಮ ಆಧಾರಿತ ಶೈವ ಮತ ಎರಡು ಕೊಂಬೆಗಳು, ಶೈವದಲ್ಲಿ ಒಂದು ರೆಂಬೆ ವೀರಶೈವ. ಆದ್ದರಿಂದ ಆಗಮ ಆಧಾರಿತ ಶೈವ ಅಥವಾ ವೀರಶೈವಗಳು ಹಿಂದೂ ಧರ್ಮದ ಅಂತರ್ಗತ ಶಾಖೆಗಳು. ಹೀಗಾಗಿ ಸಿದ್ಧಗಂಗಾ ಶ್ರೀಗಳ ಮಾತನ್ನಾಗಲೀ, ರಂಭಾಪುರಿ ಶ್ರೀಗಳ ಮಾತನ್ನಾಗಲೀ, ಚಿ.ಮೂ ಅವರ ಮಾತನ್ನಾಗಲೀ ನಾವು ನಿರಾಕರಿಸುವುದೇ ಇಲ್ಲ. ನಾವೂ ಇದನ್ನು ಸಮರ್ಥಿಸುತ್ತೇವೆ. ಆದರೆ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮವಾದ ಲಿಂಗಾಯತದ ತಂಟೆಗೆ ಮಾತ್ರ ಬರಬೇಡಿ ; ಅದು ತನ್ನ ಕ್ರಾಂತಿಕಾರಿ ಗುಣಗಳಿಂದಾಗಿ ಅಹಿಂದು ಧರ್ಮ. ಆದ್ದರಿಂದ ಲಿಂಗಾಯತ ಪದಕ್ಕೆ ಸಮಾನಾರ್ಥವಾಗಿ ವೀರಶೈವ ಬಳಸಬೇಡಿ ಎಂದು ಎಚ್ಚರಿಕೆ ಸಹಿತ ಕೊಡುತ್ತೇವೆ.

ಕ್ರೈಸ್ತರಲ್ಲಿ ಹದಿನಾರನೇ ಶತಮಾನದ ಮಾರ್ಟಿನ್ ಲೂಥರ್ ಮತ್ತು ಜಾನ್ ಕೆಲ್ವಿನರು ಬಸವನಂತೆ ಸಾಂಪ್ರದಾಯಿಕ ಕ್ರೈಸ್ತ ಧರ್ಮದ ತತ್ತ್ವಗಳ ವಿರುದ್ಧ ಪ್ರತಿಭಟಿಸಿ ವಿಚಾರ ಕ್ರಾಂತಿ ಮಾಡಿ "Protestants" ಪ್ರತಿಭಟಕರು ಎನ್ನಿಸಿಕೊಂಡರು. ಅವರು ಮಾಡಿದ್ದು ಕ್ರೈಸ್ತ ಧರ್ಮದ ಚೌಕಟ್ಟಿನ ಒಳಗೇ. ಬೌದ್ಧರಲ್ಲಿಯೂ ಹೀನಯಾನ, ಮಹಾಯಾನ, ವಜ್ರಯಾನಗಳೆಂಬ ಪಂಥಗಳಿವೆ. ಹಿಂದೂ ಧರ್ಮವೂ ಸೇರಿದಂತೆ ಎಲ್ಲ ಧರ್ಮಗಳಲ್ಲೂ ಆಚರಣೆ ಭೇದ, ಕೆಲವೊಮ್ಮೆ ತತ್ತ್ವಭೇದಗಳಿದ್ದರೂ ಅವುಗಳ ಮೂಲ ಸಿದ್ಧಾಂತ ಒಂದೇ ಆಗಿರುತ್ತದೆ. -ಡಾ|| ಚಿ.ಮೂ.

ಸಾಹಿತ್ಯ ಅಥವಾ ಸಂಶೋಧನ ಕ್ಷೇತ್ರದಲ್ಲಿ ಚಿ.ಮೂ ಬಲ್ಲಿದರು ಇದ್ದಿರಬಹುದೇನೋ ; ಆದರೆ ಧಾರ್ಮಿಕ ಸಿದ್ಧಾಂತ, ತತ್ತ್ವಜ್ಞಾನದ ಕ್ಷೇತ್ರದಲ್ಲಿ ಅವರು ಅಪಕ್ವರು. ಬಹಳಷ್ಟು ವಿಷಯ ಅವರಿಗೆ ಬೌದ್ಧಿಕವಾಗಿ ಜೀರ್ಣವೇ ಆಗಿಲ್ಲ. ಕೆಥೋಲಿಕ್-ಪ್ರಾಟೆಸ್ಟೆಂಟ್ ಕ್ರೈಸ್ತಮೊಳಗಣ ಎರಡು ಶಾಖೆಗಳು. ಉಭಯತರಿಗೂ ಏಸುವೇ ಧರ್ಮಗುರು, ಬೈಬಲ್ ಧರ್ಮಶಾಸ್ತ್ರ, ಚರ್ಚ್ ಧರ್ಮಸಂಸ್ಥೆ. ಗೃಹಸ್ಥರೂ ಧರ್ಮ ಪ್ರಚಾರಕರಾಗಲಿಕ್ಕೆ ಅವಕಾಶ ನೀಡಿದುದು, ಕ್ರಿಸ್ತನನ್ನು ಮಾತ್ರ ಪೂಜಿಸಬೇಕು, ತಾಯಿ ಮೇರಿಯ ಆರಾಧನೆ ಅಗತ್ಯವಿಲ್ಲ ಎಂದುದು, ಕೆಥೋಲಿಕ್ ಚರ್ಚ್ ಶ್ರೀಮಂತಶಾಹಿಯ ಕೈಗೊಂಬೆಯಾದುದು ಮುಂತಾದುದನ್ನು ಪ್ರತಿಭಟಿಸಲು ಪ್ರಾಟೆಸ್ಟೆಂಟ್ ಪಂಥ ಹುಟ್ಟಿತು. ಆದ್ದರಿಂದ ವೀರಶೈವ-ಲಿಂಗಾಯತಗಳ ವ್ಯತ್ಯಾಸವನ್ನು ಕ್ಯಾಥೋಲಿಕ್-ಪ್ರಾಟೆಸ್ಟೆಂಟ್ ವ್ಯತ್ಯಾಸಕ್ಕೆ ಹೋಲಿಸಲು ಬರದು. ಯಹೂದಿ ಧರ್ಮ-ಕ್ರೈಸ್ತ ಧರ್ಮಗಳಿಗೆ ಹೋಲಿಕೆ ಕೊಟ್ಟು ಬ್ರಾಹ್ಮಣ ಹಿಂದೂ ಧರ್ಮ-ಲಿಂಗಾಯತ ಧರ್ಮಗಳನ್ನು ಹೋಲಿಸಬಹುದು. ಕೆಥೋಲಿಕ್-ಪ್ರಾಟೆಸ್ಟೆಂಟ್‌ರಲ್ಲಿ ವ್ಯತ್ಯಾಸವಿರುವುದು ಕೇವಲ ಕೆಲವು ಆಚರಣೆಗಳಲ್ಲೇ ವಿನಾ ಮೂಲ ತತ್ತ್ವದಲ್ಲಲ್ಲ. ಹೀನಯಾನವೇ ಇರಲಿ, ಮಹಾಯಾನವೇ ಇರಲಿ ಉಭಯತರಿಗೂ ಬುದ್ಧ ಧರ್ಮಗುರು, ತ್ರಿಪೀಟಕಗಳು ಧರ್ಮಶಾಸ್ತ್ರ, ಅದೇ ರೀತಿ ಇಸ್ಲಾಮಿನ ಷಿಯಾ-ಸುನ್ನಿ. ಅಲ್ಲಹ ದೇವರು, ಮೊಹಮ್ಮದರು ಪ್ರವಾದಿ, ಕುರ್ ಆನ್ ಧರ್ಮಗ್ರಂಥ- ಈ ನಂಬಿಕೆಗಳು ಇಬ್ಬರಿಗೂ ಒಂದೇ. ಇಲ್ಲಿ ಹಾಗಲ್ಲ ವೀರಶೈವವಾದಿಗಳು ಸದಾ ಧರ್ಮಗುರು ಬಸವಣ್ಣನವರನ್ನು ಕೆಲವೊಮ್ಮೆ ಅವಮಾನಿಸುತ್ತಾರೆ. ಕೆಲವೊಮ್ಮೆ ಗೌರವಿಸದೆ ಮೌನವಾಗಿ ಇರುತ್ತಾರೆ.

ಲಿಂಗಾಯತ ಧರ್ಮದ ಆತ್ಮವಾದ ಗಣಾಧಿಪತಿ ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪುವುದಿಲ್ಲ; ವಚನ ಸಾಹಿತ್ಯ ಧಾರ್ಮಿಕ ಸಂವಿಧಾನವೆಂದು ಮನ್ನಿಸದೆ ಹಲವಾರು ದಾರಿಗಳಲ್ಲಿ ಹರಿಯುತ್ತಾರೆ.

ಗಮನಿಸಬೇಕು : ಭಾರತೀಯವೇ ಆದ ಬೌದ್ಧ, ಜೈನ್, ಸಿಖ್ ಧರ್ಮಗಳು ಹಿಂದೂ ದೇವತೆಗಳನ್ನು ಪೂಜಿಸುವುದಿಲ್ಲ, ವೇದಗಳನ್ನು ಮಾನ್ಯ ಮಾಡುವುದಿಲ್ಲ. ಭಾರತದ ಉಳಿದ ಭಾಗಗಳ ಶೈವರಂತೆ ವೀರಶೈವರಿಗೆ ವೇದಗಳು ಮಾನ್ಯವಾಗಿವೆ. ವಿಭೂತಿ, ರುದ್ರಾಕ್ಷಿ, ಓಂ ನಮಃ ಶಿವಾಯ ಎಂಬ ಮಂತ್ರ ಎಲ್ಲರಿಗೂ ಸಮಾನ. ಹಬ್ಬ, ಹರಿದಿನಗಳು ಎಲ್ಲರಿಗೂ ಸಮಾನ. ಬಸವಣ್ಣನ ಜನನವೇ ಶಿವ ದೇವಾಲಯದ ನಂದಿಯ ಅನುಗ್ರಹದಿಂದ ಎಂಬ ಕತೆಯನ್ನೂ, ಅವನ ಗುರು ಜಾತವೇದ ಮುನಿ ಎಂಬುದನ್ನೂ ವೀರಶೈವರು ನಂಬುತ್ತಾರೆ. ಎಲ್ಲ ವೀರಶೈವರೂ ಶಿವ ದೇವಾಲಯಗಳಿಗೆ ಹೋಗುತ್ತಾರೆ. ಶಿವ ದೇವಾಲಯಗಳಿಗೆ ಹೋಗುವುದು ಸರಿಯಲ್ಲ ಎಂದು ಈಗಿನ ಚಿತ್ರದುರ್ಗ ಶ್ರೀ ಮುರುಘಾ ಮಠದ ಶ್ರೀಗಳು ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಆದರೆ ಅದೇ ಮುರಿಗಾ ಸಂಸ್ಥಾನದ ಸ್ಥಾಪಕರಾದ ಮುರಿಗಾ ಶಾಂತವೀರ ಸ್ವಾಮಿಗಳ ಶಿಷ್ಯ ಮುರಿಗಾ ಗುರುಸಿದ್ಧರು (1700) ಬರೆದ ಹಾಲಾಸ್ಯ ಪುರಾಣವು ಮಧುರೆಯ ಮೀನಾಕ್ಷಿ ದೇವಾಲಯದ ಸುಂದರೇಶ್ವರ ದೈವವನ್ನು ಕುರಿತದ್ದು. ವೀರಶೈವರು ಶಿವನ ನಿಷ್ಠಾವಂತ ಆರಾಧಕರಾದರೂ, ಶ್ರೀ ವಿಷ್ಣು, ಹನುಮಂತ ಇತ್ಯಾದಿ ದೈವಗಳನ್ನೂ ಪೂಜಿಸುತ್ತಾರೆ. ಅವರ ಪ್ರಕಾರ ಅವು ಶಿವನ ಅಧೀನ ದೈವಗಳು. ಹಾವೇರಿಯಲ್ಲಿ ಕೈಯಲ್ಲಿ ಶಿವಲಿಂಗ ಹಿಡಿದ ವಿಷ್ಣುವಿನ ಹದಿಮೂರನೇ ಶತಮಾನದ ಶಿಲ್ಪವೇ ಇದೆ. ಮೇಲಿನ ಎಲ್ಲ ಮಾಹಿತಿಯು ಹಲವು ಸಂಗತಿಗಳನ್ನು ತಾನಾಗಿಯೇ ವಿವರಿಸುತ್ತದೆ.-ಡಾ|| ಚಿ.ಮೂ

ಲಿಂಗಾಯತ ಧರ್ಮದ ಆದಿಗುರು ಬಸವಣ್ಣನವರನ್ನು, ವಚನ ಸಾಹಿತ್ಯವನ್ನು ಬಳಸಿಕೊಳ್ಳದೆ ಚಿ.ಮೂ ವೀರಶೈವವನ್ನು ಪ್ರತಿಪಾದಿಸಿದರೆ ನಮ್ಮದೇನೂ ಅಭ್ಯಂತರವೇ ಇಲ್ಲ. ಪರಧರ್ಮೀಯರಾದ ಅವರ ನಂಬಿಕೆ ಅವರಿಗೆ ನಮ್ಮ ನಂಬಿಕೆ ನಮ್ಮದು ಎಂದು ಸುಮ್ಮನಿರಬಹುದು. ಆದರೆ ಅವರು ತಮ್ಮ ವೀರಶೈವದ ಮನೆಯ ಕೊಳೆತಂದು ಲಿಂಗಾಯತ ಧರ್ಮದ ಮನೆಯೊಳಕ್ಕೆ ತುಂಬುವ ಹೀನ ಕೆಲಸಕ್ಕೆ ಕೈ ಹಾಕಿರುವುದು ಖಂಡನಾರ್ಹವಾಗಿದೆ. ಹಬ್ಬ-ಹರಿದಿನ ಹಿಂದುಗಳಿಗೆ ಮತ್ತು ವೀರಶೈವರಿಗೆ ಸಮಾನ ಎನ್ನುತ್ತಾರೆ. ಇದನ್ನು ಲಿಂಗಾಯತರ ಪರವಾಗಿ ಮಾತ್ರವಲ್ಲದೆ ವೀರಶೈವರ ಪರವಾಗಿಯೂ ನಾವು ವಿರೋಧಿಸುತ್ತೇವೆ. ವೈಷ್ಣವ ಹಿಂದೂಗಳ ಹಬ್ಬಗಳಾದ ರಾಮ ನವಮಿ, ಕೃಷ್ಣ ಜನ್ಮಾಷ್ಟಮಿ ಮುಂತಾದುವನ್ನು ವೀರಶೈವರು ಸಹ ಆಚರಿಸರು. ಇನ್ನು ಸಾಮಾನ್ಯವಾಗಿ ವೈದಿಕ ಹಿಂದುಗಳ ಎಲ್ಲ ಹಬ್ಬಗಳು ನರಕ ಚತುರ್ದಶಿ, ಬಲಿಪಾಡ್ಯಮಿ, ದಸರಾ ಎಲ್ಲ ಆರ್ಯರಿಂದ ದ್ರಾವಿಡರ ವಧೆಯಾದ ಪ್ರಸಂಗಗಳನ್ನೇ ಬಿಂಬಿಸುವುದರಿಂದ ಪ್ರಾಜ್ಞರಾದ ಲಿಂಗಾಯತರಾಗಲೀ, ತಿಳುವಳಿಕೆಯುಳ್ಳ ವೀರಶೈವರಾಗಲೀ ಆಚರಿಸರು. ಚಿತ್ರದುರ್ಗ ಬೃಹನ್ಮಠದ ಮುರಿಗಾ ಗುರುಸಿದ್ಧರು (1700) ಮಧುರೆಯ ಮೀನಾಕ್ಷಿ ದೇವಾಲಯದ ಸುಂದರೇಶನನ್ನು ಸ್ತುತಿಸಿದ್ದರೂ ಯಾವುದೋ ಕಾಲದಲ್ಲಿ ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದ ಕಕ್ಷೆಯೊಳಗೆ ಪ್ರವೇಶ ಮಾಡಿರುವುದರಿಂದ ಈಗ ಅವರು ವಚನ ಸಾಹಿತ್ಯ ಬೋಧಿಸುವಂತೆ ನಡೆಯಬೇಕೇ ವಿನಾ ಪೂರ್ವದ ಶೈವ ಮಾರ್ಗದಲ್ಲಲ್ಲ. ಇಷ್ಟಲಿಂಗ ಬಿಟ್ಟು ಬೇರೆ ಏನನ್ನೂ ಪೂಜಿಸಬಾರದ ಲಿಂಗಾಯತರು, ಶಿವನಲ್ಲದೆ ಅನ್ಯ ದೈವಕ್ಕೆ ತಲೆಬಾಗಬಾರದು ಎಂಬ ನಿಜ ವೀರಶೈವರು ಬುದ್ಧಿಗೇಡಿಗಳಾಗಿ ವಿಷ್ಣು, ಹನುಮಂತ, ಮುಂತಾದ ದೇವತೆಗಳನ್ನು ಪೂಜಿಸುವುದು ಅವರ ಧರ್ಮಾಚರಣೆಗೆ ಸಲ್ಲದ್ದು. ಆದ್ದರಿಂದ ಚಿ.ಮೂ ವೀರಶೈವವನ್ನು ತಮ್ಮದನ್ನಾಗಿ ಇಟ್ಟುಕೊಂಡು ಅವರು ಚಿರಕಾಲ ಹಿಂದೂ ಧರ್ಮದಲ್ಲೇ ಇರಲಿ. ಆದರೆ ಮೂಲಭೂತ ವ್ಯತ್ಯಾಸ ಹೊಂದಿರುವ ಲಿಂಗಾಯತ ಧರ್ಮವು ಭಾರತೀಯ ಮೂಲದವೇ ಆದ ಜೈನ, ಬೌದ್ಧ, ಸಿಖ್ ಧರ್ಮಗಳಂತೆ ಅಹಿಂದು

Digitalized by e-Sahithya Documentation Forum
Sponsored by Sarayu Foundation Trust

ಧರ್ಮ, ಸ್ವತಂತ್ರ ಧರ್ಮ, ವಚನ ಸಾಹಿತ್ಯ ಆಧಾರಿತವಾದ ಸ್ವಾವಲಂಬಿ, ಪ್ರಗತಿಪರ, ಪರಿಪೂರ್ಣಧರ್ಮ. ವೇದ ವರ್ಣಾಶ್ರಮ ಆಧಾರಿತ ಹಿಂದು ಧರ್ಮದ ಕಕ್ಷೆಯಿಂದ ಲಿಂಗಾಯತ ಧರ್ಮವು ಹೊರಹೋದ ಮಾತ್ರಕ್ಕೆ ಅದು ಹಿಂದು ವಿರೋಧಿಯಲ್ಲ, ಭಾರತ ವಿರೋಧಿಯಲ್ಲ. ತನ್ನ ವೈಶಿಷ್ಟ್ಯ ಕಳೆದುಕೊಂಡು ಕ್ರಾಂತಿಕಾರಿ ಧೋರಣೆ ಹತ್ತಿಕ್ಕಿಕೊಂಡು ಹಿಂದು ಕಕ್ಷೆಯಲ್ಲಿ ಅಡಿಯಾಳಾಗಿ ಇರುವುದಕ್ಕಿಂತಲೂ ಲಿಂಗಾಯತ ಧರ್ಮವು ಸ್ವತಂತ್ರ, ಸಾರ್ವಭೌಮನಾಗಿ ದೀನ-ದಲಿತ-ದುಃಖಿತರ ಬಂಧ ವಿಮೋಚನೆಗೆ ವಚನ ಸಾಹಿತ್ಯದ ಶಸ್ತ್ರ ಹಿಡಿದು ಹೋರಾಟಕ್ಕೆ ನಿಲ್ಲುವುದು ಎಂದಿಗಿಂತಲೂ ಇಂದು ಅಗತ್ಯವಿದೆ.

ಕೇರಳದ ಗುರುವಾಯೂರಪ್ಪನ್ (ಶ್ರೀಕೃಷ್ಣ) ದೇವಾಲಯವನ್ನು ನಿಮ್ನ ವರ್ಗದವರಾದ ಸಚಿವ ವಯಲಾರ್ ರವಿಯವರ ಮಗ ಪ್ರವೇಶಿಸಿದ್ದಕ್ಕಾಗಿ ಅಲ್ಲಿಯ ಪೂಜಾರಿಗಳು ಶುದ್ಧೀಕರಣ ಮಾಡಿದ್ದಲ್ಲದೆ, ದಂಡ ಕಟ್ಟಿದ್ದಾರೆ. ಇಂಥ ಅಜ್ಞಾನಯುಕ್ತ ಅಮಾನುಷ, ಜಾತಿ ಭೇದ ತುಂಬಿರುವ ಹಿಂದು ಆಚರಣೆಗಳು, ಉಸಿರು ಕಟ್ಟಿಸುವ ವಾತಾವರಣ ನಿರ್ಮಿಸುವುದರಿಂದ ಲಿಂಗಾಯತ ಧರ್ಮವು ಬೇಗನೆ ಹಿಂದು ಕಕ್ಷೆಯಿಂದ ಹೊರಹೋದಷ್ಟು ಒಳ್ಳೆಯದಲ್ಲವೆ ?

ಸಮಾರೋಪದ ಮಾತುಗಳು

ಚಿ.ಮೂ. ಮೇ ತಿಂಗಳಿನ ದಿ. 24-25ರಂದು ಕನ್ನಡ ಪ್ರಭಾದಲ್ಲಿ ಪ್ರಕಟಿಸಿದ ಲೇಖನಕ್ಕೂ ದಿ. 22-9-2000ರಂದು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಗೂ ಸೂಕ್ಷ್ಮವಾದ ವ್ಯತ್ಯಾಸವನ್ನು ನಾವು ಗುರುತಿಸಬಹುದು. ವೀರಶೈವ-ಲಿಂಗಾಯತಗಳನ್ನು ಸಮಾನಾರ್ಥದಲ್ಲಿ ಬಳಸಿ ಗೊಂದಲ ಉಂಟುಮಾಡುವ ಪ್ರಯತ್ನ ಸ್ವಲ್ಪ ದುರ್ಬಲಗೊಂಡಂತೆ ಎನಿಸುತ್ತಿದೆ. ವೀರಶೈವವು ಹೇಗೆ ಹಿಂದೂದ ಅವಿಭಾಜ್ಯ ಅಂಗ, ವೀರಶೈವವು ಅಹಿಂದು ಎಂಬ ಮಹಾಸಭೆಯ ನಿಲುವು ತಪ್ಪು ಎನ್ನುವುದಕ್ಕೆ ಪೋಷಕವಾದ ಸಾಕಷ್ಟು ಅಂಶಗಳನ್ನು ಚಿ.ಮೂ ನೀಡಿರುವುದಕ್ಕೆ ಧನ್ಯವಾದಗಳು.

ಆದರೆ ಅವರಲ್ಲಿ ಕಳಕಳಿಯ ಮನವಿ ಏನೆಂದರೆ, ವೀರಶೈವ ಪಂಥ, ಲಿಂಗಾಯತ ಧರ್ಮ ಎಂಬ ಇಬ್ಬರು ಓಟಗಾರರು ಗುರಿ ಮುಟ್ಟಲು ಓಡುವಾಗ ವೀರಶೈವವು ವಿಶಿಷ್ಟ ಲಕ್ಷಣಗಳ ಅಭಾವದಿಂದ ಸ್ವತಂತ್ರ ಧರ್ಮ ಎನ್ನಿಸಿಕೊಳ್ಳಲು ಅಸಂಭವ ಎಂದು ಮನವರಿಕೆಯಾಗುತ್ತಲೇ ಓಡಿ ಗುರಿ ಮುಟ್ಟಲು ಸಶಕ್ತವಾದ ಲಿಂಗಾಯತ ಧರ್ಮ ಎಂಬ ಓಟಗಾರನಿಗೆ ತೊಡರು ಕಾಲನ್ನು ಇಕ್ಕಬಾರದು. ಅಸತ್ಯವನ್ನು ನುಡಿದು ಚಿ.ಮೂ ಏನೂ ಸಾಧಿಸಲಾರರು ; ಎಂದಿದ್ದರೂ ಸತ್ಯವು ಹೊರಬಂದೇ ಬರುತ್ತದೆ.

ಲಿಂಗಾಯತ ಧರ್ಮವು ಹಿಂದು ಕಕ್ಷೆಯ ಹೊರಗೆ ಹೋದರೂ ಅದು ಕೇವಲ ಧರ್ಮವಾರು ಜನಗಣತಿಗಾಗಿಯೇ ವಿನಾ ಹಿಂದೂ ವಿರೋಧಿ ಧೋರಣೆಯಿಂದಲ್ಲ. ಭಾರತದಲ್ಲಿ ಹುಟ್ಟಿಯೂ ಸ್ವತಂತ್ರ ಧರ್ಮಗಳ ಅನುಯಾಯಿಗಳೆಂದು ಎಣಿಕೆಯಾಗುವ ಬೌದ್ಧ, ಜೈನ, ಸಿಖ್ ಇವರಾರೂ ಹಿಂದು ಭಾರತ ವಿರೋಧಿಗಳಲ್ಲ. ಭಾರತೀಯ ಪರಂಪರೆಯ ಎಲ್ಲ ಧರ್ಮ, ಪಂಥಗಳ ಮೂಲ ಪುರುಷ, ಯೋಗಿರಾಜ ಶಿವ ನಮ್ಮ ಮುತ್ತಜ್ಜ. ಕ್ರಾಂತಿ ಪುರುಷ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವು ಸರ್ವಾಂಗ ಪರಿಪೂರ್ಣವಾದ ಸದ್ಧರ್ಮ, ಮಾನವ ಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮ, ಪ್ರಗತಿಪರ ಧರ್ಮ. ಇಂಥ ಅಮೂಲ್ಯ ವಜ್ರವನ್ನು ಜಗತ್ತಿಗೆ ಹೆಮ್ಮೆಯಿಂದ ತೋರಿಸಬೇಕಾಗಿದೆ. ಕೇವಲ ಒಂದು ಜಾತಿ ಉತ್ತಮವಾದವನ್ನು ಪೋಷಿಸಲಿಕ್ಕೆ ವೀರಶೈವ ಪದವನ್ನು ಶವಾಗಾರದಿಂದ ಹೊತ್ತು ತಂದು ಲಿಂಗಾಯತಕ್ಕೆ ಆರೋಪಿಸಿ "ಅವನ ಎರಡೂ ಕಣ್ಣು ಹೋಗುವುದಾದರೆ ನನ್ನ ಒಂದು ಕಣ್ಣು ಹೋಗಲಿ" ಎಂಬ ದ್ವೇಷಪೂರಿತ ಸಣ್ಣತನವನ್ನು ಚಿ.ಮೂ ಮತ್ತು ವೀರಶೈವ ಮಹಾಸಭೆ ಕೈಬಿಡಲಿ ಎಂಬುದೇ ನಮ್ಮ ಕಳಕಳಿಯ ಮನವಿ.

(ಮುಗಿಯಿತು)

ಡಾ॥ ಚಿ.ಮೂ ಅವರ ಪ್ರತಿಕ್ರಿಯೆ

ಬೆಂಗಳೂರು-40, ದಿ : 12-9-2000

ಸನ್ಮಾನ್ಯೆಯರಾದ ಮಾತೆ ಮಹಾದೇವಿಯವರಲ್ಲಿ ವಿಜ್ಞಾಪನೆಗಳು.

"ಕಲ್ಯಾಣ ಕಿರಣ"ದಲ್ಲಿ ಪ್ರಕಟವಾದ ನನ್ನ ಲೇಖನ, ಅದರ ತಮ್ಮ ವಿಮರ್ಶೆ ಎರಡನ್ನೂ ಯಾರೋ ತಂದುಕೊಟ್ಟರು. ಓದಿದೆ. ನಗು ಬಂದಿತು.

1. ತಾವು ಒಬ್ಬ ಲೇಖಕಿಯಾಗಿ, ಇನ್ನೊಬ್ಬರ ಲೇಖನವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಅವರ ಅನುಮತಿ ಪಡೆಯಬೇಕೆಂಬ ಪ್ರಾಥಮಿಕ ನೀತಿಯೂ ತಮಗೆ ತಿಳಿಯದು. (ಅದರ ಕೆಲಭಾಗಗಳನ್ನು ಉಲ್ಲೇಖಿಸಿ ವಿಮರ್ಶಿಸಲು ಅನುಮತಿ ಬೇಕಾಗಿಲ್ಲವೆಂಬ ಮಾತು ಬೇರೆ.) ಪತ್ರಿಕೆ ನಡೆಸುವ ಯಾರನ್ನಾದರೂ ಈ ಬಗ್ಗೆ ಕೇಳಿ ನೋಡಿ, ತಮಗೆ ಗೊತ್ತಿಲ್ಲದಿದ್ದರೆ.
2. ಒಬ್ಬ ಲೇಖಕಿಯಾಗಿ ಒಂದು ಬೌದ್ಧಿಕ/ವಿಚಾರಾತ್ಮಕ ಚರ್ಚೆಯಲ್ಲಿ ತೊಡಗುವ ಕ್ರಮ ತಮಗೆ ತಿಳಿಯದು ಎಂಬುದು ಸ್ಪಷ್ಟ.
3. ತಾವು ಬಳಸಿರುವ ಕಠಿಣ, ಕೆಲವೊಮ್ಮೆ ಅಸಭ್ಯ ಎನ್ನಬಹುದಾದ ಪದಗಳು ಒಂದು ಸಾಮಾನ್ಯ ಸಂಗತಿಯನ್ನು ಎತ್ತಿ ತೋರುತ್ತವೆ. ವ್ಯಕ್ತಿಯ ವ್ಯಕ್ತಿತ್ವದಲ್ಲಿನ ದೌರ್ಬಲ್ಯ ಅಥವಾ ವಾದದ ಅಸಮರ್ಥತೆ ಇವುಗಳಿಂದಾಗಿ ವ್ಯಕ್ತಿ ಗೊಡ್ಡು ಮಾತುಗಳು, ಹೆಚ್ಚು ಮಾತುಗಳ ಕಟು ಭಾಷೆಯ ಬಳಕೆಗೆ, ಬೈಗುಳಕ್ಕೆ ಕೈ ಹಾಕುತ್ತಾನೆ. ಕೆಟ್ಟ ಭಾಷೆ ದೌರ್ಬಲ್ಯದ, ಟೊಳ್ಳುತನದ ಸಂಕೇತ. ಗಮನಿಸಿ-ನನ್ನ ಇಷ್ಟು ವರ್ಷದ ಬರಹಗಳಲ್ಲಿ ಎಲ್ಲಿಯೂ ಕೆಟ್ಟ ಭಾಷೆ ಬಳಸಿಲ್ಲ. ಹಿಂದೆ ತಮ್ಮ "ಲಿಂಗದೇವ" ಅಂಕಿತದ ಬಗ್ಗೆ ಬರೆದಾಗಲೂ. ಅಲ್ಲಿ ಕೆಲವು ನೇರ ಪ್ರಶ್ನೆಗಳನ್ನು ಕೇಳಿದ್ದೆ. ಆದರೆ ಅತ್ಯಂತ ಸಭ್ಯಭಾಷೆಯಲ್ಲಿ. ನಿಮಗೆ ತಿಳಿಸಿದ್ದೆನೋ ಇಲ್ಲವೋ ತಿಳಿಯದು. ಹಿಂದೊಮ್ಮೆ ನನ್ನ ಮುಂದೆ ತಮ್ಮ ಬಗ್ಗೆ ಅಸಭ್ಯವಾಗಿ ಮಾತಾಡಿದಾಗ ಅವರನ್ನು ನಾನು ವಿರೋಧಿಸಿದ್ದೆ. ಸ್ವಾಭಿಮಾನ ನಾಣ್ಯಕ್ಕೆ ಎರಡು ಮುಖಗಳು. ನನ್ನ ಆತ್ಮ ಗೌರವ ಮುಖ್ಯ ಎಂಬುದು; ಇನ್ನೊಬ್ಬನ ಆತ್ಮಗೌರವವೂ ನನ್ನದಷ್ಟೇ ಮುಖ್ಯ ಎಂಬ ಅರಿವು ನಿಜವಾದ ಸ್ವಾಭಿಮಾನದ ಲಕ್ಷಣ ಅದು.
4. ಕೊನೆಯದಾಗಿ ಒಂದು ಚಿಕ್ಕ ಕೋರಿಕೆ. ಇನ್ನೂ ಹೆಚ್ಚು ಕಟುವಾದ ಭಾಷೆ ಬಳಸಿರಿ. ನಿಮ್ಮ ಬಿರುನುಡಿ ನನಗೆ ಸಮಾಧಾನ ತಂದಿಲ್ಲ. ನಿಮ್ಮ ಶಬ್ದ ಭಂಡಾರದಲ್ಲಿ-ಎಲ್ಲರಲ್ಲಿರುವಂತೆ-ಇನ್ನೂ ಹಲವು ಅಸಭ್ಯ ಮಾತುಗಳಿರುತ್ತವೆ. ಅವನ್ನೂ ಬಳಸಬಹುದು. ಬಸವಣ್ಣನವರ ಆರಾಧಕರಾದ ತಮಗೆ ಆ ಭಾಷೆ ಶೋಭೆ ತರುವುದೇ ಎಂಬ ಮಾತು ಬೇರೆ. ಹೆಚ್ಚು ಅಸಭ್ಯ ಭಾಷೆ ಅಂದರೆ ಅಷ್ಟೂ ವಾದ ಟೊಳ್ಳು ಎಂಬರ್ಥ.

ತಮ್ಮ ವಿಶ್ವಾಸಿ, ಎಂ. ಚಿದಾನಂದಮೂರ್ತಿ

ಓಂ ಶ್ರೀಗುರು ಬಸವ ಲಿಂಗಾಯನಮಃ

ಬೆಂಗಳೂರು-10

86666

ದಿ. 15-9-2000

ಸನ್ಮಾನ್ಯರಾದ ಚಿದಾನಂದ ಮೂರ್ತಿಯವರಿಗೆ

ಶ್ರೀ ಗುರು ಬಸವ ಸ್ಮರಣಪೂರ್ವಕ ಶರಣಾರ್ಥಿಗಳು.

ಅಂತೂ ತಡವಾಗಿಯಾದರೂ ನಿಮ್ಮಿಂದ ಪ್ರತಿಕ್ರಿಯೆ ಬಂದಿತು ; ನಿರೀಕ್ಷಿಸಿದ್ದಂತೆ ತಾತ್ವಿಕವಾಗಿ ಉತ್ತರ ರೂಪದಲ್ಲಲ್ಲ, ಶಿಷ್ಟಾಚಾರವನ್ನು ಬೋಧಿಸುವ ರೀತಿಯಲ್ಲಿ.

ಯಾರೇ ಆದರೂ ಒಂದು ಪತ್ರಿಕೆಯಲ್ಲಿ ಪ್ರಕಟವಾದ ಲೇಖನವನ್ನು ಪುನಃ ಪ್ರಕಟಿಸಬೇಕಾದಲ್ಲಿ ಲೇಖಕರ ಮತ್ತು ಪ್ರಕಾಶಕರ ಅನುಮತಿ ಪಡೆಯಬೇಕೆಂಬುದು ನನಗೂ ಗೊತ್ತು. (ಬಸವ ಜಯಂತಿ ಸಮಯದಲ್ಲಿ ಪ್ರಜಾವಾಣಿ-ಸುಧಾಗಳಲ್ಲಿ ಬಸವಣ್ಣನವರನ್ನು ಕುರಿತು ಬಂದ ಲೇಖನಗಳನ್ನು ಮರುಮುದ್ರಿಸಿಕೊಳ್ಳಬಯಸಿ ಆಯಾ ಸಂಪಾದಕರ ಅನುಮತಿ ಕೇಳಿದಾಗ ಅವರು ಕೊಟ್ಟುದಲ್ಲದೆ

Digitalized by e-Sahithya Documentation Forum
Sponsored by Sarayu Foundation Trust

ಯಾವ ಪತ್ರಿಕೆಗಳಿಂದ ಆಯ್ದುಕೊಂಡುದು ಎಂಬುದನ್ನು ಕಾಣಿಸಲು ತಿಳಿಸಿದ್ದರು. ಆ ಲೇಖನ ಪ್ರಕಟಿಸಬೇಕೆನ್ನುವಾಗಲೇ ನಿಮ್ಮ ಕುತಂತ್ರದ ಲೇಖನ ಪ್ರಕಟಗೊಂಡು ಅದಕ್ಕೆ ವಿಮರ್ಶೆ ಬರೆಯಲು ಆರಂಭಿಸಿದ್ದರಿಂದ ಕಲ್ಯಾಣ ಕಿರಣದ ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಸಂಚಿಕೆಗಳು ಬಹುಪಾಲು ಪುಟಗಳು ನಿಮಗೆ ಆಹುತಿಯಾಗಬೇಕಾಯಿತು.)

ಆದರೆ ನಿಮ್ಮ ಅರುಳುಮರುಳನ್ನು ಕಂಡು ನನಗೆ ಸೋಜಿಗವಾಗುತ್ತಿದೆ. ಏಕೆಂದರೆ ನನಗೆ ಪ್ರಾಥಮಿಕ ಜ್ಞಾನ ಬೋಧಿಸಲು ಹೊರಟು ಮರುವಾಕ್ಯದಲ್ಲೇ ಬರೆದಿದ್ದೀರಿ. "ಆದರೆ ಕೆಲಭಾಗಗಳನ್ನು **ಉಲ್ಲೇಖಿಸಿ ವಿಮರ್ಶಿಸಲು ಅನುಮತಿ ಬೇಕಾಗಿಲ್ಲವೆಂಬ ಮಾತು ಬೇರೆ.**" ಎಂದು ಎರಡನ್ನೂ ನೀವೇ ಬರೆದಿದ್ದೀರಿ. ಇದರಿಂದ ನೀವು ನಗೆಪಾಟಲಿಗೆ ಈಡಾಗುತ್ತೀರಿ ಎಂಬ ಅರಿವಿಲ್ಲವೆ ? ಅಥವಾ ಮೊದಲ ಅಭಿಪ್ರಾಯ ಬರೆದಾದ ಮೇಲೆ ನಿಮ್ಮಲ್ಲಿ ಎರಡನೆಯ ಅಭಿಪ್ರಾಯ ಅರ್ಥಾತ್ ತಿಳುವಳಿಕೆ ಮೂಡಿತೆ ? ಒಂದಕ್ಕೊಂದು ವಿರೋಧಾಭಾಸವಾಗಿದ್ದರೂ ಪೋಸ್ಟ್‌ಕಾರ್ಡ್ ವ್ಯರ್ಥವಾಗುವುದು ಬೇಡ ಎಂದು ಮುಂದುವರಿಸಿದ್ದೀರಾ ?

ನಿಮ್ಮ ಲೇಖನದ ಕೇವಲ ಕೆಲವು ಭಾಗಗಳನ್ನು ಉದ್ಧರಿಸುವುದು ಅಸಾಧ್ಯವಾಗಿ, ಅದರ ಪ್ರತಿ ವಾಕ್ಯವೂ ವಿಮರ್ಶೆಗೆ ಅರ್ಹವಾದುದರಿಂದ, ಲೇಖಕರು ಪ್ರಕಾಶಕರು ಒಪ್ಪಲಿ ಬಿಡಲಿ ಅವನ್ನು ಉಲ್ಲೇಖಿಸಿ ವಿಮರ್ಶಿಸುವುದು ಅನಿವಾರ್ಯ ಕರ್ತವ್ಯವಾಯಿತು. ಸನ್ಮಾನ್ಯ ಚಿದಾನಂದ ಮೂರ್ತಿಗಳೇ, ತಾವು ಮಾತ್ರ ಹಾವು-ಚೇಳುಗಳನ್ನು ಬಿಡಲು ಹಕ್ಕುದಾರರು; ಅವುಗಳನ್ನು ಹೊಡೆಯಲು ನಾವು ಹಕ್ಕುದಾರರಲ್ಲ ಎಂದೇ ತಮ್ಮ ಭಾವನೆಯಾಗಿದೆ. ವಿಶ್ವಗುರು ಬಸವಣ್ಣನವರು ಕೊಟ್ಟ ಒಂದು ಶ್ರೇಷ್ಠ ಧರ್ಮದ ಶುಚಿತ್ವವನ್ನೇ ಕಳೆಯಲು ತಾವು ಸನ್ನದ್ಧರಾಗಿದ್ದೀರಿ. ಇಂಥ ಆಕ್ರಮಣದ ವಿರುದ್ಧ ನಾವು ಸಂರಕ್ಷಣೆಗಾಗಿಯೂ ಹೋರಾಡಬಾರದೆ? ನಮ್ಮ ಭಾಷೆ ಕೆಲವು ಕಡೆ ಮೃದುವಾಗಿ, ಮತ್ತೆ ಕೆಲವು ಕಡೆ ಬಿರುಸಾಗಿ, ಇನ್ನೂ ಕೆಲವು ಕಡೆ ಕಟುವಾಗಿ ಇದೆಯಲ್ಲವೆ? ಅಹುದು ಲಿಂಗಾಯತ ಸಮಾಜದೊಳಕ್ಕೆ ಸಾಹಿತ್ಯದ ಮೂಲಕ ನೀವು ತೂರಿಸಿದ ಝುರಿ, ಶತಪದಿ, ಚೇಳು, ಮಂಡರಗಪ್ಪೆ, ಹಾವು ಹೇಗೆ ಕ್ರಮವಾಗಿ ಬಲವುಳ್ಳ ಪ್ರಾಣಿಗಳೋ ಅದಕ್ಕೆ ತಕ್ಕಂತೆ ಅಸ್ತ್ರವನ್ನು ಪ್ರಯೋಗ ಮಾಡಬೇಕು ತಾನೆ ?

ಅಸಭ್ಯ ಭಾಷೆಯನ್ನು ನಾನು ಎಲ್ಲಿಯೂ ಬಳಸಿಲ್ಲ, ಬಳಸುವುದೂ ಇಲ್ಲ. ನಮ್ಮ ಕಟ್ಟಾವಿರೋಧಿಗಳನ್ನೂ ಸಹ ನಾವು ಏಕವಚನದಲ್ಲಿ ಸಂಬೋಧಿಸುವುದಿಲ್ಲ. ನಿಮಗೆ ಬುದ್ಧಿ ಕಲಿಸಲಿಕ್ಕಾಗಿ, ಉದ್ದೇಶಪೂರ್ವಕವಾಗಿ ಆವರಣದಲ್ಲಿ ವಿಷಾದ ವ್ಯಕ್ತಪಡಿಸಿ ಏಕವಚನ ಬಳಸಿದ್ದೇನೆ. ನಿಮ್ಮ-ನಮ್ಮಂಥ ಸಾಮಾನ್ಯರನ್ನು ಅವನು-ಇವನು, ಆಕೆ-ಈಕೆ ಎಂದರೆ ನಿಮಗೆ-ನಮಗೆ ಕೋಪಬರುವುದಲ್ಲವೆ ? (ನಾನಂತೂ ಕೋಪ ಮಾಡಿಕೊಳ್ಳುವುದಿಲ್ಲ. ಗದುಗಿನ ಜಗದ್ಗುರು ತೋಂಟದಾರ್ಯ ಸ್ವಾಮಿಗಳು, ವೀರಶೈವ ಮಹಾಸಭೆಯ ಉಪಾಧ್ಯಕ್ಷ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳರು ಮುಂತಾದವರು ನನ್ನನ್ನು ಕುರಿತು ಮಾತನಾಡುವಾಗ ಕೋಪದಿಂದ ಆಕೆ-ಈಕೆ ಎಂದೇ ಮಾತನಾಡುತ್ತಾರಂತೆ. ಇದನ್ನು ಬಂದು ಒಬ್ಬರು ಹೇಳಿದಾಗ ನನಗೇನೂ ವ್ಯಥೆಯಾಗಲಿಲ್ಲ. ದ್ವೇಷ-ಆಕ್ರೋಶಗಳನ್ನು ಹೊರಹಾಕುವ ಒಂದು ವಿಧಾನ ಮಾನವ ಸಹಜ ಎನ್ನಿಸಿತು.) ಜೀವಂತವಿರುವ ನಾವು-ನೀವೇನೋ ಹಾಗೆ ಅವಹೇಳನವಾದಾಗ ಪ್ರತಿಭಟಿಸಬಹುದು. ಆದರೆ ಲಿಂಗೈಕ್ಯರಾದ ಶರಣರು ಹೇಗೆ ಪ್ರತಿಭಟಿಸಬಲ್ಲರು ? ನಿಮಗೆ ಅಲ್ಲದಿದ್ದರೂ ನಮಗೆ, ನಮ್ಮಂತಹ ಅನೇಕರಿಗೆ ಪೂಜನೀಯರಾಗಿರುವ ಧರ್ಮಗುರು ಬಸವಣ್ಣ, ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರ ಬಗ್ಗೆ ನೀವು ಬಸವ, ಚೆನ್ನಬಸವ (ಹೀಗೆ ಬರೆದ ತಪ್ಪಿಗಾಗಿ ಸೃಷ್ಟಿಕರ್ತ ಲಿಂಗದೇವ ನನ್ನ ಮೇಲೆ ಅವಕೃಪೆ ತೋರದಿರಲಿ) ಎಂದು ಹಗುರವಾಗಿ ಬಳಸಿದ್ದೀರಲ್ಲ ಇದು ಅಸಭ್ಯವಲ್ಲವೆ ?

ವೀರಶೈವರಾದ ನಿಮಗೆ ಲಿಂಗಾಯತ ಧರ್ಮದ ಮಹಾಪುರುಷರ ಬಗ್ಗೆ ಗೌರವ ಇರಲಿಕ್ಕಿಲ್ಲ; ಆದರೆ ಪರಧರ್ಮೀಯರಾದರೂ ಮಹಾತ್ಮರನ್ನು ಅಗೌರವಿಸಬಾರದೆಂಬ ಶಿಷ್ಟಾಚಾರ ಬೇಡವೆ ? ಸ್ವಾಭಿಮಾನದ ನಾಣ್ಯಕ್ಕೆ ಎರಡು ಮುಖಗಳು, ಒಂದು ತನ್ನದನ್ನು ಕಾಪಾಡಿಕೊಳ್ಳುವುದು, ಮತ್ತೊಂದು ಎದುರಾಳಿಯದನ್ನೂ ಕಾಪಾಡುವುದು ಎಂದಿದ್ದೀರಿ. ನನ್ನ ದೃಷ್ಟಿಯಲ್ಲಿ ಸ್ವಾಭಿಮಾನದ ಬಿಲ್ವಕ್ಕೆ 3 ಎಲೆಗಳು. ಇಂಗ್ಲೀಷ್ ಭಾಷೆಯ ವ್ಯಾಕರಣದಲ್ಲಿರುವಂತೆ ನಾನು, ನೀನು, ಅವನು. 'ನನ್ನ' ಆತ್ಮಗೌರವ ಕಾಪಾಡಿಕೊಳ್ಳುವುದು 'ನಿಮ್ಮ' ಆತ್ಮಗೌರವ ಕಾಪಾಡುವುದು ಎಷ್ಟು ಅಗತ್ಯವೋ, ಶಿಷ್ಟಾಚಾರವೋ 'ಅವರ'-ಅಂದರೆ ಧಾರ್ಮಿಕ ಪರಂಪರೆಯ ಪುರುಷೋತ್ತಮರ ಗೌರವ ಕಾಪಾಡುವುದೂ ಅಷ್ಟೇ ಮಹತ್ವದ ಶಿಷ್ಟಾಚಾರ; ಮಾತ್ರವಲ್ಲ ಆದ್ಯ ಕರ್ತವ್ಯ. "ಚನ್ನಬಸವ-ಇವನೇ ಲಿಂಗವಂತರಿಗೆ ನೀತಿ ಸಂಹಿತೆ ನೀಡಿದವನು." ಎಂಬ ನಿಮ್ಮ ವಾಕ್ಯ ಅಸಭ್ಯತೆಯ ತುತ್ತತುದಿಗೆ ತಲ್ಪಿದೆ. ನೀವು ಜೀವನ ಪರ್ಯಂತರ ಅಸಭ್ಯ ಭಾಷೆಯನ್ನು, ನಿಮ್ಮ ಪತ್ರದಲ್ಲಿ ಹೇಳಿಕೊಂಡಂತೆ, ಬಳಸಿದ್ದೀರೋ ಇಲ್ಲವೋ ಅದರ ಸಮೀಕ್ಷೆ ಮಾಡಲು ಈಗ ಸಮಯವಲ್ಲ; ಆದರೆ ಚಿನ್ಮಯಜ್ಞಾನಿ ಚನ್ನಬಸವಣ್ಣನವರನ್ನು ಕುರಿತು ಬರೆದ ವಾಕ್ಯ ಶರಣ ಧರ್ಮಾನುಯಾಯಿಗಳನ್ನು ಕೂರಲಗಿನಂತೆ ಇರಿಯುತ್ತಿದೆ. ನೀತಿ(ಧರ್ಮ) ಸಂಹಿತೆ ಕೊಟ್ಟವರು ಆಚಾರ್ಯರಾಗುತ್ತಾರೆ. ಅಂಥವರನ್ನು ಇಷ್ಟು ಹಗುರವಾಗಿ ನೀವು ಸಂಬೋಧಿಸಬಹುದೆ ?

ಬೇಲಿ, ಕಾವಲು ಎರಡೂ ಇಲ್ಲದ ಸರ್ಕಾರಿ ಗೋಮಾಳದಂತೆ ಲಿಂಗಾಯತ ಸಮಾಜ ಇರುವುದರಿಂದ, ಧರ್ಮ-ಸಮಾಜ ರಕ್ಷಕರಾಗಬೇಕಾದ ಮಠಾಧೀಶರು ರಾಜಕಾರಣಿಗಳು ಮತ್ತು ಸಾಹಿತಿಗಳ ಮರ್ಜಿಕಾಯುತ್ತಿರುವುದರಿಂದ ನೀವು ಪಿ.ವಿ.ನಾರಾಯಣ(ವಚನ ನಿರ್ವಚನ, ಧರ್ಮಕಾರಣ ಕರ್ತೃ) ಹೆಚ್. ಎಸ್.ಶಿವಪ್ರಕಾಶ್ (ಮಹಾಚೈತ್ರ) ಮುಂತಾದವರು ಪೂಜನೀಯ ಶರಣರನ್ನು ಕುಡುಕರು, ಕೊಲೆಗಡುಕರು, ನೀತಿಗೆಟ್ಟವರು, ಹುಚ್ಚರು, ಹೇಡಿಗಳು ಎಂದೆಲ್ಲ ಮೊಲವನ್ನು ಬೇಟೆ ನಾಯಿಗಳು ಎಳೆದಾಡಿ ಛಿದ್ರ ಮಾಡಿದಂತೆ ನಿಂದಿಸಿ, ಬರೆದು ಆಟಾಟೋಪ ಮಾಡಿದರೂ ನಿರಭಿಮಾನಿ ಜನರು ಸಹಿಸಿಕೊಂಡು ಇರುವ ಸ್ಥಿತಿ ನಿರ್ಮಾಣವಾಗಿದೆ. ಇದೇ ಸ್ಥಿತಿ ಎಷ್ಟು ದಿನ ಮುಂದುವರೆಯಬೇಕು ಹೇಳಿರಿ. ನಿಮಗೆ ಏಕವಚನ ಬಳಸಿದಾಗ ಅಸಭ್ಯವಾಗಿ ಕಂಡುದು ಪೂಜನೀಯ ಶರಣರಿಗೆ ನೀವು ಬಳಸುವಾಗ ಅಸಭ್ಯವಾಗಿ ಕಾಣಲಿಲ್ಲವೇಕೆ ?

ಕುತಂತ್ರ ಬುದ್ಧಿಯಿಂದ ವೀರಶೈವ ಪಂಥ ಮತ್ತು ಲಿಂಗಾಯತ ಧರ್ಮಗಳನ್ನು ಸಮೀಕರಿಸಿ ಜನರಲ್ಲಿ ಗೊಂದಲ ಉಂಟು ಮಾಡುವ ಲೇಖನ ಬರೆದು ಧರ್ಮಪಿತ ಬಸವಣ್ಣನವರು, ಅವರ ಸಮಕಾಲೀನ ಶರಣರು ಕಟ್ಟ ಬಯಸಿದ ಶರಣ ಸಮಾಜದಲ್ಲಿ ಜಾತೀಯತೆಯುಂಟು , ಹೋಮಹವನಾದಿ, ಅಗ್ನಿ ಪೂಜೆಯುಂಟು, ವೇದ ಆಗಮಗಳು ಮಾನ್ಯ ಎಂದೆಲ್ಲ ಬರೆದು ಲಿಂಗಾಯತರು, ಲಿಂಗಾಯತೇತರರು ಉಭಯತರೂ ತಪ್ಪು ಕಲ್ಪನೆ ಹುಟ್ಟಿಸಿಕೊಳ್ಳಲು ಕಾರಣವಾದ ನಿಮ್ಮ ಲೇಖನ ಸಹ್ಯವಾದ ಬರಹವೆ ?

ಓರ್ವ ಸ್ವಾಮಿಗಳು ಬಾಯಲ್ಲಿ ಕಡುಬು ಇಟ್ಟುಕೊಂಡಂತೆ ಮೌನವಾಗಿದ್ದಾಗ ಓರ್ವ ಶರಣರು ಕೇಳಿದರಂತೆ, "ನಿಮ್ಮ ಅನುಯಾಯಿಗಳಾದ ನಾವು ಲಿಂಗಾಯತ ಎಂದು ಬರೆಸಬೇಕೇ, ವೀರಶೈವ ಎನ್ನಬೇಕೆ ?" ಎಂದು. ನಿಖರವಾದ ಉತ್ತರ ಕೊಡಲು ಅವರಿಗೆ ಏಕೆ ಧೈರ್ಯವಿಲ್ಲವೋ ಅವರು ಹೇಳಿದರಂತೆ", "ನೋಡ್ರಪ್ಪ ನಿಮ್ಮ ಯಾರ ಕೊರಳಲ್ಲೂ ಇಷ್ಟಲಿಂಗವಿಲ್ಲ (ಎಂಥಾ ಅನುಯಾಯಿಗಳನ್ನು ಹೊಂದಿದ್ದಾರೆ ನೋಡಿರಿ !) ಆದ್ದರಿಂದ ನೀವು ಲಿಂಗಾಯತರಲ್ಲ. ನೀವು

Digitalized by e-Sahithya Documentation Forum
Sponsored by Sarayu Foundation Trust

ಶಿವನ ಕಟ್ಟಾ ಭಕ್ತರೋ ? ಅದೂ ಅಲ್ಲ. ಆದ್ದರಿಂದ ವೀರಶೈವರಲ್ಲ. ನೀವೆಲ್ಲ ಹೆಂಡಗುಡುಕರು, ಧರ್ಮಲಂಡರು, ಆದ್ದರಿಂದ ಜನಗಣತಿಯಲ್ಲಿ ಹೆಂಡಗುಡುಕರು ಎಂದೇ ಬರೆಸಿರಿ'' ಎಂದು ಅಟ್ಟಹಾಸದ ನಗೆ ನಕ್ಕರಂತೆ. ಪ್ರಶ್ನೆ ಕೇಳಿದವರು ಸ್ವಾಮಿಗಳ ಜ್ಞಾನವೈಭವ ನೋಡಿ ನಾಚಿ ನೀರಾಗಿ ಬಂದಿರಬೇಕು. ಎಷ್ಟು ಬೇಜವಾಬ್ದಾರಿ ಮಾತು !

ಲಿಂಗಾಯತ ಸಮಾಜ ಶುದ್ಧ ಸಸ್ಯಾಹಾರದ ಜೀವನ ವಿಧಾನ ಅಳವಡಿಸಿಕೊಳ್ಳಬೇಕಾದ ನಿರ್ದೇಶನ ಉಳ್ಳದ್ದು. ಕೆಲವು ಲಿಂಗಾಯತರು ಮಾಂಸಾಹಾರಿ ಹೋಟೆಲ್ಲಿನಲ್ಲೇ ಬೀಡುಬಿಟ್ಟಿರುತ್ತಾರೆ. ಅವರನ್ನು ನೋಡಿ ಲಿಂಗಾಯತ ಧರ್ಮದ ಸಂವಿಧಾನದಲ್ಲಿ ಮಾಂಸಾಹಾರಕ್ಕೆ ಅವಕಾಶವಿದೆ ಎನ್ನಲಾದೀತೆ ? ಭಾರತ ದೇಶದಲ್ಲಿ ಸಾಕಷ್ಟು ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳು ಇದ್ದಾರೆ. ಹಾಗೆಂದು ಭಾರತದ ಸಂವಿಧಾನದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿದೆ ಎನ್ನಲಾದೀತೆ ? ಸಂವಿಧಾನ ಬಲದಿಂದ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸುವಂತೆ ಅಥವಾ ತಪ್ಪಿತಸ್ಥರನ್ನು ಶಿಕ್ಷಿಸುವಂತೆ ವಚನ ಸಾಹಿತ್ಯ ಸಂವಿಧಾನದ ಬಲದಿಂದ ದಾರಿತಪ್ಪಿ ನಡೆಯುವ ಲಿಂಗಾಯತರನ್ನು ತಿದ್ದಲೆತ್ನಿಸ-ಬೇಕಾಗುತ್ತದೆ. ಇದು ಬಿಟ್ಟು ''ಲಿಂಗಾಯತರು ಅಗ್ನಿ ಪೂಜಕರು, ಇವರಲ್ಲೂ ಜಾತಿಗಳಿವೆ ; ದೀಕ್ಷೆಯ ಸಮಯದಲ್ಲಿ ವೇದ ಮಂತ್ರಗಳನ್ನು ಹೇಳುತ್ತಾರೆ'' ಎಂದು ಬರೆದು ಸರಿದಾರಿಯಲ್ಲಿ ನಡೆಯುವವರಲ್ಲೂ ಸಂದೇಹ ಹುಟ್ಟುವಂತೆ ಬರೆಯುವುದು ಧರ್ಮದ್ರೋಹವಲ್ಲವೇ?

ನಿಮ್ಮ ಲೇಖನಕ್ಕೆ ಇನ್ನು ತೀವ್ರಭಾಷೆ ಬಳಸಬೇಕಾಗಿತ್ತು. ಏನು ಮಾಡುವುದು ಶರಣ ಸಂಸ್ಕೃತಿಯನ್ನು ಅಳವಡಿಸಿಕೊಂಡ ನಮ್ಮನ್ನು ಧರ್ಮಪಿತ ಬಸವಣ್ಣನವರು ತಮ್ಮ ಮಾತುಗಳಿಂದ ಕಟ್ಟಿ ಹಾಕಿ ಬಿಡುತ್ತಾರೆ ; ಎಲ್ಲೆ ಮೀರದಂತೆ ನಿರ್ಬಂಧಿಸುತ್ತಾರೆ.

ನಮ್ಮ ವಾದ ಟೊಳ್ಳೊ, ಗೊಡ್ಡೊ ಆದತ್ತಲಿರಲಿ! ಇಷ್ಟು ದಿನ ನೀವು-ನಿಮ್ಮಂತಹ ಪುರೋಹಿತಶಾಹಿ ಜನ ಲಿಂಗಾಯತ ಧಾರ್ಮಿಕ ಕ್ಷೇತ್ರದಲ್ಲಿ ತೂರಿಸಿದ ಕಲ್ಲು ಮಣ್ಣು, ಹಾವು-ಚೇಳು ಏನು ಎಂಬುದನ್ನು ಗುರುತಿಸಿ ಅವನ್ನೀಗ ತೆಗೆದು ಹಾಕುತ್ತಿರುವುದರಿಂದ ಬಹಳ ಜನ ನಿಜ ಶರಣರು ಅಭಿನಂದಿಸುತ್ತಿದ್ದಾರೆ. ಇದಕ್ಕೆ ಪ್ರೇರಕ ಶಕ್ತಿಯಾದ ನಿಮಗೆ ಧನ್ಯವಾದಗಳು. ಶರಣು ಶರಣಾರ್ಥಿ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

ಗುರುದ್ವಯರ ಧ್ಯಾನ

ಅಂದು ಪ್ರಭುದೇವರು
ಬಸವಾಕ್ಷರಗಳ ಮಹತ್ವ ತಿಳಿದು
ಆನು ನೀನು ಬಸವಾ ಬಸವಾ
ಎನುತ್ತಿರ್ದೆವಯ್ಯಾ ಗುಹೇಶ್ವರ ಅಂದರು
ಇಂದು
ಬಸವ ಧರ್ಮದ ಮಹತ್ವವನ್ನು
ನಾಡಿನಾದ್ಯಂತ ಸಾರಿ ನಮ್ಮನ್ನು ಉದ್ಧರಿಸಿ
ಮನೆ ಮಾತಾಗಿರುವ ಗುರುದ್ವಯರನ್ನು
ಕುರಿತು ಭಕ್ತಿಯಿಂದ ಅಪ್ಪಾಜಿ-ಮಾತಾಜಿ
ಅಪ್ಪಾಜಿ-ಮಾತಾಜಿ ಎನುತ್ತಿರ್ದೆವಯ್ಯಾ ಚೆನ್ನ ಲಿಂಗದೇವಾ

- ಬಾಣೂರು ಚೆನ್ನಪ್ಪ, ಚಿಕ್ಕಮಗಳೂರು

ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆ

ಶಿವಯೋಗಮಂದಿರ , ತಾ-ಬಾದಾಮಿ ಜಿ-ಬಾಗಲಕೋಟ. ದೂರವಾಣಿ : 08357-69725

ಅಧ್ಯಕ್ಷರ ಅಪ್ಪಣೆ ಪ್ರಕಾರ

'ಕಲ್ಯಾಣ ಕಿರಣ' ಪತ್ರಿಕೆಯ ಮಾತಾಜಿ ಇವರಲ್ಲಿ ಕೋರಿಕೆ.

'ಕಲ್ಯಾಣ ಕಿರಣ' ಆಗಸ್ಟ್ 2000 ಸಂಚಿಕೆ ಪುಟ 29ರಲ್ಲಿ ವೀರಶೈವ ಧರ್ಮ : ಚರಿತ್ರೆ (ಎರಡನೆಯ ಭಾಗ) ವಿಮರ್ಶೆಯಲ್ಲಿ ಬರೆದ ಅಂಶ ಹೀಗಿದೆ. ''ಹಾನಗಲ್ ಕುಮಾರ ಸ್ವಾಮಿಗಳು ವಿರಕ್ತರಾದರೂ 1904ರಲ್ಲಿ ವೀರಶೈವ ಮಹಾಸಭಾ ಹುಟ್ಟು ಹಾಕಿ ಲಿಂಗಾಯತ ಧರ್ಮ, ಸಮಾಜಕ್ಕೆ ದ್ರೋಹ ಬಗೆದರು. ಶಿವಯೋಗ ಮಂದಿರ ಹುಟ್ಟುಹಾಕಿ ಜಾತಿವಾದ ಬೆಳೆಸಿದರು. ತನ್ಮೂಲಕ ಧರ್ಮಗುರು ದ್ರೋಹ, ಧರ್ಮದ್ರೋಹ, ಸಮಾಜ ವಂಚನೆ ಎಂಬ ಪಾತಕಗಳನ್ನು ಮಾಡಿದರು'' ಎಂದು ಬರೆದು ಸಮಾಜದ ಜನರಿಗೆ ನೋವನ್ನುಂಟು ಮಾಡಿದ್ದೀರಿ. ಇಂಥ ಹೀನಾಯ ಪದಗಳಿಂದ ನಿಮ್ಮ ಕೃತಘ್ನಭಾವ ವ್ಯಕ್ತವಾಗಿದೆ. ಈ ಕುರಿತು ಸ್ಪಷ್ಟೀಕರಣ ನೀಡಬೇಕು. ಪೀಠಾಧಿಕಾರಿಗಳೆಂದುಕೊಳ್ಳುವ ನಿಮಗೆ ಈ ಮಾತುಗಳು ಯೋಗ್ಯವೇ ?

ಕಾರ್ಯದರ್ಶಿ

ಪೂಜ್ಯ ಅಧ್ಯಕ್ಷರೇ,

ತಮಗೆ ಶ್ರೀಗುರು ಬಸವ ಸ್ಮರಣಪೂರ್ವಕ ಶರಣು ಶರಣಾರ್ಥಿ.

ತಮ್ಮ ದಿ. 11-9-2000ದ ಪತ್ರ ತಲುಪಿದೆ. ಶುದ್ಧೋದನ ಮಹಾರಾಜನ ಪುತ್ರ ಸಿದ್ಧಾರ್ಥ ಸಾತ್ವಿಕ ಅಂತರ್ಮುಖಿ ತರುಣ. ಆತನ ವಯಸ್ಸಿನ ದೇವದತ್ತ ಎಂಬ ಕ್ರೂರ ಯುವಕನಿದ್ದ. ಒಂದು ದಿನ ಆಗಸದಲ್ಲಿ ಸುಂದರವಾದ ಹಂಸ ಪಕ್ಷಿಯು ಹಾರುತ್ತಿತ್ತು. ದೇವದತ್ತ ಬಾಣ ಬಿಟ್ಟಾಗ ಅದಕ್ಕೆ ಏಟಾಗಿ ಕೆಳಗೆ ಬಿದ್ದಿತು. ಆಟವಾಡುತ್ತಿದ್ದ ಸಿದ್ಧಾರ್ಥ ಓಡಿ ಹೋಗಿ ಅದನ್ನು ಎತ್ತಿಕೊಂಡು ಸಂತೈಸಿ, ಬಾಣವನ್ನು ಕಿತ್ತು, ಮದ್ದನ್ನು ಕಟ್ಟಿ ಉಪಚರಿಸಿದ. ಆಗ ದೇವದತ್ತ ''ಆ ಪಕ್ಷಿಯನ್ನು ಬಾಣದಿಂದ ಹೊಡೆದು ಉರುಳಿಸಿದ್ದು ನಾನು ; ಅದು ನನಗೆ ಸೇರಿದ್ದು'' ಎಂದು ಪಕ್ಷಿಯನ್ನು ಕೇಳಿದ. ಸಿದ್ಧಾರ್ಥ ನುಡಿದ, ''ಜೀವವನ್ನು ಉಳಿಸಿದವರಿಗೆ ಅದರ ಮೇಲೆ ಹಕ್ಕೇ ವಿನಾ ಜೀವವನ್ನು ತೆಗೆಯುತ್ತಿದ್ದವರಿಗೆ ಅಲ್ಲ.'' ಎಂದು. ಎಂಥ ಮಾತು ?!

ವಚನ ವಾಙ್ಮಯ ಮತ್ತು ಶರಣ ಪರಂಪರೆ ಎಂಬ ಸುಂದರವಾದ ರೆಕ್ಕೆ-ಪುಕ್ಕ ಹೊಂದಿ 700 ವರ್ಷ ಕಾಲ ಹಾರಾಡಿದ ಲಿಂಗಾಯತ ಧರ್ಮ ಎಂಬ ಹಂಸಪಕ್ಷಿಯನ್ನು ವೀರಶೈವ ಮಹಾಸಭೆ ಎಂಬ ಬಿಲ್ಲನ್ನು ಏರಿಸಿ ವೀರಶೈವ ಪದದ ಬಾಣಬಿಟ್ಟು ಕೆಳಗೆ ಉರುಳಿಸಿ, ಗಾಯಮಾಡಿದ ಶಿವೈಕ್ಯ ಶ್ರೀ ಹಾನುಗಲ್ ಕುಮಾರ ಸ್ವಾಮಿಗಳ ಬಗ್ಗೆ (ಮತ್ತು ವೀರಶೈವ ಮಹಾಸಭೆಯ ಬಗ್ಗೆ) ಟೀಕಿಸಲು ಲಿಂಗಾಯತ ಧರ್ಮದ ಹಿತಚಿಂತಕರಾದ ಕನಿಷ್ಠ ಪಕ್ಷ ಅನುಯಾಯಿಗಳಾದ ನಮಗೆ ಹಕ್ಕಿರುವುದು ಸ್ವಾಭಾವಿಕ.

ಸುಂದರವಾದ ಶುದ್ಧ ಬಿಳಿಯ ಅಮೃತಶಿಲಾ ಮೂರ್ತಿಯೊಂದಕ್ಕೆ ಭಯಂಕರವಾದ ಬಣ್ಣಗಳನ್ನು ಹಾಕಿ ಇಟ್ಟಂತೆ ಜಾತ್ಯತೀತ, ದೇವೋಪಾಸಕ, ಪ್ರಗತಿಪರ ದೃಷ್ಟಿಕೋನದ ಲಿಂಗಾಯತ ಧರ್ಮಕ್ಕೆ ವರ್ಣಾಶ್ರಮ ಆಧಾರಿತ ದೇವತೋ(ಶಿವೋ)ಪಾಸಕ ವೀರಶೈವ ಮತದ ಬಣ್ಣ ಬಳಿದು ಕುರೂಪಗೊಳಿಸಿಟ್ಟವರು ಶ್ರೀ ಹಾನುಗಲ್‌ಕುಮಾರ ಸ್ವಾಮಿಗಳೇ. ಈಗ ವಚನ ಸಾಹಿತ್ಯದ ಸ್ಪಿರಿಟ್ ಹಾಕಿ ವೀರಶೈವದ ಮೆತ್ತಿದ ಬಣ್ಣ ತೆಗೆಯುತ್ತ ಹೋದಾಗ ಲಿಂಗಾಯತ ಧರ್ಮವೆಂಬ ಸುಂದರ ಅಮೃತಶಿಲಾ ಮೂರ್ತಿ ಸ್ಪಷ್ಟಗೊಳ್ಳುತ್ತಿದೆ.

Digitalized by e-Sahithya Documentation Forum
Sponsored by Sarayu Foundation Trust

1. ಕರ್ನಾಟಕದಲ್ಲಿ ವೀರಶೈವ ಮಹಾಸಭೆಯನ್ನು ಹುಟ್ಟು ಹಾಕುವುದು ಎಷ್ಟೂ ಅಗತ್ಯವಿರಲಿಲ್ಲ, ಏಕೆಂದರೆ ಇಲ್ಲಿದ್ದವರು, ಇರುವವರು ಯಾರೂ ವೀರಶೈವರಲ್ಲ ; ಇವರೆಲ್ಲರೂ ಗೋಳಾಕಾರದ ಇಷ್ಟಲಿಂಗ ಧರಿಸಿಕೊಂಡ ಲಿಂಗಾಯತರು. ಯಾರಿಗೂ ಪರಿಚಯವಿರದಿದ್ದ ವೀರಶೈವ ಎಂಬ ಅಪರಿಚಿತ ಪದವನ್ನು ತಂದು ಲಿಂಗಾಯತರನ್ನೆಲ್ಲ ''ನೀವು ವೀರಶೈವರು, ಲಿಂಗಾಯತ ಎಂಬುದು ಸಂಕುಚಿತ, ವೀರಶೈವ ವಿಶಾಲವಾದುದು'' ಎಂಬ ಭ್ರಮೆಯನ್ನು ಕೆಲವರಲ್ಲಿ ಬಿತ್ತಿದ್ದು ಸಾಮಾನ್ಯ ತಪ್ಪೇನಲ್ಲ. ಹೀಗೆ ವೀರಶೈವ ಮಹಾಸಭೆ ಸ್ಥಾಪಿಸುವ ಮೂಲಕ ಶ್ರೀಗಳು ಸಮಾಜದ್ರೋಹವನ್ನು ಮಾಡಿದರು ಎಂದರೆ ಉತ್ಪ್ರೇಕ್ಷೆಯಲ್ಲ, ಹೀಗೆ ಅನ್ನುವುದರಿಂದ ನಮಗೆ ಪಾಪವೂ ಬರದು.

2. ವಿರಕ್ತರಲ್ಲಿ 4 ಸಮಯಗಳಿವೆ ಎಂದು ಕೇಳಿದ್ದೇನೆ. ಬಹುಶಃ ಗುಂಪು ಎಂದು ಅರ್ಥ ಮಾಡಬಹುದು ಅಥವಾ ಸಂಪ್ರದಾಯ ಎನ್ನಲೂ ಬಹುದು. ಮುರುಘಾ ಸಮಯ, ಕುಮಾರ ಸಮಯ, ಚೀಲಾಳ ಸಮಯ, ಕೆಂಪಿನ ಸಮಯ, ಇಂಥ ಸಂಪ್ರದಾಯಗಳನ್ನು ಹುಟ್ಟು ಹಾಕಿದ್ದು ನೋಡಿದರೆ ಇವು ಬಹಳ ಹಿಂದಿನವಲ್ಲ. ಹಾನುಗಲ್ ಕುಮಾರ ಶ್ರೀಗಳ ಕಾಲದಿಂದ ಆರಂಭವಾದವು ಎನ್ನಿಸುತ್ತದೆ.

3. ಇದೇ ಮೊದಲ ಬಾರಿಗೆ ಶಿವಯೋಗ ಮಂದಿರದ ಒಂದು ಲೆಟರ್ ಹೆಡ್‌ದಲ್ಲಿ ಬಂದ ಪತ್ರ ನಾನು ನೋಡಿದ್ದು. ಇದರಲ್ಲಿ ಮೇಲೊಂದು ಮಂತ್ರವಿಲ್ಲ, ತಂತ್ರವಿಲ್ಲ, ಸೂತ್ರವಿಲ್ಲ. ಇದು ಯಾವ ಸಂಸ್ಥೆ ? ಲಿಂಗಾಯತ ಮಠಗಳಿಗೆ ಅಧಿಕಾರಿಗಳನ್ನು ಒದಗಿಸುವ ಒಂದು ಪ್ರಾತಿನಿಧಿಕ ಸಂಸ್ಥೆ. ವೀರಶೈವವಾದಿಗಳಾಗಿ ಕನ್ನಡ ಸಾಹಿತ್ಯದಲ್ಲಿ ಕೆಲವು ಕೃತಿಗಳನ್ನು ರಚಿಸಿದವರ ಪುಸ್ತಕಗಳಲ್ಲಿ ಸಹ ಶ್ರೀ **ಗುರು ಬಸವಲಿಂಗಾಯ ನಮಃ** ಮಂತ್ರ ಇರುತ್ತದೆ. ನಿಮ್ಮ ಲೆಟರ್ ಹೆಡ್‌ದಲ್ಲಿ ಅದೂ ಇಲ್ಲ ಅದರಲ್ಲಿ ಧರ್ಮಗುರುವಿನ ಭಾವಚಿತ್ರವಿರದೆ ಶ್ರೀ ಹಾನುಗಲ್ ಕುಮಾರ ಸ್ವಾಮಿಗಳ ಭಾವಚಿತ್ರವಿದೆ. ಇವರೆಯೋ ಲಿಂಗಾಯತ ಧರ್ಮಕ್ಕೆ ಸಾಹಿತ್ಯ - ಪರಂಪರೆ ಕೊಟ್ಟವರು ? ಅಂದರೆ ಧರ್ಮಗುರುವನ್ನು ಮರೆಸಿದವರು. (ಪರಮ ಪವಿತ್ರವಾದ ಲಿಂಗದೇವನ ನಾಮವನ್ನು ಖಂಡಿಸಿದ ಸ್ವಾಮಿಗಳ ಸಮುದಾಯ, ವೀರಶೈವ ಗಣ್ಯರ ಸಮೂಹ ಶಿವಯೋಗ ಮಂದಿರದವರ ಇಂಥ ಸ್ವಧರ್ಮ ವಿರೋಧಿ ಆಚರಣೆಗಳನ್ನು ಖಂಡಿಸಿರುವರೆ ?) ಅಂದಾಗ ಶಿವಯೋಗ ಮಂದಿರದಿಂದ ಧರ್ಮಗುರು ದ್ರೋಹ ನಡೆದಿಲ್ಲವೆ ? ಉತ್ತರಿಸಿರಿ.

4. ಲಿಂಗಾಯತ ಧರ್ಮದ ಪರಂಪರೆ ಆದಿಗುರು ಬಸವಣ್ಣನವರಿಂದ ಆರಂಭವಾಯಿತು. ಅಂದಿನಿಂದ ಇಂದಿನವರೆಗೆ ಅಸಂಖ್ಯಾತ ಶಿವಯೋಗಿಗಳು, ಶರಣರು ಆಗಿ ಹೋಗಿದ್ದಾರೆ. ಅವರುಗಳು ಹುಟ್ಟಿನಿಂದ ಲಿಂಗಾಯತರಿದ್ದರು, ದೀಕ್ಷೆಯಿಂದ ಲಿಂಗಾಯತರಾದವರೂ ಇದ್ದರು. ಯಾರು ಬೇಕಾದರೂ ಭವಿತನ ಕಳೆದುಕೊಂಡು ಭಕ್ತ, ಗುರು, ಜಂಗಮ ಆಗಬಹುದು ಎಂಬ ನಮ್ಮ ಧರ್ಮದ ತತ್ವ ಹೆಮ್ಮೆ ಪಡುವಂಥದು ! ಹೀಗಿದ್ದಾಗ ಜಂಗಮ ಒಂದು ಜಾತಿ ಎಂಬ ಕಲ್ಪನೆಯೇ ಲಿಂಗಾಯತ ಸಮಾಜದಲ್ಲಿರಲಿಲ್ಲ. ಜಂಗಮವನ್ನು ಒಂದು ಜಾತಿಯನ್ನಾಗಿ ಮಾಡಿ, 'ಹುಟ್ಟು ಜಂಗಮರಷ್ಟೇ ಜಂಗಮರು ; ಅವರಷ್ಟೇ ಮಠ ಪೀಠಾಧಿಪತಿಗಳಾಗಬಲ್ಲರು' ಎಂಬ ಅಸಹ್ಯ ಜಾತಿವಾದವನ್ನು ಬಿತ್ತಿ ಶಿವಯೋಗ ಮಂದಿರದ ಮೂಲಕ ಬೆಳೆದವರು ಕುಮಾರ ಸ್ವಾಮಿಗಳಲ್ಲವೆ ? ಹೀಗೆ ಅವರು ಮಾಡಿದ್ದು ಸಮಾಜ ದ್ರೋಹವಲ್ಲವೆ ?

5. ವೇದಕ್ಕೆ ಒರೆಯನ್ನಿಕ್ಕಿ, ಆಗಮದ ಮೂಗ ಕೊಯ್ದ ಲಿಂಗಾಯತ ಧರ್ಮದ ಸಂವಿಧಾನ ವಚನ ವಾಙ್ಮಯವನ್ನು ಜನರಿಗೆ ಬೋಧಿಸಲು ಬೇಕಾದ ವಚನ ಸಾಹಿತ್ಯ ಪಾಠಶಾಲೆ ತೆರೆದು ಭಾವೀ ಮಠಾಧಿಕಾರಿಗಳನ್ನು ತರಬೇತಿಗೊಳಿಸುವ ಬದಲು ವೇದಾಗಮ ರುದ್ರ ಕಲಿಸುವ ಸಂಸ್ಕೃತ ಪಾಠಶಾಲೆ ತೆರೆದುದು ಶಾಸ್ತ್ರದ್ರೋಹವಲ್ಲವೆ ?

ಹೀಗಾಗಿ ನಾನು ಸತ್ಯವನ್ನು ಬರೆದಿದ್ದೇನೆ. ಇದರಿಂದ ಕೆಲವು ಪಟ್ಟಬದ್ಧ ಹಿತಾಸಕ್ತರಿಗೆ ನೋವಾದರೆ ನಾನೇನು ಮಾಡಲಾದೀತು ? ನೀವು ಸ್ಪಷ್ಟೀಕರಣ ಕೇಳಿದ್ದಕ್ಕಾಗಿ ವಿವರವಾಗಿ ಬರೆದಿದ್ದೇನೆ. (ಬಹುಶಃ ನಿಮ್ಮ ಮನಸ್ಸಲ್ಲಿ ಕ್ಷಮೆ ಕೇಳಿ, ವಾಪಸ್ಸು ತೆಗೆದುಕೊಳ್ಳಿರಿ ಎಂದು ಆಗ್ರಹಿಸುವ ಇಂಗಿತ ಇತ್ತೇನೋ. ಹಾಗೆ ಬರೆಯದೆ ಸ್ಪಷ್ಟೀಕರಣ ಎಂದು ಬರೆದಂತೆ ಕಾಣುತ್ತೆ.)

ನಮ್ಮದು ಕೃತಘ್ನಭಾವ ಎಂದಿದ್ದೀರಿ. ನಿಮ್ಮಿಂದ ಅರ್ಥಾತ್ ನಿಮ್ಮ ಸಂಸ್ಥೆಯಿಂದ ಏನಾದರೂ ಉಪಕಾರವನ್ನು ನಾವು ಪಡೆದುಕೊಂಡು ಅದನ್ನು ಮರೆತಿದ್ದರೆ ಅದು ಕೃತಘ್ನತೆಯಾಗುತ್ತಿತ್ತು.

ಶಿವಯೋಗ ಮಂದಿರ ಹುಟ್ಟುಹಾಕಿದ ಜಾತಿ ಜಂಗಮವಾದದ ಬೇರನ್ನು ಅಲುಗಿಸಲೆಂದೇ ಮಾರ್ಕ್ಸ್‌ವಾದಿ ಸಂಗಮೇಶರು ಬಸವವಾದಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳಾಗಿ ಒಂದು ಚಳುವಳಿಯನ್ನೇ ಹುಟ್ಟುಹಾಕಿ ಎಲ್ಲರಿಗೂ, ಮಹಿಳೆಯಾದ ನನಗೂ ಗುರುತ್ವ, ಜಂಗಮತ್ವ ಪ್ರಾಪ್ತವಾಗುವಂತೆ ಮಾಡಿದ್ದು. ಅಂದಾಗ ಕೃತಜ್ಞತೆ ಇರುವುದಾದರೂ ಹೇಗೆ ?

ಶ್ರೀ ಹಾನಗಲ್ ಕುಮಾರ ಶ್ರೀಗಳು ಮತ್ತು ಶಿವಯೋಗ ಮಂದಿರದ ವಿರುದ್ಧ ನಾನು ಮಾಡಿದ ಆರೋಪಗಳಿಗೆ ವಿವರಗಳನ್ನು ನೀಡಿದ್ದೇನೆ, ಸಮರ್ಥಿಸಿಕೊಂಡಿದ್ದೇನೆ. ಈಗ ಚೆಂಡು ನಿಮ್ಮ ಅಂಗಳದಲ್ಲಿದೆ. ಆ ಆರೋಪಗಳನ್ನು ನಿರಾಕರಿಸುವ, ಬಿಡುವ ಕೆಲಸ ಇದೀಗ ನಿಮ್ಮದು. ''ಪೀಠಾಧಿಕಾರಿಗಳೆಂದುಕೊಳ್ಳುವ ನಿಮಗೆ ಈ ಮಾತುಗಳು ಯೋಗ್ಯವೆ ?'' ಎಂದಿದ್ದಿರಿ. ಒಳ್ಳೆಯ ತಮಾಷೆಯ ಮಾತು. ಲಿಂಗಾಯತ ಧರ್ಮ-ಸಮಾಜಗಳು ವಿಕೃತಗೊಳ್ಳಲು ಕಾರಣವೇನು ಎಂದು ಅನ್ವೇಷಿಸುತ್ತಾ ಬಂದು ರೋಗ ಮೂಲ ಕಾರಣ ಪತ್ತೆ ಮಾಡಿ, ಶಸ್ತ್ರ ಚಿಕಿತ್ಸೆಯಲ್ಲಿ ತೊಡಗಿರುವಾಗ ಅಗತ್ಯವೆನಿಸುವಷ್ಟು ಚಾಕು, ಕತ್ತರಿಗಳ ಪ್ರಯೋಗ ಬೇಕೇ ಆಗುತ್ತದೆ. ಶಸ್ತ್ರ ಚಿಕಿತ್ಸೆಯ ಹಿಂದಿನ ಉದ್ದೇಶ ಅತ್ಯಂತ ಘನವಾದುದು ಎಂದು ನೀವು ತಿಳಿದರೆ ಸಾಕು.

ಶರಣಾರ್ಥಿಗಳೊಡನೆ,

ಮಾತಾಜಿ

ವೀರಶೈವ - ಲಿಂಗಾಯತ ಬೇರೆ ಬೇರೆ

ವಿಪ್ರಮೊದಲು ಅಂತ್ಯಜ ಕಡೆಯಾಗಿ
ಶಿವ ಭಕ್ತರನೆಲ್ಲ ಒಂದೇ ಎನ್ನುವುದು
ವಚನ ಪ್ರಣೀತ ಲಿಂಗಾಯತ ಧರ್ಮ ॥
ಗುರುವರ್ಗ ಬೇರೆ, ಭಕ್ತವರ್ಗ ಬೇರೆಂದು
ಜಾತಿ ವ್ಯತ್ಯಾಸ ಮಾಡುವುದು
ಸಿದ್ಧಾಂತ ಶಿಖಾಮಣಿ ಪ್ರಣೀತ ವೀರಶೈವ ಧರ್ಮ
ಮಾನವರನ್ನು ಒಂದುಗೂಡಿಸುವ ಬಸವಣ್ಣನ
ಲಿಂಗಾಯತ ಧರ್ಮವೇ ಬೇರೆ
ಮಾನವರನ್ನು ವಿಂಗಡಿಸುವ ಪಂಚಾಚಾರ್ಯರ
ವೀರಶೈವವೇ ಬೇರೆಂದ ಕುಮಾರ ಕಕ್ಕಯ್ಯ.

-ಲಿಂ ॥ ಕುಮಾರ ಕಕ್ಕಯ್ಯ ಪೋಳ, ಬಿಜಾಪುರ
-ಸಂಗ್ರಹ- ರಮೇಶ ಲಿಂಗಾಯತ , ಬೆಂಗಳೂರು

Digitalized by e-Sahithya Documentation Forum
Sponsored by Sarayu Foundation Trust

ಪರಿವರ್ತನೆಗೆ ಕಾಲ ಮಾಗಿದೆ

ಪರಮಪೂಜ್ಯರಾದ ಮಾತಾಜಿಯವರ ದಿವ್ಯಸನ್ನಿಧಿಗೆ

ಭಕ್ತಿಪೂರ್ವಕ ಶರಣುಶರಣಾರ್ಥಿಗಳು. ತಮ್ಮ **'ಬಸವ ವಚನ ದೀಪ್ತಿ'** ಹಾಗೂ **'ಲಿಂಗದೇವನ ಲೀಲಾ ವಿಶೇಷ'**ಗಳು ಸತ್ಯದರ್ಶನ ನೀಡಿವೆ. 'ಲಿಂಗಾಯತರು ವೀರಶೈವರಲ್ಲ' ವಿವರಣೆ ಹಾಗೂ ಕಲ್ಯಾಣ ಕಿರಣಗಳ ವಿಮರ್ಶೆ ಮನಮುಟ್ಟಿವೆ. ಈ ಭಾಗ್ಯ ಒದಗಿಸಿದ ಬಸವ-ಲಿಂಗಸ್ವರೂಪರಾದ ತಮಗೆ ನಿರಂತರ ಶರಣು ಶರಣಾರ್ಥಿಗಳು. ಬಸವಣ್ಣನವರೇ ನಮಗೆ ಅಂತರಾತ್ಮ-ಪರಮ ಆಪ್ತ-ಪರಮಾತ್ಮನಾಗಿದ್ದು ಅವರನ್ನೇ ನಾವು ಪರಮ ನ್ಯಾಯಾಲಯ-ನ್ಯಾಯಾಧೀಶರನ್ನಾಗಿರಿಸಿ ಅಲಂಕರಿಸಿಕೊಂಡಿದ್ದೇವೆ. ತಮ್ಮ 'ಸ್ಫುರಣ-ಕಿರಣ'ದ ಬೂದುಗುಂಬಳಕಾಯಿಯ ರುಚಿ ಪರಿಣಾಮಕಾರಿ ಹಾಗೂ ಅವಿಸ್ಮರಣೀಯವಾಗಿದೆ. ಧೂರ್ತರಿಂದ ಆವೃತ್ತರಾಗಿರುವ ಮೂಢಭಕ್ತರನ್ನು ಬೇರ್ಪಡಿಸಲು ತಾವೇ ಸಮರ್ಥರು. ಸದ್ಬುದ್ಧಿಯ ವೃದ್ಧಿಯಿಂದ ಪರಿವರ್ತನೆಯ ಸುಳಿಗಾಳಿಯಿಂದ ಯಥಾಸ್ಥಿತಿಯಲ್ಲಿ ಬದಲಾವಣೆಗಳು ಬಲವಾಗಿ ಗೋಚರಿಸುತ್ತಿದ್ದು, ತಮ್ಮ 'ಧರ್ಮಗ್ರಂಥ'ವು ವಿಳಂಬವಿಲ್ಲದೇ ಪ್ರಕಟವಾಗಲೆಂದು ಬಯಸುತ್ತೇವೆ. ವೈಯಕ್ತಿಕ ಸಮಾಧಾನ ಹಾಗೂ ಸಾಮೂಹಿಕ ಮಾರ್ಗದರ್ಶನಕ್ಕಾಗಿ ಕೆಲವು ಪ್ರಶ್ನೆಗಳಿದ್ದು ಪ್ರಕಟಿಸದಿದ್ದರೂ ದಯಮಾಡಿ ಉತ್ತರಿಸುವ ಕೃಪೆ ಮಾಡಬೇಕೆಂದು ಬೇಡುತ್ತೇವೆ. ತಮ್ಮ ಅಮೂಲ್ಯ ಸಮಯದ ಅಪವ್ಯಯವೆನಿಸಿದಲ್ಲಿ ಉತ್ತರ ಪಡೆಯಲು ಓದಬೇಕಾದ ಪ್ರಕಟಣೆಯ ವಿವರಣೆ ತಿಳಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಶರಣರಾದ ಆರ್.ಎಸ್.ಪಾಟೀಲರ ವಚನಾಂಕಿತ-ಸಲಹೆಗೆ ವಾಚಕನಾಗಿ ನನ್ನ ಅನಿಸಿಕೆಯೊಂದಿಗೆ ಅನೇಕ ಶರಣು ಶರಣಾರ್ಥಿಗಳು.

ಅಭಿಪ್ರಾಯ: ಕೂಡಲಸಂಗಮದೇವ=ಚನ್ನಮಲ್ಲಿಕಾರ್ಜುನ 'ಮಹಾದೇವ' ಸಹ ಸ್ಥಾವರಸೂಚಕ, ದೇವತಾಪ್ರತೀಕ, ಶೈವವಾಚಕ. 'ಚನ್ನಮಲ್ಲಿಕಾರ್ಜುನ' ಬದಲಾಗಿ 'ಲಿಂಗದೇವ'ರೇ ಸೂಕ್ತ.

ಪ್ರಕಾಶ. ಬಿ. ಅಂಗಡಿ, ನ್ಯಾಯವಾದಿ

ಮಹಾದೇವಿ ಪಿ. ಅಂಗಡಿ, ನ್ಯಾಯವಾದಿ, ಹಳಿಯಾಳ-581329

ಲಿಂಗಾಯತ ಧರ್ಮ

ಅನಿಷ್ಟ ಜಾತಿ ಮತವ ಬಿಡಿಸಿ, ಸರಿಸಮಾನ ಹಕ್ಕು ಕೊಡಿಸಿ
ಧರೆಯ ಮನುಜರೊಂದೆ ಎಂದು, ಪರಿ ಪರಿಯಲಿ ತಿಳಿಸಿದಂದೆ.
ಇಷ್ಟಲಿಂಗ ಕುರುಹು ಕೊಟ್ಟೆ, ತಂದೆ ನೀನು ಬಸವ ಗುರುವೆ
ಮೇಲು ಕೀಳು ಭಾವ ಅಳಿಸಿ, ಸಮಾನತೆಯ ಸ್ನೇಹ ಬೆಳೆಸಿ
ಬಾಳಿಗೊಂದು ಬೆಳಕ ತೋರಿ, ದಾರಿ ದೀಪವಾದೆ ನೀನು
ನೀನು ನೀಡಿದ್ದೆಂಥ ಧರ್ಮ ?, ಯಾರೂ ಅರಿಯರದರ ಮರ್ಮ
ಅರಿತವರು 'ಲಿಂಗದೇವ'ನ ಆಯತ ಮಾಡಿಕೊಂಡರವನ
ಅದುವೆ ಧರ್ಮ 'ಲಿಂಗಾಯತ' ಇದುವೆ ಎಮ್ಮ ಬಸವ ತತ್ತ್ವ

ಶರಣ. ಎಸ್.ಜಿ.ಬಸವರಾಜು, ಕಾರ್ಯಾಧ್ಯಕ್ಷರು
ರಾ.ಬ.ದಳ, ಚಿಕ್ಕಮಗಳೂರು ಜಿಲ್ಲೆ

ಸಮಸ್ಯೆ ? -ಸಮಾಧಾನ !

ಪ್ರಕಾಶ್ ಬಿ.ಅಂಗಡಿ, ಹಳಿಯಾಳ - ಗುರು ಬಸವ ಭಜನೆಯಲ್ಲಿ 'ಶಿವನೇ ಬಸವ, ಬಸವಾ ಶಿವನೆ' ಎಂಬುದು ಸರಿಯಾಗುವುದೆ ? ಶಿವ ನಿರಾಕಾರ, ನಿರ್ಗುಣ, ನಿರವಯವ ಎಂಬರ್ಥದಲ್ಲಿ ಬಳಸಿದರೂ ಶೈವ ವಾಚಕವೆಂಬ ಅಪಾರ್ಥಕ್ಕೆ ಅವಕಾಶವಾಗದೆ ?

★ ಈ ಭಜನೆ ದೋಷಪೂರಿತ, ನಮ್ಮ ಧರ್ಮದ ಎಲ್ಲಾ ಪೂಜೆ, ಪ್ರಾರ್ಥನೆಗಳಲ್ಲಿ 'ಲಿಂಗ' ಪದವು ಪ್ರಧಾನವಾಗಿ ಬರಬೇಕು. ಶೂನ್ಯಪೀಠಾಧೀಶ ಅಲ್ಲಮಪ್ರಭುಗಳು ಶಿವ, ಗುರುವೆಂದು ಬಲ್ಲಾತನೆ ಗುರು ಎಂದು ಧರ್ಮಪಿತರನ್ನು ಕೊಂಡಾಡಿದ ವಚನದಲ್ಲಿ 'ಶಿವ' ಪದವನ್ನು ನಿರಾಕಾರ, ದೇವ ವಾಚಕವಾಗಿ ತೆಗೆದುಕೊಂಡಿದ್ದಾರೆ. ಶಿವ ಪಥವರಿವೊಡೆ ಗುರುಪಥ ಮೊದಲು ಎಂಬಲ್ಲಿ ದಿವ್ಯಪಥ (divine path) ಎಂಬ ಭಾವವಿದೆ. ನೀವು ಅಭಿಪ್ರಾಯ ಪಟ್ಟಂತೆ ಶಿವನನ್ನು ನಿರಾಕಾರವಾಗಿ ಭಾವಿಸಿ ಬಳಸಿದರೂ ಸಾಮಾನ್ಯ ಜನರಿಗೆ ಮತ್ತೂ ಗೊಂದಲ ಉಂಟಾಗುವ ಕಾರಣ ಸಾಧ್ಯವಿದ್ದಷ್ಟೂ ಲಿಂಗ ಪದವನ್ನೇ ಬಳಸಬೇಕು.

ಅಲ್ಲದೆ ಶಾಬ್ದಿಕ ದೋಷದೊಡನೆ ತಾತ್ತ್ವಿಕ ದೋಷವು ಇಲ್ಲಿದೆ. ''ಶಿವನೇ ಅಂದರೆ ದೇವರೇ ಬಸವಣ್ಣ, ಬಸವಣ್ಣನೇ ದೇವರು'', ಎಂಬ ಅರ್ಥವನ್ನು ಈ ಭಜನೆ ಕೊಡುತ್ತದೆ. ವಚನ ಸಾಹಿತ್ಯವು ಪ್ರತಿಪಾದಿಸುವ ಅವತಾರ ಸಿದ್ಧಾಂತದ ಪ್ರಕಾರ ದೇವರೇ ಅವತರಿಸುವುದಿಲ್ಲ. ಧರ್ಮಪಿತ ಬಸವಣ್ಣನವರು ಪರಮಾತ್ಮನ ಪ್ರತಿನಿಧಿ, ಕರುಣೆಯ ಕಂದ. ಅವರೇ ದೇವರು ಅಲ್ಲ.

- ಬಸವಾದಿ ಶರಣರು, ಬಸವಾದಿ ಶಿವ ಶರಣರು ಯಾವುದು ಸರಿ ?

★ ನಮ್ಮ ಶರಣರು ದೇವನ ಅಡಿಗೆ ಶರಣಾದವರು ಆದ್ದರಿಂದ ಬಸವಣ್ಣನವರೇ ಆದಿಯಾಗಿ ಇನ್ನಿತರ ಶರಣರು ಎಂಬ ಅರ್ಥದಲ್ಲಿ ಬಸವಾದಿ ಶರಣರು ಎಂದು ಹೇಳಲಾಗುವುದು. ಶರಣ ಎಂದಾಗ ದೇವಶರಣ ಎಂದಾಗುತ್ತದೆ. ಶಿವಶರಣ ಎಂದಾಗ ಶಿವನಿಗೆ ಶರಣಾದವನು ಎಂದಾಗುತ್ತದೆ. ಆದ್ದರಿಂದ ಅನುಭವ ಮಂಟಪ ಸರಿ, ಶಿವಾನುಭವ ಮಂಟಪ ಸರಿಯಲ್ಲ ; ಲಿಂಗಪೂಜೆ ಸರಿ, ಶಿವಪೂಜೆ ಸರಿಯಲ್ಲ, ನಾವು ಕಟ್ಟುವುದು ಇಷ್ಟಲಿಂಗವೇ ವಿನಾ ಶಿವಲಿಂಗವಲ್ಲ. ಬಸವಾದಿ ಶರಣರು ಎಂಬುದಕ್ಕೆ ಇನ್ನೊಂದು ಅರ್ಥ ಬಸವರೇ ಆದಿ ಶರಣರು, primordial saint ಎಂದೂ ಆಗುವುದು.

- ಓಂ ಮತ್ತು ಓಮ್ ಯಾವುದು ಸರಿ ? ಗುರುಮಂತ್ರದಲ್ಲಿ ಬಳಸುವ ಅವಶ್ಯಕತೆಯೇನಿದೆ ?

★ ಓಂ ಸರಿ ; ಭಾರತೀಯ ಪರಂಪರೆಯಲ್ಲಿ ಮಂತ್ರಕ್ಕೆ ಮಂತ್ರದ ಸ್ಥಾನ ಬರುವುದು ಓಂಕಾರದಿಂದ. ಹೀಗಾಗಿ ಗಾಯತ್ರಿ ಮಂತ್ರ, ಶಿವಮಂತ್ರಗಳಲ್ಲಿ ಮಾತ್ರವಲ್ಲ ಜೈನ, ಬೌದ್ಧ, ಸಿಖ್ಖರ, ಮಂತ್ರಗಳಲ್ಲಿ ಸಹಿತ ಓಂಕಾರ ಇದ್ದೇ ಇರುತ್ತದೆ. ಆದ್ದರಿಂದ ಓಂಕಾರ ಸಹಿತವಾದುದು ಶಕ್ತಿಶಾಲಿ ಮಂತ್ರವಾಗುತ್ತದೆ. ಪ್ರಣವಾರೂಢನು ಪ್ರಣವ ಸ್ವರೂಪನು, ಪ್ರಣವ ಪ್ರಕೃತಿ ಸಂಜ್ಞನು, ಪ್ರಣವ ಷಡಂಗಸಮರಸ ನಮ್ಮ ಲಿಂಗದೇವರು. ಓಂ ಶ್ರೀ ಗುರುಬಸವಲಿಂಗಾಯ ನಮಃ ಹೆಚ್ಚು ಶಕ್ತಿಶಾಲಿ.

- ಷಡಕ್ಷರಗಳಾದ ಓಂ ನಮಃ ಶಿವಾಯ ಹಾಗೂ ಓಂ ಲಿಂಗಾಯ ನಮಃ ಇವುಗಳಲ್ಲಿ ಯಾವುದು ಶಾಸ್ತ್ರೀಯ ಹಾಗೂ ಸೂಕ್ತ ? ಒಂದರ ಬಳಕೆ ಸಾಲದೆ ?

★ ಓಂಕಾರ ರೂಪಿ ಶಿವನಿಗೆ ನಮಸ್ಕರಿಸುತ್ತೇನೆ, ಓಂಕಾರ ರೂಪಿ ಲಿಂಗದೇವನಿಗೆ ನಮಸ್ಕರಿಸುತ್ತೇನೆ. ಇವೆರಡರಲ್ಲಿ ನಾವು ಪೂಜಿಸುವುದು ಸೃಷ್ಟಿಕರ್ತ ಲಿಂಗದೇವನ ಪ್ರತೀಕವಾದ ಇಷ್ಟಲಿಂಗವನ್ನಾದುದರಿಂದ ಓಂ ಲಿಂಗಾಯ ನಮಃ ಎಂಬ ಷಡಕ್ಷರಿ ಮಂತ್ರವೇ ಸಾಕು. ಓಂ ನಮಃ ಶಿವಾಯ ಅಗತ್ಯವೆನಿಸದು.

- ಓಂ ಶ್ರೀ ಗುರುಬಸವಲಿಂಗಾಯ ನಮಃ ಮಂತ್ರದಲ್ಲಿ ಗುರು ಮತ್ತು ದೇವ ಉಭಯ ನಾಮಗಳೂ ಇರುವುದರಿಂದ ದೇವಮಂತ್ರದ ಪಠಣ ಪ್ರತ್ಯೇಕವಾಗಿ ಅಗತ್ಯವೆ ?

Digitalized by e-Sahithya Documentation Forum
Sponsored by Sarayu Foundation Trust

★ ಇಷ್ಟಲಿಂಗಾರ್ಚನೆಯಲ್ಲಿ ದೇವನ ಪೂಜೆ ಮಾತ್ರ ಇರುವುದರಿಂದಲೂ, ಅಲ್ಲಿ ನಿರಾಕಾರ ದೇವನ ಚಿಂತನೆ ನಡೆಯುವುದರಿಂದ ದೇವಪೂಜೆಯಲ್ಲಿ ಓಂ ಲಿಂಗಾಯ ನಮಃ ಎಂಬ ದೇವಮಂತ್ರ ಇರಬೇಕು. ಉಳಿದಂತೆ ಸಾಮೂಹಿಕ ಪ್ರಾರ್ಥನೆ, ಪೂಜೆ, ಭಜನೆ ಮುಂತಾದವುಗಳಲ್ಲಿ ಗುರು ಬಸವಣ್ಣ-ದೇವ ಕುರಿತ ಎರಡೂ ಪವಿತ್ರ ನಾಮಗಳು ಇರುವುದು ಸೂಕ್ತ. ಓಂಕಾರದ ಪ್ರತಿನಿಧಿಯಾದ ಬಸವಣ್ಣ, ಓಂಕಾರ ರೂಪಿಯಾದ ಲಿಂಗದೇವ ಉಭಯತರಿಗೂ ನಮಿಸುತ್ತೇನೆ ಎಂಬ ಅರ್ಥವಿರುವುದು ಓಂ ಶ್ರೀ ಗುರುಬಸವಲಿಂಗಾಯ ನಮಃ ಮಂತ್ರದಲ್ಲಿ.

- ಜಯ ನಮಃ ಪಾರ್ವತಿ ಪತೆ ಹರಹರ ಮಹಾದೇವ ಘೋಷಣೆ ಕೈಬಿಡಲು ಶಾಸ್ತ್ರೀಯ ಕಾರಣವೇನು ? ನಾವು ಪಾರ್ವತಿ ಪತಿ ಶಿವನ ಪೂಜಕರು ಅಲ್ಲ ; ನಿರಾಕಾರ ದೇವಪೂಜಕರು. ಜಯಗುರು ಬಸವೇಶ ಹರಹರ ಮಹಾದೇವ ಇದರಲ್ಲಿ ಹರಹರ ಮಹಾದೇವ್ ಶಿವವಾಚಕ ಅಥವಾ ದೇವತಾ ಸೂಚಕವಲ್ಲವೆ ?

★ ಹರಹರ ಮಹಾದೇವ ಘೋಷಣೆಯು ಭಾರತೀಯ ಪರಂಪರೆಯ ಸೂಚಕವಾಗಿದೆ. ಲಿಂಗಾಯತ ಧರ್ಮವು ಅಹಿಂದು ಧರ್ಮವಾದರೂ ಭಾರತವು ಇದಕ್ಕೆ ಜನ್ಮಭೂಮಿ ಮತ್ತು ಧರ್ಮಭೂಮಿ. ಆದ್ದರಿಂದ ಆ ಪರಂಪರೆ ಸೂಚಿಸಲು ಹರಹರ ಮಹಾದೇವ ಹಾಗೆಯೇ ಇರಿಸಿಕೊಳ್ಳಲಾಗಿದೆ. ಜಯಗುರು ಬಸವೇಶ ಪದಬಂಧದಿಂದ ನಾವು ವಿಶ್ವಗುರು ಬಸವಣ್ಣನವರನ್ನು ಆದಿಗುರುವನ್ನಾಗಿ ಹೊಂದಿದ ಶರಣ ಪರಂಪರೆಯವರು ಎಂಬುದು ಮನದಟ್ಟಾಗುವುದು.

ಅರುಣ ಹಿರೇಮಠ, ಹುಬ್ಬಳ್ಳಿ - ಬಸವಣ್ಣನವರು ಕೇವಲ ಸುಧಾರಕರು, ಧರ್ಮಸ್ಥಾಪಕರಲ್ಲ ಎಂದು ಕೆಲವರು ಅನ್ನುವರಲ್ಲ ?

★ ಸಾಮಾನ್ಯವಾಗಿ ಸಮಾಜ ಕಲ್ಯಾಣದಲ್ಲಿ ಆಸಕ್ತಿ ಹೊಂದಿರುವವರನ್ನು 3 ರೀತಿ ವಿಂಗಡಿಸಬಹುದು. ಸಮಾಜ ಸೇವಕರು, ಸಮಾಜ ಸುಧಾರಕರು, ಸಮಾಜ ನಿರ್ಮಾಪಕರು ಎಂಬುದಾಗಿ. ಸಂತ ವಿನೋಬಾಜಿ ಸಮಾಜ ಸೇವಕರು, ಸುಧಾರಕರಲ್ಲ. ಮಹಾತ್ಮಾ ಗಾಂಧೀಜಿ ಸಮಾಜ ಸೇವಕರೂ ಅಹುದು, ಸಮಾಜ ಸುಧಾರಕರೂ ಅಹುದು. ಅವರು ಅಸ್ಪೃಶ್ಯತೆ, ಮತಾಂಧತೆ ವಿರುದ್ಧ ಹೋರಾಡಿದರು. ಆದರೆ ಧರ್ಮ ಗುರು ಬಸವಣ್ಣನವರು ಸಮಾಜ ಸೇವಕರು-ಭೃತ್ಯಾಚಾರಿ, ಸಮಾಜ ಸುಧಾರಕರು-ಗಣಾಚಾರಿ, ನವ ಸಮಾಜ ನಿರ್ಮಾಪಕರು. ಹೊಸ ಧರ್ಮದ ಮೂಲಕ ಎಲ್ಲ ಜಾತಿಮತ ಧರ್ಮಗಳವರನ್ನು ಆಹ್ವಾನಿಸಿ ಹೊಸ ಸಮಾಜವನ್ನು ಕಟ್ಟಿದ ಸಮಾಜ ನಿರ್ಮಾಪಕರು. ಒಂದು ಧರ್ಮದ ಕಕ್ಷೆಯಲ್ಲಿದ್ದು ಅದರ ಲೋಪ-ದೋಷ ನಿವಾರಣೆಗೆ ಯತ್ನಿಸುವುದು ಸಮಾಜ ಸುಧಾರಣೆ. ವೈದಿಕ ಧರ್ಮ ಸುಧಾರಣೆಗೆ ಯತ್ನಿಸದೆ ಹೊಸದಾದ ಲಿಂಗಾಯತ ಧರ್ಮವನ್ನೇ ಕೊಟ್ಟವರು-ಧರ್ಮಗುರು ಬಸವಣ್ಣನವರು.

-ಚನ್ನವೀರಪ್ಪ ಎಡೆಯಾಪುರ, ರಾಣೆಬೆನ್ನೂರು - ಇಲ್ಲಿ ಕೆಲವರು ಪಂಚಪೀಠದ ಸ್ವಾಮಿಗಳ ಶಿಷ್ಯರು ಬಸವಣ್ಣನ ವಚನಗಳು ನಮ್ಮ ರೇಣುಕ ಜಗದ್ಗುರುಗಳಿಂದ ರಚಿಸಿದ ಸಂಸ್ಕೃತ ಶ್ಲೋಕದಿಂದ ಕದ್ದು ಕನ್ನಡದಲ್ಲಿ ಆಗಿವೆ. ಆದ್ದರಿಂದ ನಾವು ಅದೇ ವಚನಗಳನ್ನು ಕೂಡಲಸಂಗಮದೇವಾ ಇದ್ದುದನ್ನು ತೆಗೆದು ರೇಣುಕದೇವ ಎಂದು ಬರೆದು ಸಣ್ಣ ಸಣ್ಣ ಪುಸ್ತಕ ಮುದ್ರಿಸುತ್ತೇವೆ ಎನ್ನುತ್ತಿದ್ದಾರೆ. ಈಗ ನಾವೇನು ಮಾಡಬೇಕು. ?

★ ಏನೂ ಮಾಡಬೇಕಾಗಿಲ್ಲ ಮೌನವಾಗಿರಬೇಕು. ಬೆಂಕಿಯ ಕಿಡಿ ದೀಪವನ್ನು ಹೊತ್ತಿಸಿ ಬೆಳಕೂ ಕೊಡಬಲ್ಲುದು. ಬೆಂಕಿಯಾಗಿ ಸುಡಲೂ ಬಲ್ಲುದು. ಧರ್ಮಪಿತ ಬಸವಣ್ಣನವರ ವಚನಗಳು ಅನುಯಾಯಿಗಳಿಗೆ ಬೆಳಕು ; ಜಾತಿವಾದಿಗಳಿಗೆ ಬೆಂಕಿ. ಅಂಥ ವಚನಗಳನ್ನು ನೋಡಿದರೆ ಹರಳೆಣ್ಣೆ ಕುಡಿದಂತೆ ಮುಖ ಕಹಿ ಮಾಡುವ ಆ ಜನ ಮುದ್ರಿಸಿ, ಓದಲು ಹೋಗುವರೆ ? ಯಾವುದೋ ಸಂಕಟಕ್ಕೆ

Digitalized by e-Sahithya Documentation Forum
Sponsored by Sarayu Foundation Trust

ಮುದ್ರಿಸಿ ಓದಿದರೆ ಆ ವಚನಗಳು ತಲೆಯನ್ನು ಪ್ರವೇಶಿಸುತ್ತಲೇ ತಮ್ಮ ಪ್ರಭಾವ ಬೀರಿ ಅವರ ತಲೆಯೊಳಗಣ ಶತ ಶತಮಾನಗಳ ಕೊಳೆಯನ್ನು ಕಿತ್ತು ಎಸೆಯುತ್ತವೆ ; ಚಿಂತಿಸದಿರಿ.

ಶಶಿಕಾಂತ ಬಳ್ಳಾರಿ - ನಾವು ಬಸವ ಭಕ್ತರು, ನೀವು ಬೋಧಿಸಿದ ಮಾರ್ಗದಿಂದ ಸಂತೋಷ ಹೊಂದಿದ್ದೇವೆ. ದಿನಾಲೂ ನೆನಹು ಮಾಡುವಾಗ, ಷಟ್‌ಸೂತ್ರ ಘೋಷಣೆ ಮಾಡಿ, ನಮ್ಮ ಧರ್ಮದ ಧ್ಯೇಯ ಕಲ್ಯಾಣ ರಾಜ್ಯ ನಿರ್ಮಾಣ ಎನ್ನುತ್ತೇವೆ. ಆದರೆ ದಿನದಿನಕ್ಕೆ ಹೆಚ್ಚುತ್ತಿರುವ ಅನ್ಯಾಯ, ಭ್ರಷ್ಟಾಚಾರ, ಅತ್ಯಾಚಾರ, ಕ್ರೌರ್ಯ ನೋಡಿದಾಗ ಕಲ್ಯಾಣರಾಜ್ಯ ಸಾಧ್ಯವೇ ಎನ್ನಿಸುತ್ತ ನಿರಾಶೆಯಾಗುತ್ತಿದೆ.

★ ಈ ಘೋಷಣೆ ಬಹುಮುಖಿಯಾಗದೆ. ಅಪ್ಪ ಬಸವಣ್ಣನವರ ಧರ್ಮದ ಗುರಿ ಆತ್ಮ ಕಲ್ಯಾಣ, ಸಮಾಜ ಕಲ್ಯಾಣ, ರಾಷ್ಟ್ರ ಕಲ್ಯಾಣ, ವಿಶ್ವ ಕಲ್ಯಾಣ. ಓರ್ವ ವ್ಯಕ್ತಿ, ಬಸವ ತತ್ತ್ವ ಅಳವಡಿಸಿಕೊಳ್ಳುತ್ತ ಅನೇಕ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತಾನೆ. ತನ್ನ ಮನಸ್ಸಿನ ಪುಟ್ಟ ಗಿಳಿಗೆ ಭಕ್ತಿ ಎಂಬ ಪಂಜರ ಇಟ್ಟು ತನ್ನ ಆದರ್ಶಗಳನ್ನು ರಕ್ಷಿಸಿಕೊಳ್ಳುತ್ತಾನೆ. ನಂತರ ಶರಣರ ಸತ್ಸಂಗದ ಕೋಟೆ ಕಟ್ಟಿಕೊಂಡು ಸಮಾನ ಮನಸ್ಕರನ್ನು ಒಟ್ಟುಗೂಡಿಸಿ ಒಂದು ಆದರ್ಶದ ವಲಯ ನಿರ್ಮಿಸಿಕೊಳ್ಳುತ್ತಾನೆ. ಇದು ವಿಸ್ತಾರವಾಗುತ್ತ ಹೋದಾಗ ಒಂದು ಜೀವಂತ ಜನಾಂಗ ನಿರ್ಮಾಣವಾಗುತ್ತದೆ. ಆದರ್ಶವಾದಿಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಅಂಥ ಒಂದು ಸಮಾಜ, ಜಾತಿವರ್ಣವರ್ಗರಹಿತ ಧರ್ಮಸಹಿತವಾದ ಶರಣ ಸಮಾಜ ರಚನೆಯೇ ನಮ್ಮ ಧ್ಯೇಯ. ಪ್ರಸ್ತುತ ರಾಜಕೀಯ ಪರಿಸರದಲ್ಲಿ ಅಂತಹ ರಾಜಕೀಯ ರಾಜ್ಯ ಕಟ್ಟಲು ಸಾಧ್ಯವಿಲ್ಲದಿದ್ದರೂ ಆದರ್ಶವಾದಿ ಶರಣರು ಒಂದೆಡೆ ಸೇರಿ ತತ್ತ್ವ ಚಿಂತನೆ ಮಾಡುವ ವಲಯ (zone) ನಿರ್ಮಾಣ ಮಾಡಿಕೊಳ್ಳುವುದು ಕಲ್ಯಾಣ ರಾಜ್ಯವೆ !

-ನನ್ನ ಕೆಲವು ಮಿತ್ರ, ಮಿತ್ರರು ನಾಸ್ತಿಕರಾಗಲಿಕ್ಕೆ ಅವರು ನೋಡುತ್ತಿರುವ ಕೆಲವು ಸ್ವಾಮಿ, ಮಠಾಧಿಕಾರಿಗಳೇ ಕಾರಣವಂತೆ. ಮಟ್ಕಾ ಆಡುವವರು, ಕುಡಿಯುವವರು, ಜಾತಿವಾದಿಗಳು ಎಲ್ಲರನ್ನೂ ನೋಡಿ, ಇಂಥವರನ್ನು ಮತ್ತೆ ಆಹ್ವಾನಿಸಿ ಪಾದ ತೊಳೆಯುವ ಮೂಢ ಭಕ್ತರನ್ನು ಕಂಡು ನನ್ನ ಮಿತ್ರರಿಗೆ ಧರ್ಮದ ಬಗ್ಗೆಯೇ ಜಿಗುಪ್ಸೆ ಹುಟ್ಟಿದೆಯಂತೆ . ಇವರಿಗೆ ನಾನು ಏನು ಹೇಳಲಿ ?

★ ಪಾರ್ಥೇನಿಯಮ್ ದಂಡಿಯಾಗಿ ಬೆಳೆದಿರುತ್ತದೆ. ಅದೇ ತೆಂಗಿನ ಮರ, ಮಲ್ಲಿಗೆ ಬಳ್ಳಿ ಎಲ್ಲೆಡೆಯಲ್ಲಿ ಸಿಗುವುದೇ ಇಲ್ಲ. ಪಾರ್ಥೇನಿಯಮ್ ನೋಡಿ, ಅದು ಉಂಟುಮಾಡುವ ಅಲರ್ಜಿ, ಕೆಮ್ಮು ಕಂಡು ಬೇಸತ್ತು ಬೇರೆ ಗಿಡಮರಗಳೇ ಹೊಲ್ಲ ಎಂದು ನಿರ್ಧರಿಸಬಾರದು. ಜಾಗೃತರಾದ ವಿಚಾರವಾದಿಗಳು ಹೆಚ್ಚಿನ ಜವಾಬ್ದಾರಿ ಹೊರಬೇಕು. ಮೂಢಭಕ್ತರನ್ನು ಮೌಢ್ಯತೆಯ ಕೆಸರಿನಿಂದ ಮೇಲೆತ್ತಬೇಕು. ಪವಿತ್ರವಾದ ತ್ಯಾಗಿಗಳ ವೇಷ ತೊಟ್ಟು ವಂಚನೆ ಮಾಡುವವರಿಂದ ದೂರವಿರುವಂತೆ ಜನರನ್ನು ಎಚ್ಚರಿಸಬೇಕು. ಬಿಸಿ ಹಾಲು ಕುಡಿದು ಬಾಯಿ ಸುಟ್ಟುಕೊಂಡು ನಂತರ ಹಾಲು ಕುಡಿಯುವುದನ್ನೇ ಬಿಟ್ಟಂತೆ ನಾಸ್ತಿಕರಾಗುವುದು ಅವಿವೇಕತನ.

ಚಂದ್ರಕಾಂತ ಪಾಟೀಲ, ಮುಂಡರಗಿ, ಗದಗ - ನೀವು ಯಾವಾಗಲೂ ಸುದ್ದಿಯಲ್ಲಿರ ಬಯಸಿ ಏನಾದರೂ ಮಾಡುತ್ತೀರೆಂದು ಕೆಲವರು ಆರೋಪಿಸುತ್ತಾರಲ್ಲ ? ಇದಕ್ಕೇನು ನಿಮ್ಮ ಉತ್ತರ ?

★ ನಮಗೆ ಭಕ್ತರ ಮನೆಯಲ್ಲಿ ಬಿನ್ನಹ ತೀರಿಸುತ್ತ ಸುಮ್ಮನೆ ಮಠದಲ್ಲಿ ಆಲಸಿಯಾಗಿ ಕೂರಲು ಇಷ್ಟವಿಲ್ಲ . ಸದಾ ಧರ್ಮ-ಸಮಾಜ-ರಾಷ್ಟ್ರದ ಹಿತಕ್ಕಾಗಿ ಚಿಂತನೆ ಮಾಡುತ್ತ ಕಾರ್ಯನಿರತರಾಗುತ್ತೇವೆ. ನಾವು ಏನೇ ಮಾಡಿದರೂ ಅದನ್ನು ದೊಡ್ಡ ಸುದ್ದಿಯನ್ನಾಗಿ ಉಳಿದ ಮಠಾಧೀಶರು ಮಾಡುತ್ತಾರೆ. ಕೇವಲ ಪ್ರಚಾರಕ್ಕಾಗಿ ನಾವು ಏನೂ ಮಾಡುವುದಿಲ್ಲ. ಆದರೆ ವಿಧಾಯಕ ಯೋಜನೆ ಹಾಕಿಕೊಂಡು ಕಾರ್ಯ ಮಾಡುವಾಗ ಅನಾಯಾಸವಾಗಿ ಪ್ರಚಾರ ಸಿಕ್ಕರೆ ನಾವಾದರೂ ಏನು ಮಾಡೋಣ ? ಬಯಸದೆ ಬಂದ ಬಸವಪ್ರಸಾದ ಎಂದು ಭಾವಿಸುತ್ತೇವೆ. ★

ಲಿಂಗದೇವ ವಚನಾಂಕಿತ ಬದಲಾವಣೆ

-ಅನಾಮಧೇಯ, ಊರು ಹೇಳಲು ಧೈರ್ಯವಿಲ್ಲ-ನಿಮ್ಮ ಶಿಷ್ಯವೃಂದದಲ್ಲಿ ನಾನು ಒಬ್ಬ ಕೂಡಲಸಂಗಮದೇವ ವಚನಾಂಕಿತ ಬದಲಿಸಿ, ಲಿಂಗಾದೇವ ಮಾಡಿ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದೀರಿ. ಮನುಷ್ಯನಿಗೆ Homosapien ಎನ್ನುವುದು ವೈಜ್ಞಾನಿಕ ಭಾಷೆ. ಆದರೆ ಎಷ್ಟು ಜನರಿಗೆ ಇದು ಅರ್ಥವಾಗುತ್ತದೆ. ಮನುಷ್ಯ ಎಂದರೆ ಅರ್ಥವಾಗುತ್ತದೆ. ಧರ್ಮಗುರುಗಳು ಕೂಡಲಸಂಗಮದೇವ ಎಂದು ದೇವರನ್ನು ಕರೆದಿದ್ದಾರೆ. ಹಾಗಾದರೆ ನಿಮಗೆ ಅವರ ವಚನಗಳಲ್ಲಿ ನಂಬಿಕೆ ಇಲ್ಲವೆ ? ಶರಣರುಗಳು, ಚನ್ನಮಲ್ಲಿಕಾರ್ಜುನಾ, ಕಲಿದೇವರದೇವಾ, ಗುಹೇಶ್ವರಾ, ಕಪಿಲಸಿದ್ಧಮಲ್ಲಿಕಾರ್ಜುನಾ, ಅಖಂಡೇಶ್ವರಾ, ರಾಮನಾಥಾ, ಸೌರಾಷ್ಟ್ರ ಸೋಮೇಶ್ವರ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ, ಉರಿಲಿಂಗದೇವ ಇತ್ಯಾದಿ ಬಳಸಿದ್ದಾರೆ. ತಾವೂ ಸಚ್ಚಿದಾನಂದ ಎಂಬ ಮುದ್ರಿಕೆ ಬಳಸಿದ್ದೀರಿ. ನ್ಯಾಯವಾಗಿ ನೀವು ಸಚ್ಚಿದಾನಂದ ಬದಲಿಗೆ ಲಿಂಗದೇವ ಬಳಸಬೇಕು. ನಾನು ಕೇಳಿದ ಪ್ರಶ್ನೆಗೆ ಏನೋ ಒಂದು ಹೇಳಿ ಬಾಯಿ ಮುಚ್ಚಿಸುತ್ತೀರಾ ಎಂಬುದೂ ನನಗೆ ಗೊತ್ತು. ನಾನು ಭಿನ್ನಾಭಿಪ್ರಾಯ ಸೂಚಿಸಿದ್ದೇನೆ ಎಂದ ಮಾತ್ರಕ್ಕೆ ನಾನು ನಿಮ್ಮ ವಿರೋಧಿಯಲ್ಲ. ನೀವು ನಿಮ್ಮ ಅಭಿಪ್ರಾಯ ಬದಲಿಸಿಕೊಳ್ಳದಿದ್ದರೂ ತಮ್ಮ ಅಭಿಮಾನಿಯೆ !

★ ನಮ್ಮ ಅಭಿಮಾನಿಗಳಾಗಬೇಕೆಂದು ನಾವು ಎಂದೂ ಬಯಸುವುದಿಲ್ಲ. ನೀವು ಬಸವ (ತತ್ವದ) ಅಭಿಮಾನಿಯಾಗಿ, ಸೃಷ್ಟಿಕರ್ತನ ಸರ್ವೋತ್ತಮಿಕೆ, ಏಕತ್ವ ತಿಳಿದು ನಿಜ 'ದೇವಭಕ್ತ'ರಾದರೆ ಸಾಕು ರಾಷ್ಟ್ರೀಯ ಬಸವ ದಳದ ಓರ್ವ ಶರಣ ಬಂಧುಗಳು ಬಂದು ಮಾತನಾಡುತ್ತ ಹೀಗೊಂದು ಅನುಭವ ಹೇಳಿದರು. ಅವರು ಶ್ರಾವಣಮಾಸದಲ್ಲಿ ದಲಿತರ ಕೇರಿಗಳನ್ನು ಸಂದರ್ಶಿಸುವ, ಅಲ್ಲಿ ಬಸವ ಜ್ಯೋತಿ ನಡೆಸುವ ಕಾರ್ಯಕ್ಕೆಗೊಂಡರಂತೆ. ಆಗ ಕೆಲವರು ನಂಬದೆ ಇವರು ಬಸವಣ್ಣನವರನ್ನು ದೊಡ್ಡವರನ್ನು ಮಾಡಲು ಬಂದಿದ್ದಾರೆ ಎಂದು ಹೇಳಿ, ಅಂಬೇಡ್ಕರ್ ಫೋಟೊ ಇಡುತ್ತೇವೆ ಒಪ್ಪುವಿರಾ ಎಂದರಂತೆ, ಇವರು ಸಂತೋಷದಿಂದ ಖಂಡಿತಾ ಇಡಿರಿ ಎಂದರಂತೆ. ನಂತರ ಇವರು ಭಾಷಣ ಮಾಡುತ್ತ ಹೇಳಿದರಂತೆ ; "ನಾವು ಬಸವಣ್ಣನವರನ್ನು ದೊಡ್ಡವರನ್ನು ಮಾಡಲು ಬಂದಿಲ್ಲ, ಅಂಬೇಡ್ಕರರನ್ನು ದೊಡ್ಡವರನ್ನು ಮಾಡಲು ಬಂದಿಲ್ಲ. ನಿಮ್ಮನ್ನು ದೊಡ್ಡವರನ್ನು ಮಾಡಲು ಬಂದಿದ್ದೇವೆ" ಎಂದರಂತೆ. ಅವರ ಮೇಲೂ ಪರಿಣಾಮವಾಯಿತಂತೆ. ಈ ಮಾತು ನನಗೂ ಬಹಳ ಸಂತೋಷ, ಹೆಮ್ಮೆ ತಂದಿತು - ನಮ್ಮ ರಾಷ್ಟ್ರೀಯ ಬಸವ ದಳದವರಲ್ಲಿ ಎಂತೆಂತಹ ವಿಚಾರಶೀಲರಿದ್ದಾರಲ್ಲ ಎಂದು. ಹಾಗೆ ನಮ್ಮ ವಿದ್ವತ್, ವೈಭವ ಮೆರೆಸಲು ಏನನ್ನೂ ಮಾಡುವುದಿಲ್ಲ. ದೇವರ ಮಹಿಮೆಯನ್ನು ಅರಿಯದ ಹಿಂದು ವಾದಿಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಪಿತ ಬಸವಣ್ಣನವರ ಹಿರಿಮೆ ತೋರಿಸುವುದರಲ್ಲಿ ಸಂತೋಷ ಪಡುತ್ತೇವೆ. ಏನಾದರೂ ಹೇಳಿ ಬಾಯಿ ಮುಚ್ಚಿಸುತ್ತೀರಿ ಎಂಬ ಅಸಂಸ್ಕೃತ ಪದವನ್ನು ನೀವು ಬಳಸಿದ್ದರೂ ನಾವು ತಾಳ್ಮೆಗೆಡುವುದಿಲ್ಲ. ಏಕೆಂದರೆ ಬಾಯಿಮುಚ್ಚಿಸುವುದರಲ್ಲಿ ದಬ್ಬಾಳಿಕೆ, ಕೋಪ, ಅತಾರ್ಕಿಕತೆ ಇರುತ್ತದೆ. ನಾವು (Convince) ಮನವರಿಕೆ ಮಾಡಿಕೊಡುತ್ತೇವೆಯೇ ವಿನಾ Confusion ಮಾಡುವುದಿಲ್ಲ, ದಬ್ಬಾಳಿಕೆಯಿಂದ ಬಾಯಿಯನ್ನೂ ಮುಚ್ಚಿಸುವುದಿಲ್ಲ. ತಾಳ್ಮೆ ವಹಿಸುವುದು ಏಕೆಂದರೆ, ಎಲ್ಲರ ಮನಬುದ್ಧಿಗಳಿಗೆ ಸತ್ಯವನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಇರುವುದಿಲ್ಲ. ಕೆಲವರ ಕಲಿಯುವಿಕೆಯೂ ನಿಧಾನ, ಲಿಂಗದೇವ ವಿಷಯದಲ್ಲೇ ಕಂಡುಕೊಂಡೆವು. ವಾಹಕಗಳಲ್ಲಿ ಹಲವು ಬಗೆ. ಪ್ಲಾಟಿನಂ ತಂತಿ ಅತ್ಯಂತ ತೀವ್ರವಾಗಿ ವಿದ್ಯುತ್ತನ್ನು ಹರಿಸುತ್ತದೆ, ತಾಮ್ರ ಅದಕ್ಕಿಂತ ನಿಧಾನ, ಅಲ್ಯುಮಿನಿಯಮ್ ಇನ್ನೂ ನಿಧಾನ. ಕಟ್ಟಿಗೆ ತುಂಡಿನಲ್ಲಿ ವಿದ್ಯುತ್ ಹರಿಯುವುದೇ

ಇಲ್ಲ. ಹಾಗೆಯೇ ಬುದ್ಧಿಯ ಗ್ರಹಣ ಶಕ್ತಿ. ಎಲ್ಲ ಬೌದ್ಧಿಕ ಸ್ತರದ ಮಕ್ಕಳಿಗೂ ಶಿಕ್ಷಕ ತಾಳ್ಮೆ ಕೆಡದೆ ಪಾಠ ಮಾಡಲೇ ಬೇಕೆಂತೋ ಗುರುಗಳೂ ಅಷ್ಟೇ ಸಹನೆಯಿಂದ ತತ್ವ ಬೋಧೆಯನ್ನು ಜನರಿಗೆ ಮಾಡಬೇಕಾಗುತ್ತದೆ.

ಧರ್ಮಪಿತರ ಮಾತಿನಲ್ಲಿ ನಮಗೆ ನಂಬಿಕೆ ಇರುವುದಷ್ಟೇ ಅಲ್ಲ, ಅವು ಆದೇಶಗಳು; ಮಾನವ ಕಲ್ಯಾಣದ ಸೂತ್ರಗಳು ಎಂಬ ದೃಢ ವಿಶ್ವಾಸವಿದೆ. ಆದ್ದರಿಂದಲೇ ಅವು ಶುಚಿಯಾಗಿರಬೇಕು ಎಂದು ಪರಿಶ್ರಮ ಪಡುತ್ತಿರುವುದು. ಉಳಿದ ಸ್ವಾಮಿಗಳಂತೆ ಎಲ್ಲ ಗುಡಿಗೋಪುರ ಉದ್ಘಾಟನೆ, ದೇವತೆಗಳ ಪ್ರತಿಷ್ಠಾಪನೆಗೆ ಹೋಗಿ ಶ್ರೀಮಂತ ಭಕ್ತರನ್ನು ಸಂಪ್ರೀತಗೊಳಿಸಿ ವಿಪುಲವಾಗಿ ಕಾಣಿಕೆ ಪಡೆಯಲು ನಮಗೇನೂ ಯಾರೂ ಬೇಡವೆನ್ನರು. ಆದರೆ ಧರ್ಮಗುರು ಕಲಿಸಿದ ಏಕದೇವೋಪಾಸನೆಯ ಮಹತ್ವ ತಿಳಿಸಲು ಸ್ವಧರ್ಮೀಯರಾದ ಮಠಾಧೀಶರು, ಶ್ರೀಮಂತರ ವಿರೋಧ ಕಟ್ಟಿಕೊಳ್ಳುತ್ತಲಿರುವುದು ಏತಕ್ಕಾಗಿ ? ಸಮಾಜವನ್ನು ತಾತ್ವಿಕವಾಗಿ ಶುದ್ಧಿಮಾಡಲಿಕ್ಕಾಗಿ. ಧರ್ಮಪಿತ ಬಸವಣ್ಣನವರು ಬ್ರಾಹ್ಮಣ ವಟುವಾಗಿ ಸಂಗಮನಾಥನ ಪೂಜಾರಿಯಾಗಿ 12 ವರ್ಷ ಕಳೆದುದು ನಿಜ. ಆಗ ಅವರು ಆರಾಧಿಸಿದ್ದು ಕೂಡಲ ಸಂಗಮೇಶ್ವರನೆಂಬ ಸ್ಥಾವರಲಿಂಗವನ್ನೇ. ಆದರೆ 21ನೆಯ ವರ್ಷದಲ್ಲಿ ಸಾಕ್ಷಾತ್ಕಾರ ಪಡೆದ ನಂತರ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಿಗೂ ಮಿಗಿಲಾದ ಸೃಷ್ಟಿಕರ್ತನ ಮಹಿಮೆ ಅರಿತು ; ಆ ದೇವನನ್ನು ಲಿಂಗದೇವ ಎಂದು ಕರೆದು, ಆ ನಿರಾಕಾರ ಲಿಂಗದೇವನನ್ನು ಆರಾಧಿಸಲು ಗೋಳಾಕಾರದ ಇಷ್ಟಲಿಂಗವನ್ನು ದಯಪಾಲಿಸಿದರು. ಓರ್ವ ಕನ್ಯೆ ಇರುತ್ತಾಳೆ ; ವಿವಾಹಕ್ಕೆ ಮೊದಲು ಆಕೆ ಅನೇಕ ವರಗಳನ್ನು ನೋಡಿರಬಹುದು. ಅವರೂ ಆಕೆಯನ್ನು ನೋಡಿರಬಹುದು. ಆದರೆ ವಿವಾಹವಾದ ನಂತರ ಒಬ್ಬನೇ ಪತಿಯನ್ನು ಪ್ರೀತಿಸುತ್ತಾಳೆ, ಉಪಚರಿಸುತ್ತಾಳೆ. ಹಾಗೆ ಶಿವಭಕ್ತರಾಗಿದ್ದ ಬಾಲಕ ಬಸವರಸರು ಸಂಗಮೇಶ್ವರನನ್ನು ಪೂಜಿಸಿದರು, ಹಾಡಿದರು, ಕೊಂಡಾಡಿದರು. ಆದರೆ ನಂತರ ಸೃಷ್ಟಿಕರ್ತನ ಅನುಗ್ರಹ ಅವರ ಮೇಲೆ ಹರಿದಾಗ ಏಕದೇವ ವಿಶ್ವಾಸ ತತ್ವವನ್ನು ಬೋಧಿಸಿದರು. ನಂತರ ಅವರ ಆರಾಧ್ಯದೇವ (ದೈವವಲ್ಲ) ಲಿಂಗದೇವನೇ ಹೊರತು, ಕೂಡಲ ಸಂಗಮನಾಥನಲ್ಲ, ಇದನ್ನೆಲ್ಲ ನಾವು ಗ್ರಹಿಸಿರುವುದು ಧರ್ಮಪಿತರ ಪವಿತ್ರ ವಚನಗಳಿಂದಲೆ. ಅವರ ಸಂಕಲ್ಪನೆಯಲ್ಲಿ ಈ ಎರಡೂ ಮಹತ್ವಪೂರ್ಣ ಬದಲಾವಣೆ ಕಾಣುತ್ತೇವೆ. ಮೂಲ ಶೈವದಿಂದ, ಸ್ಥಾವರಲಿಂಗಾರಾಧನೆಯಿಂದ ಇಷ್ಟಲಿಂಗಾರಾಧನೆಗೆ ಬಂದು ಬಸವ ಧರ್ಮ ಸ್ವೀಕಾರ ಮಾಡಿದ ಎಲ್ಲ ಶರಣರದ್ದೂ ಇದೇ ಸಮಸ್ಯೆ ಶೈವದಿಂದ ಬರದೆ ನೇರವಾಗಿ ಲಿಂಗಾಯತರಾದವರು ಈ ದೋಷವನ್ನು ಹೊಂದಿಲ್ಲ. ಉದಾಹರಣೆಗೆ :

ಕಲಿದೇವರ ದೇವ : ಕಲಿ ಅಂದರೆ ವೀರ ; ಮಡಿವಾಳ ಮಾಚಿದೇವರು ಸ್ವಭಾವತಃ ಕಲಿದೇವರು; ಇವರ ದೇವರು ಸೃಷ್ಟಿಕರ್ತ ಕಲಿದೇವರದೇವ

ಉರಿಲಿಂಗದೇವ : ಉರಿಲಿಂಗ ಎಂಬ ಶರಣರ ದೇವರು- ಸೃಷ್ಟಿಕರ್ತ

ಅಖಂಡೇಶ್ವರ : ಅಖಂಡ ಸ್ವರೂಪಿ ಲಿಂಗದೇವ

ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ : ಉರಿಲಿಂಗದೇವನ ಶಿಷ್ಯನಾದ ಪೆದ್ದಿ ಎಂಬ ಶರಣನಿಗೆ ಪ್ರಿಯನಾದ ವಿಶ್ವೇಶ್ವರ -ಸೃಷ್ಟಿಕರ್ತ

ನಮಗೆ ಸಮಸ್ಯೆ ಉಂಟಾಗುವುದು ಮೊದಲು ಸ್ಥಾವರಲಿಂಗಾರಾಧಕರಾಗಿ ನಂತರ ಇಷ್ಟಲಿಂಗ ನಿಷ್ಠೆಗೆ ಬಂದ ಶರಣರ ವಚನ ಮುದ್ರಿಕೆಗಳಿಂದ. ಉದಾ : ಚನ್ನಮಲ್ಲಿಕಾರ್ಜುನ, ಕಪಿಲಸಿದ್ಧ ಮಲ್ಲಿಕಾರ್ಜುನ. ಈ ಮುದ್ರಿಕೆ ಹೊಂದಿದ ಜಗನ್ಮಾತೆ ಅಕ್ಕಮಹಾದೇವಿ ಮತ್ತು ಶಿವಯೋಗಿ ಸಿದ್ಧರಾಮೇಶ್ವರರು ಮೊದಲು ಶ್ರೀಶೈಲದ ಮಲ್ಲಿಕಾರ್ಜುನನ ಆರಾಧಕರು. ನಂತರ ಇಷ್ಟಲಿಂಗಪೂಜಕರಾದರು. ಈ ಬದಲಾವಣೆಯನ್ನು ಸೊಗಸಾಗಿ ಸಿದ್ಧರಾಮೇಶ್ವರರು ಹೇಳುತ್ತಾರೆ.

Digitalized by e-Sahithya Documentation Forum
Sponsored by Sarayu Foundation Trust

ಮಾತ್ರವಲ್ಲ ವಚನ ಮುದ್ರಿಕೆಯನ್ನು ಕಪಿಲಸಿದ್ಧಮಲ್ಲಿಕಾರ್ಜುನ ಎಂಬ ಸ್ಥಾವರಲಿಂಗ ಸೂಚಕ ಪದದಿಂದ ಯೋಗಿನಾಥ- ಯೋಗಿಗಳ ಒಡೆಯ ಎಂಬ ದೇವ ಸೂಚಕಪದಕ್ಕೆ ಬದಲಾಯಿಸಿಕೊಂಡರು. ತ್ರಿವಿಧಿಗಳಲ್ಲಿ ಯೋಗಿನಾಥನೇ ವಿಜೃಂಭಿಸಿದ್ದಾನೆ. ಅಕ್ಕಮಹಾದೇವಿಯ ವಿಷಯದಲ್ಲಿ ಪುನಃ ಸಮಸ್ಯೆ ಉಂಟಾಗುತ್ತದೆ. ಮಲ್ಲಿಕಾರ್ಜುನ, ಚನ್ನಮಲ್ಲಿಕಾರ್ಜುನಾ, ಅಂದಾಗ ಅಕ್ಕನವರು ಹೇಳಿವ ''ಸಾವಿಲ್ಲದ, ಕೇಡಿಲ್ಲದ, ರೂಪಿಲ್ಲದ ಚೆಲುವ'' ಹೇಗೆ ಹೊಂದಿಕೆಯಾಗುತ್ತದೆ ? ಅಕ್ಕನವರ ಅಂತರಂಗದಲ್ಲಿ ಪರಿಕಾಲ್ಪನಿಕ (Conceptual) ಬದಲಾವಣೆ ಆಯಿತು, ಮುದ್ರಿಕೆಯಲ್ಲಿ ಆಗಲಿಲ್ಲ. ಹೀಗಾಗಿ ಅಜ್ಞಾನಿ ಲಿಂಗಾಯತರು ಮತ್ತು ಈ ಧರ್ಮದ ಆಂತರ್ಯ ಗೊತ್ತಿಲ್ಲದ ಲಿಂಗಾಯತೇತರರು ಹೇಳುತ್ತಾರೆ,'' ತನ್ನ ಆರಾಧ್ಯ ದೈವವಾದ ಚನ್ನಮಲ್ಲಿಕಾರ್ಜುನನನ್ನು ಆರಾಧಿಸಲು ಅಕ್ಕಮಹಾದೇವಿ ಶ್ರೀಶೈಲಕ್ಕೆ ಹೋದರು''. ಈ ಮಾತು ಕೇಳಿದಾಗ ಹಿಮಾಲಯದ ಗೌರಿಶಂಕರ ಶೃಂಗದಿಂದ ಒಂದು ಕೊರಕಲಿಗೆ ಎತ್ತಿ ಬಿಸಾಡಿದಂತೆ ನಮಗೆ ಆಗುತ್ತದೆ. ಅನುಭವ ಮಂಟಪದಲ್ಲಿ ಶರಣರ ಸಂಗದಲ್ಲಿದ್ದು ಅಕ್ಕ ಏರಿದ ಅತ್ಯುನ್ನತ ಯೋಗ ಸಿದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿದಂತೆ ಆಗುತ್ತದೆ. ನಾವು ವಚನಗಳನ್ನು ಬರೆಯಲು ಆರಂಭಿಸಿದಾಗ ನಮಗೆ ಶಿವ ಮತ್ತು ಸೃಷ್ಟಿಕರ್ತ, ಸ್ಥಾವರಲಿಂಗ-ಇಷ್ಟಲಿಂಗ-ಇವುಗಳ ವ್ಯತ್ಯಾಸ ಗೊತ್ತಿದ್ದುದರಿಂದಲೇ ನಾನು ನಿರಾಕಾರ ದೇವನ ಪ್ರತೀಕವಾದ ಸಚ್ಚಿದಾನಂದ ಎಂಬ ಮುದ್ರಿಕೆ ಇಟ್ಟುಕೊಂಡುದು. ಆದ್ದರಿಂದ ಆಯಾ ಹೆಸರಿನ ಸ್ಥಾವರಲಿಂಗಗಳು ಉದಾ: ಗುಹೇಶ್ವರ, ಕಲಿದೇವರದೇವ, ಅಖಂಡೇಶ್ವರ, ಸಚ್ಚಿದಾನಂದ ಇಲ್ಲದೆ ಇರುವುದರಿಂದ ಅಭ್ಯಾಸಿಗರಲ್ಲಿ ಗೊಂದಲ ಉಂಟಾಗದು. ''ಕೂಡಲ ಚನ್ನಸಂಗಮದೇವ'' ಎಂಬುದು ಸಹ- ಆ ಹೆಸರಿನ ಯಾವುದೇ ಸ್ಥಾವರಲಿಂಗ ಇಲ್ಲದಿರುವುದರಿಂದ-ಅಷ್ಟೊಂದು ತಾತ್ವಿಕ ಗೊಂದಲಕ್ಕೆ ಕಾರಣವಾಗದು. ಮುದನೂರಿನಲ್ಲಿ ರಾಮನಾಥ, ಸೌರಾಷ್ಟ್ರದಲ್ಲಿ ಸೋಮೇಶ್ವರ, ಕೂಡಲಸಂಗಮದಲ್ಲಿ-ಸಂಗಮೇಶ್ವರ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಮುಂತಾದ ಸ್ಥಾವರಲಿಂಗಗಳು ಇರುವುದರಿಂದ ಈ ಪದಗಳು ನಿರಾಕಾರ ದೇವರ ಕಲ್ಪನೆಯನ್ನು ಕೊಡುವಲ್ಲಿ ಆತಂಕವಾಗಿ ನಿಲ್ಲುತ್ತವೆ. ಡಾ|| ಎ.ಕೆ.ರಾಮಾನುಜಮ್ ಎನ್ನುವವರು Speaking of Shiva ಎಂಬ ಪುಸ್ತಕದಲ್ಲಿ ವಚನಾಂಕಿತ ಸರಿಯಾದ ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿ Lord-the Supreme ಎಂಬುದನ್ನು ಅರಿಯದೆ Lord of two meeting rivers ಎಂದು ಭಾಷಾಂತರಿಸಿ, ಧರ್ಮಪಿತ ಬಸವಣ್ಣನವರ ದೇವರ ಕಲ್ಪನೆಯನ್ನು ಸಂಕುಚಿತಗೊಳಿಸಿಬಿಟ್ಟಿದ್ದಾರೆ.

'ಲಿಂಗದೇವ' ಎಂಬುದು ತಾತ್ವಿಕ ಭಾಷೆ ಎಂದು ನಾನು ಬರೆದುದನ್ನು ನೀವು ವಿರೋಧಿಸಿದ್ದೀರಿ. ಬೂದುಗುಂಬಳದ ಉದಾಹರಣೆಯನ್ನು ತಪ್ಪೆಂದಿದ್ದೀರಿ. ಜಗತ್ತಿನ ವಿಜ್ಞಾನಿಗಳು ಒಂದು ಕಡೆ ಸೇರಿರುತ್ತಾರೆ ಎಂದುಕೊಳ್ಳೋಣ. ಆಗ ಒಬ್ಬನು ಅದನ್ನು ಸಂಡಿಗೆ ಕಾಯಿ, ಇನ್ನೊಬ್ಬನು ಬಲಿ ಕೊಡುವ ಕಾಯಿ ಎಂದರೆ ಅರ್ಥವಾಗುವುದೆ ? ವೈಜ್ಞಾನಿಕ ಭಾಷೆಯನ್ನು ಆಡಿದಾಗ ಎಲ್ಲರೂ ಸೇರಿ ಚರ್ಚಿಸಬಲ್ಲರು ತಾನೆ ? ಜನ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ ಎಂಬುದು ಸಕಾರಣವಲ್ಲ. ಅಲ್ಲಹ ಎಂದರೆ ಇಸ್ಲಾಂ ಧರ್ಮದಲ್ಲಿ ದೇವರ ಹೆಸರು ಎಂಬುದು ಪಂಡಿತರಿಂದ ಪಾಮರರವರೆಗೆ ತಿಳಿದಿರುತ್ತದೆ. ವಿದ್ವಾಂಸರಿಂದ ಹಿಡಿದು ದನಕಾಯುವ ಒಬ್ಬ ಹುಡುಗನವರೆಗೆ ತಿಳಿದಿರುತ್ತದೆ. ಮಾತ್ರವಲ್ಲ ಅನ್ಯ ಧರ್ಮೀಯರಾದ ನಿಮಗೂ ತಿಳಿದಿರುತ್ತದೆ. ತತ್ತ್ವಜ್ಞಾನವನ್ನು ಜನರ ಮಟ್ಟಕ್ಕೆ ಇಳಿಸಬಾರದು. ತತ್ತ್ವಜ್ಞಾನದ ಮಟ್ಟಕ್ಕೆ ಜನರನ್ನು ಏರಿಸಬೇಕು. ಎತ್ತರದ ಜಗಿತದಲ್ಲಿ ಒಂದು ಅಡ್ಡಗೋಲು ಇರುತ್ತದೆ. ಅದನ್ನು ಜಗಿಯಲು ತರಬೇತಿ ಕೊಡಬೇಕು. ಪಾಪ, ಈತನಿಗೆ ಜಗಿಯಲು ಆಗಲ್ಲ ಎಂದು ಕೋಲನ್ನು ಇಳಿಸುವರಾ ? ಹಾಗೆಯೇ ಲಿಂಗದೇವನ ಏಕತ್ವ, ಮಹತ್ವ ಅರಿತು ಆ ವಚನಾಂಕಿತದ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ★

Digitalized by e-Sahithya Documentation Forum
Sponsored by Sarayu Foundation Trust

ವೀರಶೈವ-ಲಿಂಗಾಯತ ಗೊಂದಲ -ಡಾ|| ಎಂ. ಚಿದಾನಂದಮೂರ್ತಿ

(ದಿ.22-9-2000ದಂದು ಬಿಡುಗಡೆ ಮಾಡಿದ ಪತ್ರಿಕಾ ಟಿಪ್ಪಣಿ)

2001ರ ಜನಗಣತಿಯಲ್ಲಿ ವೀರಶೈವರು ತಮ್ಮದು ಹಿಂದೂ ಧರ್ಮವಲ್ಲವಾದ್ದರಿಂದ ''ಧರ್ಮ'' ಚೌಕದ ಮುಂದೆ ತಮ್ಮ ಧರ್ಮವನ್ನು ''ವೀರಶೈವ/ಲಿಂಗಾಯತ'' ಎಂದು ''ವೀರಶೈವ'' ಎಂದು, ಬರೀ ''ಲಿಂಗಾಯತ'' ಎಂದು ಬರೆಯಿಸಬೇಕೆಂದು ಭಿನ್ನಭಿನ್ನ ಸಂಸ್ಥೆಗಳಿಗೆ ಸೇರಿದ ಹಲವು ಗಣ್ಯರು ಮೂರು ಬಗೆಯ ಹೇಳಿಕೆಗಳನ್ನು ಕೊಟ್ಟು, ಪ್ರಚಾರ ನಡೆಯಿಸಿ ವೀರಶೈವರ ಮನಸ್ಸುಗಳಲ್ಲಿ ಅಪಾರ ಗೊಂದಲ ಹುಟ್ಟಿಸಿದ್ದಾರೆ.

ಅನೇಕ ವೀರಶೈವರ ಮನಸ್ಸಿನಲ್ಲಿ ತಾವು ಹಿಂದೂಗಳೇ ಹೌದು ಎಂಬುದು ಸರಿಯಾಗಿಯೇ ಬೇರೂರಿದೆ. ಆದರೆ ಹೇಳಿಕೆಗಳನ್ನು ನೀಡಿರುವವರು ಪ್ರಭಾವಶಾಲಿಗಳು !

ಈ ಗೊಂದಲವು ನಗರಗಳಿಂದ ಹಳ್ಳಿಯವರೆಗೂ ಹಬ್ಬಿರುವುದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ನಾನು ಈಚೆಗೆ ಬೆಂಗಳೂರಿನ ಕೇಂದ್ರ ಸರಕಾರದ ಕಚೇರಿಗೆ ಹೋಗಿ ಅಲ್ಲಿನ ಉನ್ನತ ಅಧಿಕಾರಿಗಳಿಂದ ನೇರವಾಗಿ ಸಂಗ್ರಹಿಸಿದ ಕೆಲವು ಮುಖ್ಯ ಅಂಶಗಳನ್ನು, ಗಟ್ಟಿ ವಾಸ್ತವ ಸಂಗತಿಗಳನ್ನು ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ.

ವೀರಶೈವರು ಹಿಂದೂಗಳೇ-ಕಾನೂನು ಸ್ಪಷ್ಟ

ಹಿಂದೂ ವಿವಾಹ ಕಾನೂನು, ದತ್ತಕ ಕಾನೂನು ಇವೇ ಮೊದಲಾದ ಕಾನೂನುಗಳು ವೀರಶೈವರು ಹಿಂದೂ ಧರ್ಮದ ಶಾಖೆಗೆ ಸೇರಿದವರಾಗಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಆ ಕಾರಣ ದೆಹಲಿಯ ಕೇಂದ್ರ ಜನಗಣತಿ ಆಯುಕ್ತರಿಗೆ ವೀರಶೈವರಿಗೆ ಹಿಂದೂಗಳಿಂದ ತಾವು ಭಿನ್ನರೆಂದು ಜನಗಣತಿ ನಮೂನೆಯಲ್ಲಿ ದಾಖಲಿಸಲು ವಿ/ಎಲ್ (ವೀರಶೈವ/ಲಿಂಗಾಯತ) ಎಂಬ ಪ್ರತ್ಯೇಕ ಚಿಹ್ನೆ ನೀಡಲು ಯಾವುದೇ ಅಧಿಕಾರವಿಲ್ಲ. ಆ ಕಾನೂನುಗಳು ತಿದ್ದುಪಾಡಾಗ ಬೇಕಾದರೆ ಆ ಬಗ್ಗೆ ಕೇಂದ್ರ ಸರ್ಕಾರವು ಮಸೂದೆಯನ್ನು ಸಿದ್ಧಪಡಿಸಿ ಅದನ್ನು ಲೋಕಸಭೆ ಮುಂದೆ ಮಂಡಿಸಬೇಕು. ಅದು ಅಲ್ಲಿ ಅಂಗೀಕೃತವಾಗಿ ರಾಜ್ಯ ಸಭೆಯ ಒಪ್ಪಿಗೆಯೊಡನೆ ರಾಷ್ಟ್ರಪತಿಗಳ ಅಂಗೀಕಾರ ಮುದ್ರೆ ಪಡೆದರೆ ಮಾತ್ರ ಅಂತಹ ಮಾರ್ಪಾಟು ಸಾಧ್ಯ. ಇದು ನನಗೆ ತಿಳಿದಂತೆ ಸದ್ಯಕ್ಕೆ ಮಾತ್ರವಲ್ಲ, ಮುಂದೆಯೂ ಬಹುಶಃ ಅಸಾಧ್ಯ. ತಮ್ಮದು ಹಿಂದೂ ಧರ್ಮದಿಂದ ಭಿನ್ನವಾದ ಧರ್ಮ, ತಾವು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಸಾಧಿಸಿ ಏನಾದರೂ ಅನುಕೂಲಗಳನ್ನು ಪಡೆಯಬೇಕೆಂಬ ಕನಸು ಯಾರಿಗಾದರೂ ಇದ್ದರೆ ಅದನ್ನು ಬಿಡುವುದು ಕ್ಷೇಮಕರ.

ಜನಗಣತಿ ಎಣಿಕೆಯಿಲ್ಲ

ಒಂದು ವೇಳೆ ವೀರಶೈವರು ತಮ್ಮದು ವೀರಶೈವ/ಲಿಂಗಾಯತ ಅಥವಾ ಲಿಂಗಾಯತ ಎಂಬುದೇ ತಮ್ಮ ಧರ್ಮ ಎಂದು ಹೇಳಿದರೆ ಜನಗಣತಿದಾರರು ''ಧರ್ಮ'' (Religion) ಚೌಕದ ಮುಂದೆ ಹಾಗೇ ಬರೆದುಕೊಳ್ಳುತ್ತಾರೆ. ಮುಂದೆ ಆಯಾ ಧರ್ಮದವರ (ಉದಾಹರಣೆಗೆ ಹಿಂದೂ, ಬೌದ್ಧ, ಮುಸಲ್ಮಾನ್ ಇತ್ಯಾದಿ) ಸಂಖ್ಯೆಯನ್ನು ಒಟ್ಟುಗೂಡಿಸುವಾಗ ವೀರಶೈವರ ಸಂಖ್ಯೆಯನ್ನು ಹಿಂದೂಗಳ ಒಟ್ಟು ಸಂಖ್ಯೆಗೆ ಸೇರಿಸಿ ಲೆಕ್ಕ ಮಾಡುತ್ತಾರೆ. ಒಟ್ಟು ಹಿಂದೂ ಸಮುದಾಯದ ಸಂಖ್ಯೆಯ ಕೆಳಗೆ ''ವೀರಶೈವ'' ''ಲಿಂಗಾಯತ'' ಎಂದು ಹೇಳಿದವರ ಸಂಖ್ಯೆಯನ್ನು ನಮೂದಿಸುತ್ತಾರೆ. ಅದೇ ರೀತಿ ಪ್ರಾರ್ಥನಾ ಸಮಾಜ, ಬ್ರಹ್ಮ ಸಮಾಜ, ಬ್ರಹ್ಮಕುಮಾರ-ಬ್ರಹ್ಮಕುಮಾರಿಯರ ಸಂಖ್ಯೆಯನ್ನು ಹಿಂದೂ ಶೀರ್ಷಿಕೆಯ ಕೆಳಗೆ ನಮೂದಿಸುತಾರೆ. ಹಾಗೆ ನಮೂದಿಸುವಾಗ ವೀರಶೈವ/ಲಿಂಗಾಯತರ

ಸಂಖ್ಯೆಯನ್ನು ನೀಡುವರೇ ಹೊರತು ''ಲಿಂಗಾಯತ''ರ ಸಂಖ್ಯೆಯನ್ನು ಪ್ರತ್ಯೇಕವಾಗಿ ಕೊಡುವುದಿಲ್ಲ (ಸೆನ್ಸಸ್ ಪಟ್ಟಿ ನೋಡಿ)

ವೀರಶೈವರು ಹಿಂದೂಗಳೇ:

ವೀರಶೈವ, ಲಿಂಗಾಯತ ಎರಡೂ ಸಮಾನಾರ್ಥಕ ಪದಗಳು ಮತ್ತು ಯಾವುದೇ ದೃಷ್ಟಿಯಿಂದ ನೋಡಿದರೂ ಅವರು ಹಿಂದೂಗಳೇ ಆಗಿದ್ದಾರೆ ಎಂಬುದನ್ನು ನಾನು ಈಗಾಗಲೇ ಹಲವು ಬಾರಿ, ಹಲವು ರೀತಿಗಳಲ್ಲಿ ಸ್ಪಷ್ಟಪಡಿಸಿದ್ದೇನೆ. ಶರಣ ಧರ್ಮವನ್ನು ಚೆನ್ನಾಗಿ ತಿಳಿದಿದ್ದ ಹರ್ಡೇಕರ್ ಮಂಜಪ್ಪ, ಶಿ.ಶಿ.ಬಸವನಾಳ, ಫ.ಗು.ಹಳಕಟ್ಟಿ, ಎಲ್.ಬಸವರಾಜು, ಆರ್.ಸಿ.ಹಿರೇಮಠ , ಬಿ.ಶಿವಮೂರ್ತಿಶಾಸ್ತ್ರಿ ಇವರೇ ಮೊದಲಾದ ಗಣ್ಯರು, ಸಿದ್ಧಗಂಗೆಯ ಪೂಜ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳು ಪಂಚಪೀಠಾಧಿತಿಗಳ ಪರವಾಗಿ ಬಾಳೆಹೊನ್ನೂರಿನ ಪೂಜ್ಯ ಶ್ರೀ ರಂಭಾಪುರಿ ಜಗದ್ಗುರುಗಳು (ಪ್ರತಿನೋಡಿ)ಇವರೇ ಮೊದಲಾದವರು ಡಾ.ಎಸ್.ರಾಧಾಕೃಷ್ಣನ್‌ರಂತಹ ಶ್ರೇಷ್ಠ ತತ್ವಜ್ಞರು ಅದೇ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ''ಹುಸಿಯ ನುಡಿಯಲು ಬೇಡ'' ಎಂದ ಬಸವಣ್ಣನವರ ಅನುಯಾಯಿಗಳಾದ ವೀರಶೈವರು ಸತ್ಯವನ್ನು ಒಪ್ಪಿಕೊಳ್ಳುವುದೇ ಸರಿಯಾದ ಮಾರ್ಗ. ''ವೀರಶೈವರಿಗೆ ಅನುಕೂಲವಾಗುವುದಾದರೆ ಅವರು ಹಿಂದೂಗಳಲ್ಲವೆಂದು ಕರೆದುಕೊಳ್ಳುವುದರಲ್ಲಿ ತಪ್ಪೇನು !'' ಎಂಬಂತಹ ಮಾತುಗಳು ಆತ್ಮವಂಚನೆಯವು.

ಅಪಾಯ

ಜನಗಣತಿಯಲ್ಲಿ ಕೆಲವರು ತಾವು ಹಿಂದೂಗಳೆಂದು ಇನ್ನು ಕೆಲವರು ವೀರಶೈವ/ಲಿಂಗಾಯತ ಎಂದು ಬರೆಯಿಸುವುದರಿಂದಾಗಿ ಭಾರತದಲ್ಲಿ ಆ ಜನಾಂಗದ ನಿರ್ದಿಷ್ಟ ಜನಸಂಖ್ಯೆ ತಿಳಿಯುವುದು ಅಸಾಧ್ಯ. ಹಿಂದಿನ ಜನಗಣತಿಗಿಂತ ಕಡಿಮೆ ಸಂಖ್ಯೆ ಈ ಬಾರಿ ದೊರಕುವ ಸಾಧ್ಯತೆ ಇದೆ. ಅದು ಮುಖ್ಯವಲ್ಲ. ವೀರಶೈವರು ತಾವು ವಾಸ್ತವವಾಗಿ ಏನೋ ಅದನ್ನು, ಎಂದರೆ ತಾವು ಹಿಂದುಗಳೆಂದು ದಾಖಲಿಸುವುದೊಂದೇ ಸರಿಯಾದ ಮಾರ್ಗ, ಸತ್ಯದ ಮಾರ್ಗ ಎಂದೂ ತಾತ್ಕಾಲಿಕ ಲಾಭವನ್ನು ತಂದುಕೊಡದಿದ್ದರೂ ಅಂತಿಮವಾಗಿ ಅದೇ ಶ್ರೇಯಸ್ಕರವಾದುದೆಂಬುದನ್ನು ವಿಶ್ವದ ಇತಿಹಾಸ ತೋರಿಸಿಕೊಟ್ಟಿದೆ. ನನ್ನನ್ನು ಯಾರೇ ತಪ್ಪು ತಿಳಿದರೂ ಸರಿಯೆ, ವೀರಶೈವರು ನೂರಕ್ಕೆ ನೂರರಷ್ಟು ಹಿಂದೂಗಳೇ ; ಆದುದರಿಂದ ಅವರು ಜನಗಣತಿಯಲ್ಲಿ ತಮ್ಮದು ''ಹಿಂದೂ ಧರ್ಮ''ವೆಂದೇ ಬರೆಯಿಸಬೇಕೆಂದು ಮನಃಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ತಾವು ಹಿಂದೂಗಳಲ್ಲವೆಂದು ಭಾವಿಸುವವರು ತಮಗೆ ಅನ್ಯಾಯ ಮಾಡಿಕೊಳ್ಳುತ್ತಿರುವುದು ಮಾತ್ರವಲ್ಲ, ಇಡೀ ವೀರಶೈವ ಸಮಾಜಕ್ಕೆ ಇಂದಿನ ಭಾರತೀಯ ಸಂಸ್ಕೃತಿಗೆ ಅನೂಹ್ಯ ಧಕ್ಕೆಯುಂಟು ಮಾಡುತ್ತಿದ್ದಾರೆ.

ಈ ವಿಷಯದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯು ಸಮಾಜವನ್ನು ದಿಕ್ಕು ತಪ್ಪಿಸುತ್ತಿದೆಯೆಂದು ಹೇಳುವಲ್ಲಿ ನನಗೆ ಯಾವುದೇ ಅನುಮಾನಗಳು ಇಲ್ಲ. ಸಂಕೋಚವೂ ಇಲ್ಲ. ಏಕೆಂದರೆ ನಾನು ಹೇಳುತ್ತಿರುವುದು ಸತ್ಯವೆಂಬ ಅಚಲ ವಿಶ್ವಾಸವಿದೆ. ★

ಸಂಪಾದಕರಲ್ಲಿ ಮನವಿ : ಮೇಲ್ಕಂಡ ಸಂಗತಿಯು ಎಲ್ಲ ವೀರಶೈವರ ಗಮನಕ್ಕೆ ಹೋಗುವುದು ಅಗತ್ಯ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಅಲ್ಲದೆ ಕರ್ನಾಟಕದ ನೆರೆಹೊರೆ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳಲ್ಲಿಯೂ ವೀರಶೈವರು ಇರುವ ಕಾರಣ, ಮೇಲ್ಕಂಡ ಸುದ್ದಿಯನ್ನು ತಮ್ಮ ಪತ್ರಿಕೆಯ ಕರ್ನಾಟಕದ ಎಲ್ಲಾ ಆವೃತ್ತಿಗಳಲ್ಲಿ ಬರುವಂತೆ ಮಾಡಿದರೆ ನಾನು ಕೃತಜ್ಞನಾಗುಳಿವೆ.

ಚಿ.ಮೂ ಅವರ ಪತ್ರಿಕಾ ಟಿಪ್ಪಣಿಗೆ ಪ್ರತಿಕ್ರಿಯೆ -ಮಾತಾಜಿ

ದಿ. 22-9-2000ದಂದು ಡಾ|| ಚಿ.ಮೂ ಬಿಡುಗಡೆ ಮಾಡಿದ ಪತ್ರಿಕಾ ಟಿಪ್ಪಣಿಯನ್ನು ಯಥಾವತ್ತಾಗಿ ಮುದ್ರಿಸಲಾಗಿದೆ. ಈ ಹೇಳಿಕೆಗಾಗಿ ಮಾತ್ರ ಚಿ.ಮೂ. ಅವರನ್ನು ನಾವು ಅಭಿನಂದಿಸುತ್ತೇವೆ. ಕಾರಣ 2

1. ಅವರು ವಿವಿಧ ಆಧಾರ ಕೊಟ್ಟು ವೀರಶೈವರು ಹಿಂದುಗಳೇ ಎಂದು ಪ್ರತಿಪಾದಿಸಿರುವುದು. ಇದನ್ನು ನಾವು ಅನುಮೋದಿಸುತ್ತೇವೆ. ವೀರಶೈವವು ಶಿವಾರಾಧಕ ಪಂಥ ; ಅದು ಹಿಂದು ಧರ್ಮದ ಅವಿಭಾಜ್ಯ ಅಂಗ ಎಂಬಲ್ಲಿ ನಮ್ಮ ಸಹಮತವಿದೆ.

2. ದಿ.22ರ ಪತ್ರಿಕಾ ಹೇಳಿಕೆಯಲ್ಲಿ ಲಿಂಗಾಯತ ಪದ ಬಳಕೆಯನ್ನು ಕಮ್ಮಿ ಮಾಡಿರುವುದು ಗಮನಾರ್ಹವಾಗಿದೆ. ಅಂತೂ ವೀರಶೈವ ಲಿಂಗಾಯತಗಳ ಸಮೀಕರಣ ಕೈಬಿಟ್ಟುದು ಸಮಾಧಾನಕರ ಸಂಗತಿ ಒಮ್ಮೆಗೇ ಕೈ ಬಿಡಬಾರದು ಎಂಬ ಸಂಕಟದಿಂದ ಒಮ್ಮೆ ಬಳಸಿದ್ದರೂ ಬಹಳ ಒತ್ತುಕೊಟ್ಟಿಲ್ಲ.

ಚಿ.ಮೂ. ವೀರಶೈವರು ಹಿಂದೂಗಳೇ ಎನ್ನಲು. ದಿ.18-5-1955ರ ಒಂದು ಸರ್ಕಾರಿ ಸಂವಿಧಾನ ತಿದ್ದುಪಡಿಯನ್ನು (The Hindu Marriage Act, 1955 Act xxv of 1955) ಒದಗಿಸಿದ್ದಾರೆ. ಹಿಂದೂ ವಿವಾಹ ವಿಧಿ, ಹಿಂದು, ವೀರಶೈವ, ಲಿಂಗಾಯತ, ಬ್ರಹ್ಮ, ಪ್ರಾರ್ಥನಾ, ಆರ್ಯ ಸಮಾಜ ಮುಂತಾದ ಎಲ್ಲರಿಗೂ ಒಂದೇ ಎಂಬುದು ಈ ವಿಧೇಯಕದ ಸಾರಾಂಶ. ಇದರಲ್ಲಿ ಏನು ಹೊಸತನ್ನು ಚಿ.ಮೂ. ಹುಡುಕಿದರೂ ?! ಕೆಲವೊಂದು ಸಂಗತಿಗಳು ಭಾರತೀಯರೆಲ್ಲರಿಗೆ ಒಂದೇಯಾಗಿವೆ. ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳು ತಮ್ಮವೇ ಆದ ಧಾರ್ಮಿಕ ಕಾನೂನು, ವಿವಾಹ ವಿಧಿ, ವಿಚ್ಛೇದನ ವಿಧಿ ಹೊಂದಿವೆ. ಉಳಿದಂತೆ ಭಾರತೀಯ ಧರ್ಮ, ಮತ, ಪಂಥಗಳು ಹೆಚ್ಚು ಕಮ್ಮಿ ಒಂದೇ ವಿಧಿ-ವಿಧಾನ ಹೊಂದಿವೆ. ಆದ್ದರಿಂದ ಹಿಂದೂ ವಿವಾಹ ಕಾಯ್ದೆ ಲಿಂಗಾಯತರು ಅಹಿಂದು ಎಂದುಕೊಳ್ಳಲು ಯಾವ ರೀತಿಯಲ್ಲೂ ಅಡ್ಡಿಯಾಗದು.

Hindu Law ಎಂಬ ಇನ್ನೊಂದು ಪುಸ್ತಕದಲ್ಲಿ ಎಸ್.ಆರ್. ರಾಘವಾಚಾರಿಯವರು ಹೀಗೆ ಬರೆಯುತ್ತಾರೆ. ಪುಟ 32

Hindu Law is now not a law of all Hindus alone : A conspectus of Hindu Law as administered by the courts over the years show that it is not coincidental with religious beliefs. Apropos this aspect the Andhra pradesh High Court observes, "Hindu Law governed not only Hindus but also Sikhs, Jains, and Buddhists. It governed Lingayats a body of dissenters who deny the validity of caste distinctions (page 33)

Thus it is clear that the body of personal Law known as Hindu Law was neither the personal Law of all Hindus nor was it the personal law exclusively for Hindus". (Sambi Reddy V/s Jayamma 1972) An W.R. 294, 299-300 (1972) MLJ Cri. 284, AIR 197[illegible] A.P. 156 (F.B)

ಮೊದಲ ಉಕ್ತಿಯಲ್ಲಿ ಸಿಖ್,ಜೈನ ಮತ್ತು ಬೌದ್ಧರನ್ನು ಉಲ್ಲೇಖಿಸುವಾಗ ಲಿಂಗಾಯತರನ್ನು ಉಲ್ಲೇಖಿಸಲಾಗಿದೆ. ಜಾತಿ ವ್ಯವಸ್ಥೆಯನ್ನು ಒಪ್ಪದಿರುವ ಜನ ಲಿಂಗಾಯತರು ಎಂದು ಉಲ್ಲೇಖಿಸಿರುವುದು ಬಹಳ ಗಮನಾರ್ಹ ಎರಡನೆ ಉಕ್ತಿಯಲ್ಲಿ ಹಿಂದು ವೈಯಕ್ತಿಕ ಕಾನೂನು ಎಲ್ಲ ಹಿಂದುಗಳಿಗೂ ಅನ್ವಯಿಸುವುದಿಲ್ಲ. ಇದೇ ಹಿಂದುಗಳಿಗೆ ಕಡ್ಡಾಯವಾಗಿ ಅನ್ವಯವಾಗುವುದೂ ಅಲ್ಲ ಎನ್ನಲಾಗಿದೆ. ಯಾವುದೇ ಸೈದ್ಧಾಂತಿಕ ಸಂಘರ್ಷ ಇಲ್ಲದ ವಿಷಯಗಳನ್ನು ಹಿಂದು ಕಾನೂನಿನಿಂದಲೇ

Digitalized by e-Sahithya Documentation Forum
Sponsored by Sarayu Foundation Trust

ಅಹಿಂದುಗಳಾದ ಲಿಂಗಾಯತರು ಒಪ್ಪಿದ್ದರೆ ಅದೇನು ಅಸಹಜವಲ್ಲ.

ಇಂದು ಹಿಂದು ಧರ್ಮ ಎನ್ನುವುದು ವೈದಿಕ ಧರ್ಮದ ಬೃಹದ್ ರೂಪವೇ ಆಗಿರುವುದರಿಂದ ಸಂಸ್ಕೃತಿಯೇ ಧರ್ಮವಲ್ಲ. ಸೈದ್ಧಾಂತಿಕವಾಗಿ, ಧಾರ್ಮಿಕವಾಗಿ, ನಂಬಿಗೆಗಳ ದೃಷ್ಟಿಯಿಂದ ಲಿಂಗಾಯತರು ಅಹಿಂದುಗಳೆ.

ಸಾಂಸ್ಕೃತಿಕವಾಗಿ ಕೆಲವೊಂದು ಲಕ್ಷಣಗಳು ಹಿಂದು ಧರ್ಮದೊಡನೆ ಸಾಮ್ಯತೆ ತೋರಿಸಿದರೂ ಅವು ಲಿಂಗಾಯತ ಧರ್ಮದ ಪ್ರತ್ಯೇಕತೆ, ಸ್ವಾತಂತ್ರ್ಯವನ್ನು ಕಳೆಯಲು ಆಧಾರವಾಗುವುದಿಲ್ಲ. ಉದಾಹರಣೆಗೆ ಹೆಸರುಗಳನ್ನಿಟ್ಟುಕೊಳ್ಳುವುದು, ಬಳೆ, ಕುಂಕುಮ, ಸೀರೆಯುಡುವುದು. ಕಾರ್ಗಿಲ್ ಯುದ್ಧ ಸಮಯದಲ್ಲಿ ಶ್ರೀ ಲಾಲ್‌ಕೃಷ್ಣ ಅದ್ವಾನಿಯವರ ಮಗಳು ಪ್ಯಾಂಟ್, ಷರ್ಟ್ ಹಾಕಿದ ಅಂದರೆ ಪಾಶ್ಚಿಮಾತ್ಯ ವೇಷಭೂಷಣ ಧರಿಸಿದ ಭಾವಚಿತ್ರ ಬಂದಿತ್ತು. ಆದರೆ ಸೋನಿಯಾ ಅವರು ಚುನಾವಣಾ ಪ್ರಚಾರದಲ್ಲಿ ಸೀರೆಯುಟ್ಟು, ತಲೆಯ ಮೇಲೆ ಸೆರಗು ಹೊದ್ದು ಅಪ್ಪಟ ಸಾಂಪ್ರದಾಯಿಕ ನಾರಿಯಂತೆ ಕಾಣುತ್ತಿದ್ದರು. ಬಂಗ್ಲಾ ದೇಶದ ಪ್ರಧಾನಿ ಖಲಿದಾ ಬೇಗಂ ಯಾವಾಗಲೂ ಸೀರೆಯುಟ್ಟು ತಲೆಯ ಮೇಲೆ ಮೈತುಂಬ ಸೆರಗು ಹೊದೆಯುತ್ತಾರೆ. ಹೀಗೆ ಅವರು ಸಾಂಸ್ಕೃತಿಕವಾಗಿ ಹಿಂದುವಿನಂತೆ ಕಂಡರೂ ಧಾರ್ಮಿಕವಾಗಿ ಹಿಂದುವಲ್ಲ.

ಚಿ.ಮೂ ಅವರು, ''ಜನಗಣತಿಯಲ್ಲಿ ಲಿಂಗಾಯತರು ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ದಾಖಲೆ ಮಾಡಿದರೂ, ಹಿಂದೂದ ಕೆಳಗೇ ಸೇರಿಸಲಾಗುವುದು. ಪ್ರತ್ಯೇಕವಾಗಿ ಆಗಬೇಕಾದರೆ ಲೋಕಸಭೆ, ರಾಜ್ಯಸಭೆಗಳಲ್ಲಿ ಅನುಮೋದನೆ ದೊರೆತು, ಲಿಂಗಾಯತವು ಸ್ವತಂತ್ರ ಧರ್ಮವೆಂದು ರಾಷ್ಟ್ರಪತಿಗಳಿಂದ ಅಂಗೀಕಾರವಾಗಬೇಕು ಇದು ಅಸಾಧ್ಯ'' ಎಂಬರ್ಥದಲ್ಲಿ ಮಾತನಾಡಿದ್ದಾರೆ.

ಈಗ ಸರಿಯಾದ ರೀತಿಯಲ್ಲಿ, ಖಚಿತವಾಗಿ ಲಿಂಗಾಯತ ಎಂದು ಬರೆಸುವುದರಿಂದ ಲಿಂಗಾಯತ ಎಂಬ ಸಮುದಾಯವನ್ನು ಸದ್ಯದಲ್ಲಿ ಹಿಂದೂದ ವಲಯದಲ್ಲೇ ಪ್ರತ್ಯೇಕವಾಗಿ ಗಣತಿ ಮಾಡುವುದರಿಂದ, ಒಂದು ನಿಖರವಾದ ಸಂಖ್ಯೆಯಾದರೂ ಲಭ್ಯವಾಗುತ್ತದೆ. ಇದು ಮುಂದಿನ ಹೋರಾಟಕ್ಕೆ ಸಹಾಯಕವಾಗುತ್ತದೆ.

ಚಿ.ಮೂ. ವೀರಶೈವ ಮಹಾಸಭೆ ಮುಂತಾದವರ ಗೊಂದಲದಿಂದ ಕರ್ನಾಟಕದಲ್ಲಿ ಅನೇಕ ಲಿಂಗಾಯತರು ಸಹ 'ವೀರಶೈವ' ಎಂದು ಬರೆಸಿದರು ಎಂದುಕೊಳ್ಳೋಣ. ಮುಂದೊಮ್ಮೆ ಕೇಂದ್ರ ಸರ್ಕಾರ ಸಮೀಕ್ಷೆ ನಡೆಸಿದರೆ ಆಗ ಕೇರಳ, ತಮಿಳುನಾಡು, ಆಂಧ್ರಗಳಲ್ಲಿರುವ, ನಮ್ಮಿಂದ ಪೂರ್ತಿ ಭಿನ್ನವೇ ಆದ ವೀರಶೈವರು ತಾವು ಅಪ್ಪಟ ಹಿಂದುಗಳೆಂದು, ಹಿಂದು ಕಕ್ಷೆಯ ಹೊರಗೆ ಹೋಗಲು ಇಷ್ಟಪಡುವುದಿಲ್ಲವೆಂದು ಹೇಳಿದರೆ, ಆಗ ಲಿಂಗಾಯತ ಸಮಾಜಕ್ಕೂ ತೊಂದರೆಯಾಗಿ, ವೀರಶೈವ ಮಹಾಸಭೆ ಪಶ್ಚಾತ್ತಾಪದಿಂದ ಕೈಕೈ ಹಿಚುಕಿಕೊಳ್ಳುವಂತಾಗುತ್ತದೆ.

ಲಿಂಗಾಯತವು ಸ್ವತಂತ್ರ ಧರ್ಮದ ಎಲ್ಲ ಲಕ್ಷಣಗಳನ್ನು ಹೊಂದಿರುವುದರಿಂದ ಲೋಕಸಭೆ, ರಾಜ್ಯಸಭೆ, ರಾಷ್ಟ್ರಪತಿಗಳ ಅಂಗೀಕಾರ ಏಕೆ ಹೊಂದಲು ಸಾಧ್ಯವಿಲ್ಲ ? ಅದು ಅಸಾಧ್ಯ ಎಂದು ಏಕೆ ಕೈಚೆಲ್ಲಿ ಕುಳಿತುಕೊಳ್ಳಬೇಕು ? ಚಿದಾನಂದ ಮೂರ್ತಿಯವರ ವೀರಶೈವಕ್ಕೆ ಸಾಧ್ಯವಿಲ್ಲದಿರಬಹುದು ಆದರೆ ನಮ್ಮ ಲಿಂಗಾಯತ ಧರ್ಮಕ್ಕೆ ಆ ಮಾನ್ಯತೆ ಖಂಡಿತಾ ಸಾಧ್ಯವಿದೆ.

ವಚನ ವಾಙ್ಮಯವು ಅದೇ ಆಗ ಲಿಂ॥ ಫ.ಗು.ಹಳಕಟ್ಟಿಯವರ ಪರಿಶ್ರಮದಿಂದ ಹೊರಬರುತ್ತಿದ್ದುದರಿಂದ, ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯ ವು ಕೊಡುವ ಒಂದು ಧರ್ಮದ ಸಮಗ್ರತೆ ಕುರಿತು ಹರ್ಡೇಕರ್ ಮಂಜಪ್ಪ, ಶಿ.ಶಿ.ಬಸವನಾಳ ಮುಂತಾದವರಿಗೆ ಸ್ಪಷ್ಟಕಲ್ಪನೆ ಮೂಡಲು ಸಾಕಷ್ಟು ಪುರಾವೆ ಆಗ ಸಿಕ್ಕಿರಲಿಲ್ಲ. ಬೌದ್ಧ, ಜೈನ, ಸಿಖ್ ಮುಂತಾದ ಭಾರತೀಯ ಕ್ರೈಸ್ತ-ಮುಸ್ಲಿಂ ಮುಂತಾದ ಅಭಾರತೀಯ ಧರ್ಮಗಳನ್ನು ಅಧ್ಯಯನ ಮಾಡಿದರೆ ಮಾತ್ರ

ಲಿಂಗಾಯತವು ಒಂದು ಸ್ವತಂತ್ರ ಧರ್ಮ ಎಂಬ ಕಲ್ಪನೆ ಮೂಡಲು ಸಾಧ್ಯ. ಆದ್ದರಿಂದ ಚಿ.ಮೂ ಅವರ ವಾದ ಬಹಳ ದುರ್ಬಲವೂ, ಪೂರ್ವ ನಿರ್ಧಾರಿತವೂ, ಏಕಮುಖವೂ ಆಗಿದೆ. ಬಸವಾದಿ ಪ್ರಮಥರ ಸಾಧನೆ-ಸಂದೇಶ-ವ್ಯಕ್ತಿತ್ವಗಳನ್ನು ಗುರುತಿಸಿ, ಗೌರವಿಸಬಾರದೆಂಬ ಸಂಕುಚಿತ ಮತಿಯವರಾದ ಚಿ.ಮೂ. ಅವರ ಅರ್ಥರಹಿತ ವಾದದ ಗೊಂದಲಕ್ಕೆ ಸಿಲುಕದೆ 1. ವರ್ಣ, ಜಾತಿ ವ್ಯವಸ್ಥೆ 2. ಅಸ್ಪೃಶ್ಯತೆ 3. ಬಹುದೇವತೋಪಾಸನೆ 4. ಯಜ್ಞ-ಯಾಗಾದಿ ಕರ್ಮಕಾಂಡ 5. ನವಗ್ರಹ, ಜ್ಯೋತಿಷ್ಯ ಮುಂತಾದ ಮೂಢನಂಬಿಕೆಗಳಿಂದ ತುಂಬಿರುವ ಹಿಂದು ಧರ್ಮದ ಕೆಸರಿನ ಮಡುವಿನಿಂದ ಹೊರಬಿದ್ದು ಲಿಂಗಾಯತರು ಸ್ವತಂತ್ರ ಧರ್ಮಾನುಯಾಯಿಗಳಾಗಿ 1. ಸಮಾನತೆ 2. ಜಾತ್ಯತೀತತೆ 3. ಏಕದೇವೋಪಾಸನೆ 4. ಅರ್ಥಪೂರ್ಣ ಇಷ್ಟಲಿಂಗ ಉಪಾಸನೆ 5. ವೈಚಾರಿಕತೆಗಳಿಂದ ಕೂಡಿದ ವಚನ ಸಾಹಿತ್ಯದ ಪಾವನ ಜಲದಲ್ಲಿ ಮಿಂದು ಧನ್ಯರಾಗುವ ಕಾಲ ಸನ್ನಿಹಿತವಾಗಿದೆ. ಈ ಹಿನ್ನೆಲೆಯಲ್ಲಿ 2001ರ ಜನಗಣತಿಯ ಮತ (Religion) ಕಾಲಂನಲ್ಲಿ ಹಿಂದು ಲಿಂಗಾಯತ, ವೀರಶೈವ ಲಿಂಗಾಯತ, ವೀರಶೈವ ಎಂದು ಬರೆಸದೆ ಕೇವಲ ಲಿಂಗಾಯತ ಎಂದು ಮಾತ್ರ ಬರೆಸಲು ಜನತೆಯಲ್ಲಿ ನಮ್ಮ ಕಳಕಳಿಯ ಮನವಿ.

ಡಾ॥ ಚಿ.ಮೂ ಕೊಟ್ಟಿರುವ ವಿವರಗಳ ಆಧಾರದ ಮೇಲಾದರೂ ವೀರಶೈವ ಮಹಾಸಭೆಯವರು ವೀರಶೈವವು ಸ್ವತಂತ್ರ ಧರ್ಮ, ಅಹಿಂದು ಧರ್ಮ ಎಂಬ ಅತಾರ್ಕಿಕವಾದವನ್ನು ಕೈಬಿಡಬೇಕೆಂದು ಮಹಾಸಭೆಯವರಿಗೆ ನಮ್ಮ ಕಿವಿ ಮಾತು. ★

ವೀರಶೈವ ಮಹಾಸಭೆಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ

ವೀರಶೈವ -ಲಿಂಗಾಯತ ಪದಗಳನ್ನು ಸಮಾನಾರ್ಥದಲ್ಲಿ ಬಳಸಿ ವೀರಶೈವ ಪಂಥವನ್ನು ಲಿಂಗಾಯತ ಧರ್ಮಕ್ಕೆ ಸಮವೆಂದು ಪ್ರತಿಪಾದಿಸಿ ಲಿಂಗಾಯತ ಧರ್ಮದ ಘನತೆ ಮತ್ತು ಶುಚಿತ್ವವನ್ನು ಕೆಡಿಸಬಾರದೆಂದು ಮನವಿ ಮಾಡಿದ್ದಾಯಿತು ; ಸಾರ್ವಜನಿಕ ಚರ್ಚೆಗೆ ಸಿದ್ಧವಿರುವುದಾಗಿ ಹೇಳಿದ್ದಾಯಿತು. ಮೊದಲು ವೀರಶೈವ/ಲಿಂಗಾಯತ ಎಂದು ಬರೆಸಿ ಎಂದು ಹೇಳುತ್ತಿದ್ದರು ಈಗ ವೀರಶೈವ ಅಥವಾ ಲಿಂಗಾಯತ ಎಂದು ಬಳಸಿ ಎಂದು ಕರಪತ್ರ ಮುದ್ರಿಸಿ, ಪ್ರಚಾರ ಮಾಡುತ್ತಿದ್ದಾರೆ. ಅವರು ಲಿಂಗಾಯತ ಪದವನ್ನು ಬಳಸುವುದರಿಂದ ನಮ್ಮ ಧರ್ಮ-ಸಮಾಜಗಳಿಗೆ ಹಾನಿಯಾಗುವ ಕಾರಣ ಅಖಿಲ ಭಾರತ ವೀರಶೈವ ಮಹಾಸಭೆಯನ್ನು, ಲಿಂಗಾಯತ ಪದವನ್ನು ವೀರಶೈವದೊಡನೆ ಬಳಸದಂತೆ ನಿರ್ಬಂಧಿಸಬೇಕೆಂದು, ಲಿಂಗಾಯತ ಧರ್ಮವು, ಸ್ವತಂತ್ರ ಧರ್ಮವೆಂದು ಘೋಷಿಸಿ, 2001ರ ಜನಗಣತಿಯಲ್ಲಿ ಲಿಂಗಾಯತರ ಜನಸಂಖ್ಯೆಯನ್ನು ಹಿಂದುಗಳ ಕೂಡ, ವೀರಶೈವರ ಕೂಡ ಬೆರೆಸದೆ ಪ್ರತ್ಯೇಕವಾಗಿ ಜನಗಣತಿ ತೆಗೆಯಲು ಜನಗಣತಿ ಆಯುಕ್ತರಿಗೆ ನಿರ್ದೇಶಿಸಬೇಕೆಂದು ಲಿಂಗಾಯತ ಧರ್ಮ ಮಹಾಸಭಾದ ಪರವಾಗಿ ಅಧ್ಯಕ್ಷರಾದ ಶರಣ. ಎಸ್.ಪುಟ್ಟರುದ್ರಪ್ಪನವರು ನ್ಯಾಯಾಲಯದಲ್ಲಿ ದಿ.22-9-2000ದಂದು ದಾವೆ ಹೂಡಿದ್ದಾರೆ. -ವರದಿ. ರಮೇಶ ಲಿಂಗಾಯತ

ನಾನೂ ಲಿಂಗಾಯತ

ಆವುದಾದರೇನು ನಿನ್ನ ಮೂಲಮತ
ದೀಕ್ಷೆಗೊಂಡು ಮಾಡಿಕೊಂಡರೆ ಲಿಂಗ-ಆಯತ
ಒಪ್ಪಿಕೊಂಡು ಬಸವಣ್ಣನವರ ಧರ್ಮ(ದಾತ)ಪಿತ
ಅಪ್ಪಿಕೊಂಡು ವಚನ ಸಾಹಿತ್ಯ ಧರ್ಮ ಸಂಹಿತ
ಹೇಳಿಕೊಳ್ಳು ಹೆಮ್ಮೆಯಿಂದ ನಾನೂ ಲಿಂಗಾಯತ.

-ಮಹಾಂತಪ್ಪ ನಂದೂರ, ಹುಬ್ಬಳ್ಳಿ

Digitalized by e-Sahithya Documentation Forum
Sponsored by Sarayu Foundation Trust

ಬೆಳಗಾವಿಯ ಪೂಜ್ಯ ಸಿದ್ಧರಾಮೇಶ್ವರ ಸ್ವಾಮಿಗಳಿಗೆ ಅಭಿನಂದನೆಗಳು

ಇದೇ ತಿಂಗಳ 10ರಂದು ಬೆಳಗಾವಿಯ ಪ್ರತಿಷ್ಠಿತ ಲಿಂಗಾಯತ ಶಿಕ್ಷಣ ಸಂಸ್ಥೆಯ ಸಭಾ ಭವನದಲ್ಲಿ ಕೂಡಿದ ವೀರಶೈವ ಸಮಾಜದಲ್ಲಿ ನಿವೃತ್ತ ವಿಭಾಗಾಧಿಕಾರಿ (ಐನಾರ) ಶ್ರೀ ಕಟ್ಟಿ ; ನಿವೃತ್ತ ವರಿಷ್ಠ ಪೋಲೀಸ್ ಅಧಿಕಾರಿ ಶ್ರೀ ಪಾವಟೆ ; ಶಿರಡಿ ಸಾಯಿಯ ಅಪರಾವತಾರ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ; ಸಭಾಭೂಷಣ ಚಂದ್ರಕಾಂತ ಬೆಲ್ಲದ ಇವರೆಲ್ಲರೂ ಆತ್ಮವಿಲ್ಲದ ಬಲದಿಂದ ವೀರಶೈವ ವಕಾಲತ್ತು ನಡೆಸಿ ಲಿಂಗಾಯತ ಜನಕ್ಕೆ ತಪ್ಪು ಮಾಹಿತಿ ನೀಡುತ್ತ ಮುಗ್ಧ ಲಿಂಗಾಯತರನ್ನು ದಿಶಾಭೂಲ್ ಮಾಡಿ ಪ್ರತಿನಿಧಿ ಶುಲ್ಕವೆಂದು ಹೇರಳವಾಗಿ ನಿಧಿ ಸಂಗ್ರಹಿಸುತ್ತ ಒಂದು ರೀತಿಯ ಟೋಳಿ ಕಟ್ಟಿಕೊಂಡು ತಮ್ಮ ಡುಬ್ಬವನ್ನು ತಾವೇ ಚಪ್ಪರಿಸಿಕೊಳ್ಳುತ್ತ ಸಂಘದ ನಡಾವಳಿಕೆಯನ್ನೇ ಕೇಂದ್ರ ಸರಕಾರದ ಆದೇಶವೆಂದು ಹೇಳಿದರು. ''ಲಿಂಗಾಯತ-ವೀರಶೈವದಲ್ಲಿ ಯಾವುದೇ ರೀತಿ ವ್ಯತ್ಯಾಸಗಳು ಇಲ್ಲಾ, ಲಿಂಗಾಯತ ಅಥವಾ ವೀರಶೈವ ಎಂದು ಮುಂಬರುವ ಜನಗಣತಿಯಲ್ಲಿ ಬರೆಸಿರಿ'' ಎಂದು ಜನತೆಗೆ ಆದೇಶ ನೀಡಿದರು.

''ಲಿಂಗಾಯತ ಹಾಗೂ ವೀರಶೈವ ಒಂದೇ ಹೇಗೆ ?'' ಎಂದು ಸಭಿಕರು ಕೇಳಿದ ಪ್ರಶ್ನೆಗೆ ಇವರಲ್ಲಿ ನಿಖಿರವಾದ ಉತ್ತರವಿಲ್ಲ. ''ಅದು ವಿದ್ವಾಂಸರಿಗೆ ಬಿಟ್ಟ ವಿಷಯ'' ಎಂದಿಷ್ಟೆ ಉತ್ತರ, ವಿದ್ವಾಂಸರು ಯಾರು ? ಅವರು ಎಲ್ಲಿದ್ದಾರೆ? ಎಂದರೆ ಸಭೆಯಲ್ಲಿ ಗೊಂದಲ, ಗದ್ದಲ. (ಎಲ್ಲಿ ವೀರಶೈವವೋ ಅಲ್ಲಿ ಗೊಂದಲದ ವೈಭವ).

ಈ ಸಮಾರಂಭದಲ್ಲಿ ಆಶೀರ್ವಚನ ನೀಡಲು ಬಂದ ನಾಗನೂರು ರುದ್ರಾಕ್ಷಿ ಮಠದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಮನಸ್ಸಿನಲ್ಲಿ ವಿಶ್ವಗುರು ಬಸವಣ್ಣನವರೇ ಪ್ರವೇಶಿಸಿದಂತಾಗಿ ''ಸಮಾಜ ಒಡೆಯುವುದು ಬೇಡ. ನಾವೆಲ್ಲ ಲಿಂಗಾಯತರು. ಉತ್ತರ ಕರ್ನಾಟಕದಲ್ಲಿ ವೀರಶೈವರು ಇಲ್ಲವೇ ಇಲ್ಲ, ಕಾರಣ ಎಲ್ಲರೂ ಜನಗಣತಿಯಲ್ಲಿ ಲಿಂಗಾಯತವೆಂದೇ ಬರೆಸಿರಿ.'' ಎಂದು ಖಡಾಖಂಡಿತವಾಗಿ, ಸ್ಪಷ್ಟವಾಗಿ ಆದೇಶ ನೀಡಿದರು. ''ದಕ್ಷಿಣ ಕರ್ನಾಟಕದಲ್ಲಿ ಕೆಲವರು ತಿಳಿದಿರಬಹುದು ಅವರೂ ಮುಂದಿನ ಸಲ ಲಿಂಗಾಯತ ಬರೆಸಲಿ, ಲಿಂಗಾಯತರೆಲ್ಲ ಒಂದಾಗೋಣ, ಒಕ್ಕಟ್ಟಾಗೋಣ, ಕೇಂದ್ರಕ್ಕೆ ನಮ್ಮ ಧ್ವನಿ ಮುಟ್ಟಿಸೋಣ'' ಎಂದಾಗ ಸಭೆಯಲ್ಲಿ ಕರತಾಡನ ಮುಗಿಲು ಮುಟ್ಟಿತು. ಇಂಥ ಜಟಿಲವಾದ ಸಮಸ್ಯೆಯನ್ನು ಸರಳವಾಗಿ ಬಿಡಿಸಿದ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳಿಗೆ ಅಭಿನಂದನೆಗಳು. ತಾವೂ ಪರಿವರ್ತನೆಗೊಂಡು ಮಿಕ್ಕವರನ್ನು ಪರಿವರ್ತಿಸಿದ ಶ್ರೀಗಳಿಗೆ ಅಖಿಲ ಭಾರತ ಲಿಂಗಾಯತ ಧರ್ಮದ ಪರವಾಗಿ ಅಭಿನಂದಿಸುತ್ತೇವೆ.

ಡಾ|| ಶಿವಗೌಡ ಬಾ. ಪಾಟೀಲ
ಗೌರವಾಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಸಂಕೇಶ್ವರ ಘಟಕ, ಜಿ-ಬೆಳಗಾವಿ

ಕೊಪ್ಪಳದಲ್ಲಿನ 'ಬಸವ ಚಿಂತನ ಪ್ರಭೆ' ಇತರರಿಗೂ ಅನುಕರಣೀಯ

ಗುಲಬರ್ಗಾ ರಾಷ್ಟ್ರೀಯ ಬಸವ ದಳದವರು ಶ್ರಾವಣ ಮಾಸ ಪೂರ್ತಿ ದಿನಾ ಸಂಜೆ ಒಬ್ಬೊಬ್ಬ ಶರಣರ ಮನೆಯಲ್ಲಿ ಬಸವ ಜ್ಯೋತಿ ಏರ್ಪಡಿಸಿ ಶ್ರಾವಣ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ ಭಕ್ತಿಯ ವಾತಾವರಣ ನಿರ್ಮಾಣ ಮಾಡಿದ್ದಾರೆ. ಈ ಸಲದ ಶ್ರಾವಣದಲ್ಲಿ ಕೊಪ್ಪಳ ರಾಷ್ಟ್ರೀಯ ಬಸವ ದಳದವರು ಬಸವ ಚಿಂತನ ಪ್ರಭೆ ಎಂಬ ಸುಪ್ರಭಾತದ ಕಾರ್ಯಕ್ರಮ ನಡೆಸಿ ಅನುಕರಣೀಯರಾಗಿದ್ದಾರೆ.

ಸುಪ್ರಭಾತದ ಬ್ರಾಹ್ಮೀ ಸಮಯದಲ್ಲಿ ಎದ್ದು ಇಷ್ಟಲಿಂಗಾರ್ಚನೆ, ತ್ರಾಟಕ ಯೋಗವನ್ನು ವೈಯಕ್ತಿಕವಾಗಿ ಮಾಡಿ, ಬೆಳಗಿನ 6-30ರಿಂದ 7-30ರವರೆಗೆ ನಗರದ ಒಂದೊಂದು ಭಾಗದಲ್ಲಿ ಓರ್ವ ಶರಣರ ಮನೆಯಲ್ಲಿ ಬಸವ ಚಿಂತನ ಪ್ರಭೆ ಏರ್ಪಡಿಸುವುದು, 'ನೆನಹು' ಮಾಡಿ ಪ್ರಾರಂಭಿಸಿ, ವಿವಿಧ ಅಧ್ಯಾತ್ಮಿಕ ವಿಷಯವನ್ನು ಆಯ್ದುಕೊಂಡು ಅದರ ಮೇಲೆ ಚಿಂತನೆ ಮಾಡುವುದು ಮತ್ತು ತಮ್ಮ ತಮ್ಮ ಅಧ್ಯಾತ್ಮಿಕ ಅನುಭವವನ್ನು ವಿನಿಮಯ ಮಾಡಿಕೊಳ್ಳುವುದನ್ನು ಮಾಡುತ್ತಾರೆ. ಬಹಳ ಪರಿಣಾಮಕಾರಿಯಾದ ಈ ಬಸವ ಚಿಂತನ ಪ್ರಭೆ ಅಂತರ್ಮುಖಿ ಸ್ವಭಾವದ ಸಾಧಕರನ್ನು ಆಕರ್ಷಿಸುತ್ತಿದೆ. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು, ಗಣನಾಯಕರೂ ಆದ ಶರಣ ವೀರಣ್ಣ ಕೊರ್ಲಹಳ್ಳಿಯವರ ನೇತೃತ್ವದಲ್ಲಿ ನಡೆದಿರುವ ಈ ಬಸವ ಚಿಂತನ ಪ್ರಭೆಯ ಬೆಳಕು ಎಲ್ಲಾ ಕಡೆ ಹರಡಲೆಂದು ಹಾರೈಸುತ್ತೇವೆ.

-ಮಾತಾಜಿ

ವೀರಶೈವ-ಲಿಂಗಾಯತ ಸಮಾನ ಪದಗಳು : ಮುದ್ನಾಳ

ಹಳಿಯಾಳ, 14-ವೀರಶೈವ ಮತ್ತು ಲಿಂಗಾಯತ ಇವು ಸಮಾನ ಶಬ್ದವಾಗಿದ್ದು, ವೀರಶೈವ ಧರ್ಮದಲ್ಲಿನ ಆಚಾರ ವಿಚಾರಗಳ ಗೊಂದಲಕ್ಕೆ ವೀರಶೈವ ಮಹಾಸಭೆ ತಲೆಕೆಡಿಸಿಕೊಂಡಿಲ್ಲ. ವೈದಿಕ ಧರ್ಮದಂತೆ ವೀರಶೈವ ಅಥವಾ ಲಿಂಗಾಯತ ಧರ್ಮ ಬೆಳೆದಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭೆಯ ಕ್ರಿಯಾ ಸಮಿತಿಯ ಅಧ್ಯಕ್ಷ ವಿಶ್ವನಾಥ ರೆಡ್ಡಿ ಮುದ್ನಾಳ ತಿಳಿಸಿದರು.

ಇಲ್ಲಿನ ಗಣೇಶ ಕಲ್ಯಾಣ ಮಂಟಪದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಜನಗಣತಿಯ ಸಮಯದಲ್ಲಿ ಧರ್ಮಾನುಯಾಯಿಗಳು ಕಾಯಕದ ಹೆಸರನ್ನು ಬರೆಸಿದ್ದರಿಂದ ಇಂದು ಜನಗಣತಿ ಸಂಖ್ಯೆಯಲ್ಲಿ ಬಹಳಷ್ಟು ಏರುಪೇರಾಗಿದೆ ಎಂದು ಅವರು ಹೇಳಿದರು.

ಇತ್ತೀಚೆಗೆ ಮಾತೆ ಮಹಾದೇವಿ ವೀರಶೈವ ಧರ್ಮವೇ ಅಲ್ಲ ಎಂದಿರುವ ಬಗ್ಗೆ ಕೇಳಿದಾಗ ಅವರು ಬುದ್ಧಿವಂತರು, ಓದಿ ಕೊಂಡವರು ಆ ರೀತಿ ಹೇಳಿದ್ದಕ್ಕೆ ನಮಗೂ ದಿಗ್ಭ್ರಮೆಯಾಗಿದೆ. ಅವರಿಗೆ ಮನವರಿಕೆ ಮಾಡಿಕೊಡಲು ಹೋದರೆ ಜಗಳವಾಡುತ್ತಾರೆ ಎಂದರು.

(ಕೃಪೆ : ಸಂಯುಕ್ತ ಕರ್ನಾಟಕ ದಿ. 16-9-2000 ಪುಟ 6)

ಮುದ್ನಾಳ ಅವರ ಹೇಳಿಕೆಗೆ ಪ್ರತಿಕ್ರಿಯೆ -ಮಾತಾಜಿ

ದಿವಂಗತ ಲೇಖಕರಾದ ಶ್ರೀ ರಾಮ ಜಾಧವರ ಒಂದು ಚುಟುಕು ಲಿಂಗಾಯತ ಸಮಾಜದಲ್ಲಿ ಉಲ್ಲೇಖನಾರ್ಹ, ಅಮರ ಶಾಸನವಾಗಿ ತೋರಿಬರುತ್ತಿದೆ. ಅದು ಹೀಗಿದೆ :

ಎಲ್ಲಿ ವೀರಶೈವವೊ, ಅಲ್ಲಿ ಗೊಂದಲದ ವೈಭವ
ಅದು ಅವರ ಸ್ವಭಾವ, ಕಾರಣ ಅಲ್ಲಿ ಬಸವಣ್ಣನ ಅಭಾವ

ವೀರಶೈವ ಮಹಾಸಭೆ ಹುಟ್ಟಿದಾಗಿನಿಂದ ಹಲವರ ಕೈಯಲ್ಲಿ ಸಾಗಿ ಬಂದು, ಅನೇಕ ಬದಲಾವಣೆ ಹೊಂದಿದೆ. ಇದೀಗ ಶ್ರೀ ವಿಶ್ವನಾಥ ರೆಡ್ಡಿ ಅವರ ಕೈಗೆ ಸಿಕ್ಕಿದೆ. ಇಂಗ್ಲಿಷಿನಲ್ಲಿ ಒಂದು ಪದ ಪ್ರಯೋಗವಿದೆ. Hit and run ಎಂದು. ಎದುರು ನಿಂತು ಹೋರಾಡುವುದಲ್ಲ, ಹೊಡೆದು ಓಡುವುದು. ನಾವು ಸ್ವತಂತ್ರವಾಗಿ ಚಿಂತನೆ ಮಾಡಲು ಆರಂಭಿಸುವ ಸಮಯದಲ್ಲಿ ವೀರಶೈವ/ಲಿಂಗಾಯತಗಳ ಬಗ್ಗೆ ಸ್ಪಷ್ಟವಾದ ಕಲ್ಪನೆ ಇರಲಿಲ್ಲ. ವೀರಶೈವನಾರು ? ಎಂಬ ಒಂದು ಪಟವನ್ನು ಪೂಜ್ಯ ಗುರುಗಳು ಮುದ್ರಿಸಿದ್ದು ಅದು ಬಹಳ ಜನಪ್ರಿಯವಾಗಿತ್ತು. ವೀರಶೈವ ಕುರಿತು ಕೆಲವೊಂದು ಸಂದೇಹಗಳು ಏಳುತ್ತಿದ್ದರೂ ಸರಿಯಾದ ವಿವರಗಳಿಲ್ಲದೆ ಎರಡರ ಮಧ್ಯೆ ವಿಭಜನಾರೇಖೆ ಎಳೆಯಲು ಸಾಧ್ಯವಾಗುತ್ತಿರಲಿಲ್ಲ. ಸನ್ಮಾನ್ಯ ಬಿ. ಡಿ. ಜತ್ತಿಯವರ ಬಳಿ ಒಮ್ಮೆ ಹೋಗಿ, ''ಪಾಂಡಿಚೇರಿ ನೋಡಲು ಹೋಗುವವರಿದ್ದೇವೆ. ಅರವಿಂದಾಶ್ರಮಕ್ಕೆ ಒಂದು ಪತ್ರ ಕೊಡಿ.'' ಎಂದಾಗ ಅವರು ಪಾಂಡಿಚೇರಿಯಲ್ಲಿ ಒಂದು ವೀರಶೈವ ಮಠವಿದೆ. ಹೋಗಿ ಬನ್ನಿ. ಬಹಳ ಕುತೂಹಲಕಾರಕವಾಗಿದೆ.'' ಎಂದರು. ಹೋಗಿ ಅಲ್ಲಿಯ ಸ್ವಾಮಿಗಳನ್ನು ಭೇಟಿಯಾದಾಗ ಮೊದಲನೆಯ ಬಾರಿಗೆ ಸತ್ಯವೊಂದು ಗೋಚರವಾಯಿತು. ಅದೆಂದರೆ ವೀರಶೈವ-ಲಿಂಗಾಯತ ಬೇರೆ ಬೇರೆ ; ಅದೊಂದು ಶೈವ ಪಂಥ, ಇದೊಂದು ಸ್ವತಂತ್ರ ಧರ್ಮ. ಈ ಜಾಡು ಹಿಡಿದು ಹೊರಟಾಗ ವಚನ ಸಾಹಿತ್ಯವು ಅನೇಕ ಸತ್ಯಗಳನ್ನು ಪ್ರದರ್ಶಿಸತೊಡಗಿತು. ವೀರಶೈವ ಮಹಾಸಭೆಗೆ ಆಜೀವ ಸದಸ್ಯರಾಗಲು ಶ್ರೀಯುತ ಐ.ಎಂ.ಮುಗಮುಮ್ ಒತ್ತಾಯ ಪಡಿಸಿದಾಗ ನಾನು. ಪೂಜ್ಯ ಗುರುಗಳು ಸದಸ್ಯರಾದೆವು. ವೀರಶೈವದ ಕಥೆ ತಿಳಿಸಿ ಒಮ್ಮೆ ಬಹಿರಂಗ ಚರ್ಚೆಗೆ ಇಡಿರಿ. ವೀರಶೈವವು ನಮಗೆ ಹೊಂದುವುದಿಲ್ಲ.'' ಎಂದು ಮನವರಿಕೆ ಮಾಡಿಕೊಟ್ಟೆವು. ಅಂದಿನಿಂದ ಇಂದಿನವರೆಗೆ ಅಖಿಲ ಭಾರತ ವೀರಶೈವ ಮಹಾಸಭೆಯವರಿಗೆ ಬಹಿರಂಗ

Digitalized by e-Sahithya Documentation Forum
Sponsored by Sarayu Foundation Trust

ಚರ್ಚೆ ಇಡಿರಿ ಎಂದು ಹೇಳುತ್ತಿದ್ದರೂ ಅವರು ಮುಖಾಮುಖಿಯಾಗಿ ಎದುರಿಸುವ ಧೈರ್ಯವಿಲ್ಲದೆ ತಪ್ಪಿಸಿಕೊಳ್ಳುತ್ತಿರುವರು.

ಲಿಂ॥ ಆರ್.ಎಂ.ಬಿ.ಆರಾಧ್ಯರು ಒಮ್ಮೆ 1975ರಲ್ಲಿ-''ಬಸವಣ್ಣನವರಿಗೂ ಪೂರ್ವದಲ್ಲಿ ಈ ಧರ್ಮ (ಲಿಂಗಾಯತ) ಇತ್ತಂತೆ. ನಾನಂತೂ ಓದಿದವನಲ್ಲ ''ಎಂದಾಗ ''ವಿದ್ವಾಂಸರಲ್ಲಿ ಚರ್ಚೆಗೆ ಇಡಿರಿ'' ಎಂದೂ ಹೇಳಿದೆವು. ಅವರು ಆಸಕ್ತಿ ತೋರಿಸಿದರೂ ಇನ್ನಿತರ ಕೆಲವರು ಒಪ್ಪುತ್ತಿಲ್ಲ ; ಏಕೋ ತಿಳಿಯದು ಎಂದು ಒಮ್ಮೆ ಉದ್ಗರಿಸಿದರು. ರಾಷ್ಟ್ರೀಯ ಬಸವ ದಳದವರು ಧಾರವಾಡ (9-9-2000) ಬೆಳಗಾಂವ (10-9-2000) ದಾವಣಗೆರೆ (21-9-2000) ಮುಂತಾದಲ್ಲಿ ವೀರಶೈವ ಮಹಾಸಭೆಯವರು ನಡೆಸಿದ ಸಭೆಗಳಲ್ಲಿ ಭಾಗಿಗಳಾಗಿ ಪ್ರಶ್ನೆಗಳನ್ನು ಕೇಳಿದಾಗ ಉತ್ತರ ಕೊಡದೆ ತತ್ತರಿಸಿ, ತಿಪ್ಪೇಸಾರಿಸುವ ಮಾತನ್ನಾಡಿ ತಪ್ಪಿಸಿಕೊಂಡರಂತೆ. ನಮ್ಮದೇನೂ ಅಭ್ಯಂತರವಿಲ್ಲ ''ನೀವು ವೀರಶೈವವನ್ನಾದರೂ ಬರೆಸಿ, ಲಿಂಗಾಯತವನ್ನಾದರೂ ಬರೆಸಿ'' ಎಂದು ಜಾರಿ ಕೊಂಡರಂತೆ. ''ಈ ಹೇಳಿಕೆ ಬೇಡ ; ಒಂದು ಧರ್ಮಕ್ಕೆ ಎಷ್ಟು ಹೆಸರಿರುತ್ತವೆ ? ಎಲ್ಲ ಧರ್ಮಗಳಿಗೂ ಒಂದೊಂದೇ ಹೆಸರಿವೆ.'' ಎಂದು ಧಾರವಾಡದಲ್ಲಿ ಶರಣ ಬಸಯ್ಯ ಗಣಾಚಾರಿಯವರು, ದಾವಣಗೆರೆಯಲ್ಲಿ ಶರಣ. ಎ.ಜಿ.ವಿರುಪಾಕ್ಷಪ್ಪನವರು ಕೇಳಿದಾಗ ತಡಬಡಿಸಿದರಂತೆ. ಧಾರವಾಡದಲ್ಲಿ ಓರ್ವರು ಕೇಳಿದರಂತೆ, ''ಮಾತೆ ಮಹಾದೇವಿಯವರು ಆಹ್ವಾನ ನೀಡಿದ್ದಾರೆ, ಬಹಿರಂಗ ಚರ್ಚೆಗೆ ಸಿದ್ಧವಿರುವುದಾಗಿ. ಏಕೆ ಚರ್ಚಿಸಬಾರದು ? ಎಂದು. ಆಗ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳರು ''ಅವರು ಜ್ಞಾನಿ, ವಿದ್ವಾಂಸರು, ಅವರೊಡನೆ ಚರ್ಚಿಸಲು ನಾವು ಪರಿಣಿತರಲ್ಲ.'' ಎಂದು ವೇದಿಕೆಯಿಂದಲೇ ಕೈಮುಗಿದು ಹೇಳಿ, ಹಳಿಯಾಳದಲ್ಲಿ ರಾಷ್ಟ್ರೀಯ ಬಸವ ದಳದವರು ಯಾರೂ ಇಲ್ಲ ಎಂದು ಖಚಿತಪಡಿಸಿಕೊಂಡೇ ಶ್ರೀ ವಿಶ್ವನಾಥ ರೆಡ್ಡಿಯವರು ''ವೀರಶೈವ-ಲಿಂಗಾಯತ ಸಮಾನಾರ್ಥಕ ಪದಗಳು, ಮಾತೆ ಮಹಾದೇವಿಯವರು ಹೇಳಿದ್ದು ಕೇಳಿ ಆಶ್ಚರ್ಯವಾಗಿದೆ. ಅವರ ಜೊತೆ ಚರ್ಚಿಸಬೇಕೆಂದರೆ ಜಗಳವಾಡುತ್ತಾರೆ.'' ಎಂದು ಉತ್ತರ ಕುಮಾರನ ಪೌರುಷ ತೋರಿದ್ದಾರೆ. ಹಲವು ಊರಲ್ಲಿ ರಾಷ್ಟ್ರೀಯ ಬಸವ ದಳದವರು ಪ್ರಶ್ನೆ ಕೇಳಿದಾಗ ಜಗಳ ಕಾಯ್ದವರು ಅವರೇ ! ಅದೇ ಕಿತ್ತೂರು ತಾಲ್ಲೋಕಿನ ವೀರಶೈವ ಮಹಾಸಭಾಧ್ಯಕ್ಷರು ದಿ. 1-9-2000ಮತ್ತು 3-9-2000ರಂದು ಹತ್ತಾರು ಪ್ರಶ್ನೆ ಕೇಳಿದಾಗ ಸುಮಾರು ಬೆಳಗಿನ 11 ರಿಂದ 1-30ರವರೆಗೆ ಸಮೂಲಾಗ್ರವಾಗಿ ಉತ್ತರ ಹೇಳಿದ್ದು ನಾನು. ಅಂದಾಗ ನಾವು ಸಹನೆಯಿಂದ ಶಾಸ್ತ್ರೀಯವಾಗಿ ಉತ್ತರಿಸುವವರೆ ವಿನಾ ಜಗಳವಾಡುವ ಅಸಂಸ್ಕೃತ ಪ್ರವೃತ್ತಿಯವರಲ್ಲ. ಕೇರಳ ವೀರಶೈವರ ಆಚಾರ-ವಿಚಾರ-ನಂಬಿಕೆ ನೋಡಿದ ಮೇಲಂತೂ ವೀರಶೈವವು ಸ್ಪಷ್ಟವಾಗಿ ಬೇರೆ ಎಂಬುದು ; ಅದು ಒಂದು ಶೈವದ ಪಂಥ ಲಿಂಗಾಯತವು ಸ್ವತಂತ್ರ ಧರ್ಮ ಎಂಬುದು ನೂರಕ್ಕೆ ನೂರ ಇಪ್ಪತ್ತರಷ್ಟು ಖಚಿತವಾಗಿದೆ. ವೀರಶೈವ ಮಹಾಸಭೆಯವರಿಗೆ ಮತ್ತೆ ಯಾರೇ ವೀರಶೈವವಾದಿಗಳಿರಲಿ ಅವರಿಗೆ ಮನವರಿಕೆ ಮಾಡಿಕೊಡಲು ನಾವು ಸದಾ ಸಿದ್ಧ ಎಂದು ಪುನಃ ದೃಢಪಡಿಸುತ್ತೇನೆ.

-ಮಾತಾಜಿ

ಕಲ್ಯಾಣ ಕಿರಣ ಸೆಪ್ಟೆಂಬರ್-2000 ಪತ್ರಿಕೆಯ ''ಅಪ್ಪಾಜಿ''ಯವರ ಮುಖಪುಟ ಕಂಡು ಬರೆದಿರುವ ಪ್ರತಿಕ್ರಿಯೆ :

ಭಾನುವಿನ ಮಧ್ಯದಿ ನಿಂತು ಬಸವ ಧರ್ಮೀಯ ನಿಜಭಕ್ತರಿಗೆ
ಹರುಷದಿಂದ ಆಶೀರ್ವದಿಸಲು ಎತ್ತಿದ 'ಅಭಯ ಹಸ್ತ'
ಬಂಗಾರದ ಕೊಂಬಣಸಿನ ತುಡುಗೆತ್ತುಗಳ
ಬೆನ್ನ ಬಾಸಾಳ ತರಿಸಿ ಬಡಿಯಲೆತ್ತಿರುವ 'ಭಯ ಹಸ್ತ'

-ಚನ್ನವೀರಪ್ಪ ಯಡಿಯಾಪುರ, ರಾಣೆಬೆನ್ನೂರು

ವೀರಶೈವ ಮಹಾಸಭೆಯವರ ಅಪ್ರಾಮಾಣಿಕತೆ

ಕರ್ನಾಟಕದ ಉನ್ನತ ನ್ಯಾಯಾಲಯಕ್ಕೆ ಹಾಕಿದ ರಿಟ್ ಪಿಟಿಷನ್ ಸಂ. 8391, 1990 ಇದರಲ್ಲಿ ವೀರಶೈವ ಮಹಾಸಭೆ ಹೇಳಿಕೊಂಡಿರುವುದು.

1. ರಾಷ್ಟ್ರದಲ್ಲಿರುವ ವೀರಶೈವರ ಹಿತಾಸಕ್ತಿಕಾಯಲು ಇರುವ ಸಂಸ್ಥೆ ವೀರಶೈವ ಮಹಾಸಭೆ.
2. ವೀರಶೈವವು ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಮೇಲೆ ನಿಂತುದು.
3. ವೀರಶೈವವು ವೇದಗಳನ್ನು ಮತ್ತು ಅದರ ತತ್ತ್ವಗಳನ್ನು ಮಾನ್ಯ ಮಾಡುವುದಿಲ್ಲ.

ವೀರಶೈವ ಮಹಾಸಭೆಯು ಹಾನಗಲ್ ಕುಮಾರ ಸ್ವಾಮಿಗಳಿಂದ 1904ರಲ್ಲಿ ಸ್ಥಾಪಿತವಾಯಿತು. 1983ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಕರ್ನಾಟಕ ಸೊಸೈಟಿ ಆಕ್ಟ್ 1960ರ ಪ್ರಕಾರ ನೊಂದಣಿಯಾಗಿದೆ. 1984ರಲ್ಲಿಪ್ರಕಾಶನಗೊಂಡ ನಿಯಮಾವಳಿ ಪುಸ್ತಕದಲ್ಲಿ ಧ್ಯೇಯೋದ್ದೇಶದಲ್ಲಿ 2 (b) Veerashaiva Community which is ancient in its origin and is traced to the period of Vedas and Agamas in the religious history of India ಎನ್ನುತ್ತಾರೆ. ಇಡೀ ಬೈಲಾದಲ್ಲಿ ಲಿಂಗಾಯತ ಧರ್ಮ, ಸಮಾಜ ಪದಗಳು ಅರಿತು ಮರೆತೂ ಬಂದಿಲ್ಲ. ಮುಂದೆ 1998ರಲ್ಲಿ ದಿ. ಎಪ್ರಿಲ್ 30ರಂದು ತಿದ್ದುಪಡಿ ಮಾಡಿದ್ದಾರೆ. 1904 ರಿಂದ 1998ರವರೆಗೆ ಕೇವಲ ವೀರಶೈವ ಪದ ಮಾತ್ರ ಬಳಕೆ ಮಾಡಿದ್ದ ಮಹಾಸಭೆಯವರು ಕೃತಕವಾಗಿ ವೀರಶೈವಕ್ಕೆ ಲಿಂಗಾಯತ-ಲಿಂಗವಂತ ಎಂದು ಸೇರಿಸಿ ಕೈತೊಳೆದುಕೊಂಡಿದ್ದಷ್ಟೇ ಅಲ್ಲ 1983ರಲ್ಲಿ ಇದ್ದ ''ವೀರಶೈವವು ವೇದ-ಆಗಮ ಆಧಾರಿತ'' ಎಂಬುದನ್ನು ತೆಗೆದುಹಾಕಿದ್ದಾರೆ. ವೇದ-ಆಗಮ ಆಧಾರಿತವಾದ ವೀರಶೈವವನ್ನು ಬೆಳೆಸಬೇಕೆಂಬುದು ಸಂಸ್ಥಾಪಕರಾದ ಹಾನಗಲ್ ಶ್ರೀಗಳ ಮನೀಷೆಯಾಗಿದ್ದಾಗ ಅವರ ಇಚ್ಛೆಗೆ ವಿರುದ್ಧವಾಗಿ ವೀರಶೈವವು ವೇದಗಳನ್ನು ತಿರಸ್ಕರಿಸಿದೆ ಎಂದು ಕೋರ್ಟಿನಲ್ಲಿ ಹೇಳಿದುದು ಮತ್ತು ಉತ್ತರ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿದ್ದ ಲಿಂಗಾಯತ ಪದವನ್ನು ಉದ್ದೇಶಪೂರ್ವಕವಾಗಿಯೇ ಬಳಸದ ಹಾನಗಲ್ ಶ್ರೀಗಳ ಇಚ್ಛೆಗೆ ವಿರುದ್ಧವಾಗಿ ತಿದ್ದುಪಡಿಯಲ್ಲಿ ಲಿಂಗಾಯತ-ಲಿಂಗವಂತ ಸೇರಿಸಿದುದು ಅಪ್ರಾಮಾಣಿಕತೆ, ಆಕ್ಷೇಪಣೀಯವಲ್ಲವೆ ?

ಲಿಂಗಾಯತ ಪದದ ಜನಪ್ರಿಯತೆ

ಲಿಂಗಾಯತ ಸಮಾಜದಲ್ಲಿ 'ಲಿಂಗಾಯತ' ಎಂಬ ಪದವನ್ನು ಬಿಟ್ಟರೆ ಬೇರೊಂದು ಪ್ರಚಲಿತವಿರಲಿಲ್ಲ. ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಿರಿ ಎಂದು ಪ್ರಚಾರಕ್ಕೆ ಹೋದರೆ, ''ಇದನ್ನೇನು ಹೇಳ್ತೀರಿ ? ಈ ಪದ ಬಿಟ್ಟು ಬೇರೆ ಪದವೇ ಗೊತ್ತಿಲ್ಲ'' ಎನ್ನುತ್ತಾರೆ, ಮೈಸೂರು ಜಿಲ್ಲೆಯ ಒಂದು ಪುಟ್ಟಗ್ರಾಮದಲ್ಲಿ ಇರುವ ಲಿಂಗಾಯತ, ಬೀದರ ಜಿಲ್ಲೆಯ ಚಿಕ್ಕಗ್ರಾಮದಲ್ಲಿರುವ ಲಿಂಗಾಯತ ಮತ್ತು ನೀಲಗಿರಿ ಜಿಲ್ಲೆಯ ಹಟ್ಟಿಯಲ್ಲಿರುವ ಲಿಂಗಾಯತ. ಕರ್ನಾಟಕದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಬೆಳಗಾಂವಿಯ ಕೆ.ಎಲ್.ಇ ಸಂಸ್ಥೆಯ ಪೂರ್ಣ ಹೆಸರು ಕರ್ನಾಟಕ ಲಿಂಗಾಯತ ಎಜ್ಯುಕೇಷನ್ ಸೋಸೈಟಿ ; ಬಿಜಾಪುರದ ಬಿ.ಎಲ್.ಡಿ ಸಂಸ್ಥೆ, ಬಿಜಾಪುರ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಬೆಂಗಳೂರಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆ-ಧಾರವಾಡದ ಲಿಂಗಾಯತ ಟೌನ್ ಹಾಲ್ ಹೀಗೆ ಸಂಘ ಸಂಸ್ಥೆಗಳು ಹೆಸರು ಸಹ. ಕೃತಕವಾಗಿ ವೀರಶೈವ ಪದ ಸೇರಿಸಿ ಗೊಂದಲ ಹುಟ್ಟಿಸುತ್ತಿರುವ ವೀರಶೈವವಾದಿಗಳ ಉದ್ದೇಶ ಕುರಿತು ಸಂಶೋಧನ ಕೈಗೊಂಡರೆ ಚೆನ್ನಾಗಿರುವುದಲ್ಲವೆ ?

Digitalized by e-Sahithya Documentation Forum
Sponsored by Sarayu Foundation Trust

ಆಗಸ್ಟ್ ತಿಂಗಳಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಒಂದು ಸಭೆ ಕರೆದಿತ್ತು. ವಿಷಯ ಸೂಚಿಯಲ್ಲಿ ಇದ್ದ ಅಂಶಗಳೆಂದರೆ :

1. 2001ರ ಜನಗಣತಿಯನ್ನು ಬಹಿಷ್ಕರಿಸುವುದು. 2. ಇಲ್ಲವೇ ಪ್ರತಿಭಟನೆ

3. ಯಾವ ರೀತಿಯಲ್ಲಿ ಪ್ರತಿಭಟನೆ ಪ್ರಚಾರ ಹಮ್ಮಿಕೊಳ್ಳಬೇಕು ? ಈ ಬಗ್ಗೆ ನಾನೊಂದು ಪತ್ರಿಕಾಗೋಷ್ಠಿ ಕರೆದು ದಿ. 16-8-2000 "ಜನಗಣತಿಯ ಬಹಿಷ್ಕಾರ ಮೂರ್ಖತನದ ವಿಚಾರ ಜನಗಣತಿಯು ಒಂದು ರಾಷ್ಟ್ರೀಯ ಕಾರ್ಯಕ್ರಮ. ಹತ್ತು ವರ್ಷಕ್ಕೊಮ್ಮೆ ಬರುವ ಇದರ ಸದುಪಯೋಗ ಪಡೆದುಕೊಳ್ಳಬೇಕೇ ವಿನಾ ಬಹಿಷ್ಕರಿಸಿದರೆ ಹಾನಿಯಾಗುವುದು ನಮಗೇ ವಿನಾ ಬೇರಾರಿಗಲ್ಲ ಜನಗಣತಿಯಲ್ಲಿ ಸಿಕ್ಕುವ ಅಂಕಿ ಅಂಶಗಳ ಮೇಲೆಯೇ ಕೇಂದ್ರ/ರಾಜ್ಯ ಸರ್ಕಾರಗಳು ಯೋಜನೆ/ಕಾರ್ಯಕ್ರಮ ರೂಪಿಸುವುದು" ಎಂದು ಖಂಡಿಸಿದೆ. ವೀರಶೈವ ಮಹಾಸಭೆ ಬಹಿಷ್ಕಾರದ ಕೆಲಸ ಕೈ ಬಿಟ್ಟಿತು. ಇನ್ನು ಪ್ರತಿಭಟನೆ ? ಯಾರ ವಿರುದ್ಧ, ಏತಕ್ಕಾಗಿ ? ಯಾರು ಬೇಕಾದರೂ ತನ್ನ ಧಾರ್ಮಿಕ ಅನುಯಾಯಿತ್ವವನ್ನು ಮತ (Religion) ಕಾಲಂನಲ್ಲಿ ಬರೆಸಬಹುದು ಎಂದು ಸ್ವಾತಂತ್ರ್ಯ ನೀಡಿರುವಾಗ ಪ್ರತಿಭಟನೆ ಏತಕ್ಕೆ ?

ಆದ್ದರಿಂದ ಈಗ. ಲಿಂಗಾಯತ ಸಂಘ-ಸಂಸ್ಥೆಗಳು ಮಾಡಬೇಕಾದ ಕೆಲಸ ಜನಗಣತಿಯ ಬಹಿಷ್ಕಾರವಲ್ಲ ; ಸರ್ಕಾರದ ವಿರುದ್ಧ ಪ್ರತಿಭಟನೆ ಅಲ್ಲ ; ತನ್ನ ಮಂದಬುದ್ಧಿಯ ಜನರಿಗೆ ತಮ್ಮ ಧರ್ಮ ಹುಟ್ಟಿ 850ವರ್ಷಗಳಾಗಿದ್ದರೂ ತಿಳಿಯದೆ ಇರುವವರಿಗೆ ಏನು ಬರೆಸಬೇಕೆಂದು ಶಿಕ್ಷಣ ನೀಡುವ ಕೆಲಸ. ಇದು ನಿಜಕ್ಕೂ ನಾಚಿಕೆಗೇಡಿನ ಕೆಲಸವಲ್ಲವೆ ? ಸರಿ, ನಾಚಿಕೆ ನುಂಗಿಕೊಂಡು ಕಲಿಸೋಣ. ಅದು ಅನಿವಾರ್ಯ !

ವೀರಶೈವ ಮಹಾಸಭೆಯ ಕಾಲ್ತೊಡರು

"ಅಯ್ಯಾ ಲಿಂಗಾಯತ, ನಿರಾಕಾರ ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಸಾಕಾರಗೊಳಿಸಿ ಪೂಜಿಸಲು ಕಲಿಸಿದ ವಿಶ್ವಗುರು ಬಸವಣ್ಣನವರ ಅನುಯಾಯಿ ನೀನು. ನಿನ್ನ ಪ್ರಮುಖ ಧಾರ್ಮಿಕ ಲಾಂಛನ ಇಷ್ಟಲಿಂಗ. ಇದನ್ನು ಅಂಗದ ಮೇಲೆ ಆಯತ ಮಾಡಿಕೊಂಡು, ಅಂತರಂಗದಲ್ಲಿ ಸ್ವಾಯತ ಮಾಡಿಕೊಂಡು, ಆತ್ಮದಲ್ಲಿ ಸನ್ನಿಹಿತ ಮಾಡಿಕೊಳ್ಳಬೇಕು ಆದ್ದರಿಂದ ನಿನ್ನ ಧರ್ಮ-ಲಿಂಗಾಯತ" ಎಂದು ನಾವು ಮತ್ತು ಇನ್ನೂ ಅನೇಕರು ಜನರಿಗೆ ತಿಳುವಳಿಕೆ ನೀಡುವ ಸನ್ನಿವೇಶದಲ್ಲಿ ವೀರಶೈವ ಮಹಾಸಭೆ ನಿದ್ರೆಯಿಂದ ಎಚ್ಚೆತ್ತು ಲಿಂಗಾಯತರನ್ನು 'ನೀವು ವೀರಶೈವರು, ಹಾಗೆಂದು ಬರೆಸಿರಿ' ಎಂದು ಕಾಲ್ತೊಡರು ಒಡ್ಡುತ್ತಿರುವುದು ಅನಪೇಕ್ಷಣೀಯ ಮತ್ತು ಖಂಡನಾರ್ಹ.

ವೀರಶೈವ ಮಹಾಸಭೆ ಉದ್ಯೋಗವಿಲ್ಲದ ಬಡಗಿಯಂತೆ ಏನೇನೋ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕೆಂದೇ ಇದ್ದರೆ ಅಗ ಪ್ರತ್ಯೇಕ ಜನಾಂಗವಾಗಿ ಇರುವ ಕೇರಳ, ತಮಿಳುನಾಡುಗಳಲ್ಲಿರುವ ವೀರಶೈವರ ಬಳಿಗೆ ಹೋಗಿ ನೀವು ವೀರಶೈವರೆಂದು ಬರೆಸಿರಿ ಎಂದು ಹೇಳಬೇಕೇ ವಿನಾ ಕರ್ನಾಟಕದಲ್ಲಿರುವ ಇಷ್ಟಲಿಂಗಧಾರಿ ಲಿಂಗಾಯತರನ್ನು ನೀವು ವೀರಶೈವರು ಎಂದು ಹೇಳಿ ದಾರಿ ತಪ್ಪಿಸಲು ಹೋಗಬಾರದು.

4-9-2000 ದಿಂದ ದಿ. 12-9-2000ದ ವರೆಗೆ ವೀರಶೈವ ಮಹಾಸಭೆಯ ಪ್ರಮುಖ ಪದಾಧಿಕಾರಿಗಳು ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ವೀರಶೈವ ಅಥವಾ ಲಿಂಗಾಯತ ಎಂದು ಬರೆಸಿರಿ ಎಂದು ಪ್ರಚಾರ ಕೈಕೊಂಡಾಗ ಧಾರವಾಡ, ಬೆಳಗಾಂ ಮುಂತಾದಲ್ಲೆಲ್ಲ ಸಾಕಷ್ಟು ವಿರೋಧ ಎದುರಿಸಿದರಾದರೂ ತಮ್ಮ ಧೂರ್ತ ಪ್ರಯತ್ನ ಕೈಬಿಡುತ್ತಿಲ್ಲ. ಪುನಃ ಸೆಪ್ಟೆಂಬರ್ 28-29ರಂದು ಒಂದು ಸಭೆ ಕರೆದಿದ್ದಾರೆ. ಅದರ ಉದ್ದೇಶ ಬೃಹತ್ ಜಾಥಾ ಏರ್ಪಡಿಸುವುದು, ಬೃಹತ್ ಸಭೆ ಸೇರಿಸುವುದು.

ವೀರಶೈವವು ಶೈವದ ಒಂದು ಶಾಖೆ; ಶೈವವು ಹಿಂದು ಪರಂಪರೆಯ ಅವಿಭಾಜ್ಯ ಅಂಗ. ಲಿಂಗಾಯತವು ಒಂದು ಸ್ವತಂತ್ರ ಮತ್ತು ಪರಿಪೂರ್ಣ ಧರ್ಮ. ಎರಡನ್ನೂ ಸಮೀಕರಿಸಿ ಬಳಸುವುದು ಖಂಡನಾರ್ಹ ಅಪರಾಧ. ಎರಡನೆಯದಾಗಿ ಗೋಳಾಕಾರದ ಇಷ್ಟಲಿಂಗ ಧರಿಸಿ ವಚನ ಸಾಹಿತ್ಯ ಆಧಾರಿತವಾದ ಒಂದು ಜೀವನ ವಿಧಾನ, ಶರಣ ಸಂಸ್ಕೃತಿ ಅಳವಡಿಸಿಕೊಂಡ ಜನರನ್ನು ವೀರಶೈವರು ಎಂದು ಸಂಬೋಧಿಸುವುದು ಅಕ್ಷಮ್ಯ ಅಪರಾಧ. ವೀರಶೈವ ಮಹಾಸಭೆ ಸಮಾಜವನ್ನು ದಿಕ್ಕುತಪ್ಪಿಸುವ ಕೆಲಸ ಕೈಬಿಡಲಿ; ಜಾಗೃತರಾದ ಜನ ವೀರಶೈವ ಮಹಾಸಭೆಯ ದ್ವಂದ್ವ ನೀತಿಯನ್ನು ಖಂಡಿಸುವುದು ಅಗತ್ಯವಾಗಿದೆ.

- ಮಾತಾಜಿ

ಸೇವೆಯಲ್ಲೇ ಸಾರ್ಥಕ್ಯ ಕಂಡ ಎರಡು ಚೇತನಗಳು ಇನ್ನಿಲ್ಲ



1. ಶರಣೆ ಡಾ|| ಲಲಿತಾ ಗುರುಬಸವಯ್ಯ, ಬೆಂಗಳೂರು.

ಖಾದಿಯ ಬಿಳಿ ಸೀರೆಯುಟ್ಟು, ಸಾತ್ವಿಕ ಮುಖ ಮುದ್ರೆ ಹೊತ್ತು ಮನೆಯವರಿಗೆ ಮಾತ್ರವಲ್ಲ ರೋಗಿಗಳು, ಪರಿಚಿತರ ಪಾಲಿಗೆ ಅಕ್ಕಯ್ಯ ಎಂದೇ ಅಕ್ಕರೆಯಿಂದ ಕರೆಯಲ್ಪಟ್ಟ ಶರಣೆ ಡಾ|| ಲಲಿತಾ ಗುರುಬಸವಯ್ಯನವರು ಇನ್ನಿಲ್ಲ. ದಿ. 1-6-1916ರಂದು ಜನಿಸಿದ ಅವರು ದೀರ್ಘಕಾಲದ ಅನಾರೋಗ್ಯದಿಂದ ತಮ್ಮ 84ನೆಯ ವಯಸ್ಸಿನಲ್ಲಿ ದಿ. 25-8-2000ದಂದು ಇಳೆಯನ್ನು ಅಗಲಿದರು.

ಮನೆತನದ ಕರ್ತವ್ಯ ನಿರ್ವಹಣೆಗಾಗಿ ಅವಿವಾಹಿತರಾಗಿಯೇ ಉಳಿದ ಡಾ|| ಲಲಿತಮ್ಮ ನಂತರ ವೈದ್ಯಕೀಯ ಸೇವೆಯನ್ನೇ ಪರಮಗುರಿಯಾಗಿ ಇರಿಸಿಕೊಂಡರು. 1973ರಲ್ಲಿ ಪರಿಚಯವಾದ ಅವರು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಪ್ರಗತಿಯಲ್ಲಿ ಉದಾರ ದಾನಿಗಳಾಗಿ ಭಾಗಿಗಳಾದರು. ತರಂಗಿಣಿ-ಅಕ್ಕಮಹಾದೇವಿ ಕುರಿತಾದ ಕಾದಂಬರಿ ಸಿದ್ಧವಾಗಿ ಮುದ್ರಿಸಲು ಆರ್ಥಿಕ ಅನುಕೂಲತೆ ಇಲ್ಲದಾಗ ಶರಣೆ. ಡಾ|| ಲಲಿತಮ್ಮ ಮತ್ತು ಅವರ ಅಕ್ಕ ಲಿಂ|| ಶರಣೆ ಚನ್ನಮ್ಮನವರ ಸುಪುತ್ರಿ ಶರಣೆ. ಡಾ|| ಸುಶೀಲಮ್ಮ ದೇಣಿಗೆ ಕೊಟ್ಟು ಪ್ರಕಟಿಸಲು ನೆರವಾದರು. ಡಾ|| ಲಲಿತಮ್ಮನವರ ಆತ್ಮಕ್ಕೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಚಿರಶಾಂತಿಯನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

2. ಶರಣ. ಡಾ|| ರಾಮಚಂದ್ರ ಪುರಂತರ, ದಾವಣಗೆರೆ

ಬಹಳ ವಿಲಕ್ಷಣ ಸನ್ನಿವೇಶದಲ್ಲಿ ಶರಣ ಡಾ|| ರಾಮಚಂದ್ರ ಪುರಂತರ ಅವರ ಪರಿಚಯವಾಯಿತು. ಶ್ರೀಮತಿ ಸೋನಿಯಾ ಅವರು ಏಕೆ ಭಾರತದ ಪ್ರಧಾನಿ ಆಗಬಾರದು ? ಎಂಬ ಬಗ್ಗೆ ಒಂದು ಕರಪತ್ರವನ್ನು ಬರೆದು ಜನಜಾಗೃತಿಗಾಗಿ ಹಂಚಿಸಿದಾಗ ಆ ಕರಪತ್ರ ಓದಿ, ಪುಳಕಿತರಾದ ಡಾ|| ಪುರಂತರ ರಾಷ್ಟ್ರಭಕ್ತಿಯಿಂದ ತುಂಬಿ ತುಳುಕುವ ಒಂದು ಪತ್ರ ಬರೆದರು. ಅವರನ್ನು ಮುಖತಃ ಭೇಟಿ ಮಾಡಲು ಸಾಧ್ಯವಾಗದೇ ಇದ್ದರೂ ರಾಷ್ಟ್ರಾಭಿಮಾನವೇ ಸಮಾನ ಅಂಶವಾಗಿ ಪತ್ರದಲ್ಲಿ ವಿನಿಮಯವಾಯಿತು. ಸಾಮಾನ್ಯವಾಗಿ ಇಂದಿನ ಕಾಲದಲ್ಲಿ ವೈದ್ಯರೆಂದರೆ ಹಣ ಗಳಿಸುವ ಯಂತ್ರಗಳು ಎಂಬ ಭಾವನೆ ವ್ಯಾಪಕವಾಗಿರುವಾಗ ರಾಷ್ಟ್ರಪ್ರೇಮ-ಮಾನವ ಸೇವೆ ಎಂಬ ಎರಡು ಕಣ್ಣುಗಳನ್ನು ಹೊಂದಿದ ಸೇವಾಚೇತನ ಡಾ|| ಪುರಂತರ. ಅವರಲ್ಲಿ ನಾನು ಗುರುತಿಸಿದ ನಾಲ್ಕು ವಿಶೇಷ ಗುಣಗಳೆಂದರೆ 1. ರಾಷ್ಟ್ರಪ್ರೇಮ. 2. ಧರ್ಮಶ್ರದ್ಧೆ 3. ಮಾನವ ಸೇವೆ. 4. ತತ್ವನಿಷ್ಠೆ. ಅಸತ್ಯ ಮತ್ತು ದೌರ್ಜನ್ಯದೊಡನೆ ಎಂದೂ ರಾಜಿ ಮಾಡಿಕೊಳ್ಳದ ಸತ್ಯ ನಿಷ್ಠುರತೆ ಡಾ|| ಪುರಂತರರದಾಗಿತ್ತು. ಸುಮಾರು 67ವರ್ಷ ಬಾಳಿ ದಿ. 6-9-2000ದಂದು ಇಳೆಯನ್ನಗಲಿದ ಶರಣ ಡಾ|| ಆರ್. ಡಿ. ಪುರಂತರ ಅವರ ಆತ್ಮಕ್ಕೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಚಿರಶಾಂತಿಯನ್ನು ಕರುಣಿಸಲಿ ; ಅವರ ಆದರ್ಶವು ಅವರ ಕುಟುಂಬ ವರ್ಗಕ್ಕೆ ಅನುಕರಣೀಯವಾಗಲಿ ಎಂದು ಹಾರೈಸುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

86666

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಧರ್ಮಕ್ಷೇತ್ರವಾದ

ಕೂಡಲ ಸಂಗಮದಲ್ಲಿ 14ನೆಯ ಶರಣ ಮೇಳ

2001ರ ಜನವರಿ 11, 12, 13, 14, 15 ರಂದು

ಶರಣ ಬಂಧುಗಳೇ

★ 1988ರ ಜನವರಿಯಲ್ಲಿ ಆರಂಭವಾದ ಶರಣ ಮೇಳ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಜನರನ್ನು ಆಕರ್ಷಿಸಿ 14ನೆಯ ಶರಣ ಮೇಳಕ್ಕೆ ಅಡಿ ಇಡುತ್ತಿದೆ.

★ 14ನೆಯ ಶರಣಮೇಳ 11ರಿಂದ 15ರವರೆಗೆ 5 ದಿವಸಗಳ ಕಾಲ ನಡೆಯುತ್ತಲಿದೆ.

★ ಚಿಂತನಗೋಷ್ಠಿ ದಿ. 11-1-2001, 12-1-2001 ಎರಡು ದಿವಸಗಳ ಕಾಲ ನಡೆಯುವುದು. 2000 ಇಸವಿಯ ಶರಣ ಮೇಳದಲ್ಲಿ ದಿ. 12ರಂದು ನಡೆದ ಧರ್ಮಚಿಂತನಗೋಷ್ಠಿಯ 2 ಅಧಿವೇಶನಗಳು ಎಷ್ಟು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾದವು ಎಂದರೆ ಅನೇಕ ಚಿಂತನಶೀಲರ ಪ್ರತಿಭಾ ದರ್ಶನ ಮಾಡಿಸಿದವು. ಚರ್ಚಿಸಿದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿದವು. ಸಮಾಜದ ಪ್ರಾಜ್ಞರು ಒಂದೆಡೆ ಸೇರಿ ಧರ್ಮ-ಸಮಾಜ-ರಾಷ್ಟ್ರ ಇವುಗಳನ್ನು ಕುರಿತು ಮುಕ್ತವಾಗಿ ಚಿಂತಿಸಲು ಶರಣ ಮೇಳದ ವೇದಿಕೆ ಅತ್ಯಂತ ಸೂಕ್ತವಾಗಿರುವ ಕಾರಣ ಈ ವರ್ಷದಿಂದ ದಿ.11 ಮತ್ತು 12 ಎರಡು ದಿವಸಗಳ ಕಾಲ ದಿನಾಲು ಎರಡೆರಡು ಅಧಿವೇಶನ ಏರ್ಪಡಿಸಿ ಅನೇಕ ವಿಷಯಗಳನ್ನು ಚರ್ಚಿಸಲಾಗುವುದು. ಆದ್ದರಿಂದ ಈ ಬಗ್ಗೆ ಶರಣ ಬಂಧುಗಳಿಗೆ ನೀಡುವ ಸೂಚನೆ ಏನೆಂದರೆ, ನೀವು ತಪ್ಪದೆ 5 ದಿವಸಗಳ ಕಾಲ ಬಿಡುವು ಮಾಡಿಕೊಂಡು ಭಾಗವಹಿಸಬೇಕು. ಈ ಐದು ದಿವಸಗಳು ವರ್ಷದಲ್ಲಿ ನೀವು ದಿವ್ಯ ಅನುಭವ ಪಡೆಯುವ ಅಮೃತ ಘಳಿಗೆಗಳೆಂದು ಭಾವಿಸಬೇಕು.

ಕಳೆದ ವರ್ಷದ ಚಿಂತನಗೋಷ್ಠಿ ಅಕ್ಷರಶಃ ಅನುಭವ ಮಂಟಪದ ಕಲ್ಪನೆಯನ್ನು ಆನಂದವನ್ನು ತಂದುಕೊಟ್ಟಿತು. ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಚಿಂತನಗೋಷ್ಠಿ ಸೂಕ್ತವಾದ ವೇದಿಕೆಯಾದ್ದರಿಂದ ನಿಮ್ಮಲ್ಲಿರುವ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದು. ನಿಮ್ಮ ಆಲೋಚನೆಗಳನ್ನು ಇತರರ ಮುಂದೆ ಇಡಬಹುದು. ಸಭೆಯಲ್ಲಿ ಚಿಂತನ ಮಾಡಬೇಕಾದ ವಿಷಯಗಳನ್ನು ಮೊದಲೇ ಬರೆದು ಕಳಿಸಿದರೆ ಇನ್ನಿತರ ಶರಣ ಬಂಧುಗಳು ಮೊದಲೇ ಚಿಂತನೆ ಮಾಡಿಕೊಂಡು ಬರಲು ಅನುಕೂಲವಾಗುವುದು.

1. ದಿ. **11-1-2001** ಗುರುವಾರ ದಂದು ಬೆಳಿಗ್ಗೆ 10-30ಕ್ಕೆ ಚಿಂತನಗೋಷ್ಠಿ ಪ್ರಾರಂಭ.
    10-30 ರಿಂದ 1-30 ವರೆಗೆ ಒಂದನೆಯ ಅಧಿವೇಶನ
    3-30 ರಿಂದ 6-00ವರೆಗೆ ಎರಡನೆಯ ಅಧಿವೇಶನ
    7ರಿಂದ 9-00ರವರೆಗೆ ನೆನಹು, ಪ್ರವಚನ
    ರಾತ್ರಿ 10-00 ರಿಂದ ಧಾರ್ಮಿಕ ರಸಪ್ರಶ್ನೆ (ಕ್ವಿಜ್)
2. ದಿ. **12-1-2001** ಶುಕ್ರವಾರ ಬೆಳಿಗ್ಗೆ 10-30 ರಿಂದ 1-30ರವರೆಗೆ ಮೂರನೆಯ ಅಧಿವೇಶನ,
    ಮಧ್ಯಾಹ್ನ 3-30ರಿಂದ 6ರವರೆಗೆ 4ನೆಯ ಅಧಿವೇಶನ, ಸಂಜೆ ನೆನಹು, ಪ್ರವಚನ ಬಸವ ಪೂಜಾವ್ರತದ ಪ್ರಾತ್ಯಕ್ಷಿಕೆ
3. **13-1-2001** ಶನಿವಾರ ಬೆಳಿಗ್ಗೆ 10-30ಕ್ಕೆ ಶರಣ ಮೇಳ ಉದ್ಘಾಟನೆ

Digitalized by e-Sahithya Documentation Forum
Sponsored by Sarayu Foundation Trust

    ಸಂಜೆ 5ರಿಂದ ಪೀಠಾರೋಹಣ ವಾರ್ಷಿಕೋತ್ಸವ
4. ದಿ. **14-1-2001** ಭಾನುವಾರ ಬೆಳಿಗ್ಗೆ 9ರಿಂದ ಗಣಲಿಂಗ ದರ್ಶನ
    ★ 11 ಗಂಟೆಗೆ ಸಮುದಾಯ ಪ್ರಾರ್ಥನೆ, ಶ್ರೀ ಸಿದ್ಧರಾಮೇಶ್ವರ ಜಯಂತಿ, ವಚನ ಪಠಣ
    ★ ಸಂಜೆ 4 ಗಂಟೆಯಿಂದ ಬಸವೇಶ್ವರ ಐಕ್ಯಮಂಟಪದಿಂದ ಮಹಾಮನೆಯವರೆಗೆ ಪಥ ಸಂಚಲನ
    ★ 7 ರಿಂದ ನೆನಹು, ಸಾಮೂಹಿಕ ಇಷ್ಟಲಿಂಗಾರ್ಚನೆ

ದಿ. **15-1-2001, ಸೋಮವಾರ** 10-30ರಿಂದ , 2-30ರವರೆಗೆ.
    ಬೆಳಿಗ್ಗೆ ಗುರುದರ್ಶನ, ಸಮಾರೋಪ ಸಮಾರಂಭ

ಧನ ಸಹಾಯಕ್ಕೆ ಮನವಿ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ.	4. ಹಿತೈಷಿಗಳು	: 500 ರೂ
2. ಪೋಷಕರು	: 2000 ರೂ.	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
3. ದಾನಿಗಳು	: 1000 ರೂ.	6. ಪ್ರತಿನಿಧಿ ಶುಲ್ಕ	: 125 ರೂ

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳಕ್ಕೆ ವಿನಿಯೋಗಿಸಲಾಗುವುದು.

ದೇಣಿಗೆ ಸಂಗ್ರಹದ ಪವಿತ್ರ ಕರ್ತವ್ಯ

ವರ್ಷದಿಂದ ವರ್ಷಕ್ಕೆ ಅಧಿಕಗೊಳ್ಳುತ್ತಿರುವ ಶರಣ ಬಂಧುಗಳು, ಪ್ರಸ್ತುತ ವರ್ಷದಿಂದ ಇನ್ನೂ ಒಂದು ದಿನ ಕಾರ್ಯಕ್ರಮವು ವೃದ್ಧಿಗೊಂಡ (ಒಟ್ಟು 5 ದಿವಸ) ಕಾರಣ, ಬೆಲೆ ಏರಿಕೆಯೂ ಸೇರಿ ಖರ್ಚು ಅಧಿಕವಾಗುವುದರಿಂದ ಬಸವ ತತ್ವಾನುಯಾಯಿಗಳು ಸ್ವಯಂ ಪ್ರೇರಣೆಯಿಂದ ರಸೀತಿ ಪುಸ್ತಕ ತರಿಸಿಕೊಂಡು ಕಾಣಿಕೆಯನ್ನು ಸಂಗ್ರಹಿಸಬೇಕು. ಧರ್ಮಪಿತ ಬಸವಣ್ಣನವರಿಗೆ ತಾವು ಸಲ್ಲಿಸುವ ಪವಿತ್ರ ಸೇವೆ ಎಂದು ಭಾವಿಸಬೇಕು. ಶರಣ ಮೇಳದ ದೇಣಿಗೆ ಸಂಗ್ರಹ ಮತ್ತು ಪ್ರಚಾರಕ್ಕೆ ಹೋದಾಗ ಮರೆಯದೆ 2001ನೆಯ ಇಸವಿಯಲ್ಲಿ ನಡೆಯುವ ಜನಗಣತಿಯ ಬಗ್ಗೆ ಸಹ ಕರಪತ್ರ ವಿತರಿಸಬೇಕು.

ಬೆಂಗಳೂರು ವಿಳಾಸ :
ಬಸವ ಮಂಟಪ, 2035
2ನೇ ಬ್ಲಾಕ್, 20ನೇ ಮುಖ್ಯರಸ್ತೆ
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-3325335, 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿಲ್ಲೆ-ಬಾಗಲಕೋಟ
ದೂರವಾಣಿ : 08351-58038, 58007, 58140

ವೀರಶೈವವಲ್ಲ, ಲಿಂಗಾಯತ

ಕಳೆದ ಹಲವಾರು ತಿಂಗಳಿಂದ 'ವೀರಶೈವವೊ ಲಿಂಗಾಯತವೊ' ಎನ್ನುವ ಬಗೆಗೆ ನಡೆದ ಹೇಳಿಕೆಗಳು, ಚಿಂತನೆಗಳು ಮತ್ತು ತೀರ ಇತ್ತೀಚೆಗೆ ಬಂದ 'ಧರ್ಮ' ಮತ್ತು 'ಹೆದರಿಕೆಗಳು' ನನಗೆ ಸೋಜಿಗವನ್ನುಂಟು ಮಾಡಿದೆ. ವಿನಯ ಸೌಜನ್ಯದ ಮೇರೆಗಳನ್ನು ಮೀರಿ ಕೆಲವರು ಧಾರ್ಮಿಕ ಸಂಸ್ಕೃತಿ, ಧರ್ಮಕ್ಕೆ ಸಂಬಂಧಿಸಿದ ವಿಚಾರಗಳು ತಮ್ಮ ಸ್ವತ್ತಾಗಿವೆ. ತಾವು ಹೇಳಿದ್ದೇ ಸತ್ಯ ಎನ್ನುವಂತೆ ತಿಳಿದುಕೊಂಡು ಕೊಟ್ಟ ಹಲವಾರು ಸ್ಪಷ್ಟೀಕರಣಗಳು ವಿಜ್ಞಾನವು ಅನುಸರಿಸುವ ವಿಧಾನಗಳಿಗೆ ಹೊರತಾಗಿವೆಯೆಂದು ನನಗೆ ಅನಿಸುತ್ತದೆ.

ಕಳೆದ ಹನ್ನೆರಡು ವರುಷಗಳಿಂದ ಕರ್ನಾಟಕ, ಮಹಾರಾಷ್ಟ್ರ ಮತ್ತು ನೆರೆಯ ಪ್ರಾಂತ್ಯಗಳನ್ನು ಸಂಚರಿಸಿ, ಸಮಗ್ರ ಲಿಂಗಾಯತ ಧಾರ್ಮಿಕ ಸಾಹಿತ್ಯ ಸಂಸ್ಕೃತಿಗಳನ್ನು ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಎರಡು ಪುಸ್ತಕಗಳನ್ನು ಬರೆದು ಯುರೋಪು, ಅಮೇರಿಕ, ಭಾರತದಲ್ಲಿ ಪ್ರಕಟಿಸಿದ್ದೇನೆ. 'ಲಿಂಗಾಯತ ಜೈನ ಹಾಗೂ ಬ್ರಾಹ್ಮಣ ಧಾರ್ಮಿಕ ಸಂಸ್ಕೃತಿ ಮತ್ತು ಮಠಗಳು' ಕುರಿತು ಬರೆದಿರುವ ನನ್ನ ಮೂರನೆಯ ಗ್ರಂಥ ಇದೀಗ ಮುದ್ರಣಕ್ಕೆ ಹೋಗಲಿದೆ. ನನ್ನ ಅಧ್ಯಯನದಿಂದ ನನಗೆ ತಿಳಿದು ಬಂದ ಸಂಕ್ಷಿಪ್ತ ವಿವರಗಳು ಹೀಗಿವೆ.

ಅಧ್ಯಯನದಿಂದ 'ವೀರಶೈವ' ಪದವು ಲಿಂಗಾಯತನದಲ್ಲ, ಬಸವಣ್ಣನದೂ ಅಲ್ಲ, ಅದು ಕಾಶ್ಮೀರ, ತಮಿಳು, ತೆಲುಗು ದೇಶದಲ್ಲಿಂದ ಬಂದ ಶಬ್ದ. ಶೈವ ಧರ್ಮ ಹಾಗೂ ಶೈವ ಸಿದ್ಧಾಂತಗಳು 'ಕರ್ಮ'ವನ್ನು ಹೇಳುತ್ತವೆ. ವರ್ಣಾಶ್ರಮವನ್ನು ಪ್ರತಿಪಾದಿಸುತ್ತವೆ. ತಮಿಳು ನಾಡಿನ ಶೈವ ಭಕ್ತರು ಶೂದ್ರರನ್ನೂ, ಮಹಿಳೆಯರನ್ನು ಅಂದರೆ ಸಮಾಜದ ಮುಕ್ಕಾಲು ಭಾಗವನ್ನು ತಮ್ಮ ಪ್ರಪಂಚದಿಂದ ದೂರವಾಗಿಸಿ ಅವರನ್ನು ಹೊರಹಾಕಿದ್ದುಂಟು. ಪುರಾತನರು ಶೂದ್ರ ಮತ್ತು ಮಹಿಳೆಯರನ್ನು ಕಡೆಗಣಿಸಿ ಅವರನ್ನು ತಮ್ಮ ಸಂಘದಿಂದ ಹೊರ ಹಾಕಿದರು. ಆ ನಂತರ ಕರ್ನಾಟಕದಲ್ಲಿ ಆ ಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ಕಾಳಾಮುಖಿರು ಇನ್ನಷ್ಟು ಮುಂದೆ ಹೋಗಿ ಶೂದ್ರ ಮತ್ತು ಮಹಿಳೆಯರನ್ನು ನೋಡಲು ಆಗದು, ಅವರು ಮಲಿನರು ; ಅವರನ್ನು ಮುಟ್ಟಿದರೆ ಮಾಲಿನ್ಯವುಂಟಾಗುವುದರಿಂದ ಸ್ನಾನ ಮಾಡಬೇಕೆನ್ನುವಷ್ಟರ ಮಟ್ಟಿಗೆ ಕಾಳಾಮುಖಿರು ಶೈವ ಧರ್ಮವನ್ನು ನಡೆಸಿಕೊಂಡು ಬಂದರು ಎನ್ನುವುದನ್ನು ಪಂಡಿತರು ಗುರುತಿಸಿದ್ದಾರೆ.

ಆ ಕಾಲದಲ್ಲಿ ಪುಣ್ಯ ಪುರುಷನೊಬ್ಬನನ್ನು, ಜಾಗತಿಕ ಮಟ್ಟದಲ್ಲಿ ಪ್ರಜಾಧರ್ಮವೊಂದನ್ನು ಪ್ರಸಾರ ಮಾಡಲಿಕ್ಕೆಂದು ಬರುವ ಪ್ರವಾದಿಯ ಬರವನ್ನು , ದಕ್ಷಿಣದ ಈ ಭೂಮಿ ಕಾಯ್ದುಕೊಂಡು ನಿಂತಿತ್ತು. ಆಗ ಕಾಣಿಸಿಕೊಂಡವರು ಬಾಗೇವಾಡಿಯ ಬಸವಣ್ಣ. ಅವರು ನಡೆಸಿದ ಸಾಮಾಜಿಕ ಆಂದೋಲನದಿಂದಾಗಿ ಕೇವಲ ಅರ್ಧ ಶತಮಾನದ ಅವಧಿಯಲ್ಲಿ ಕಾಳಾಮುಖಿ ಶೈವ ಮಾತ್ರವಲ್ಲ ಶೈವದ ಸಂಸ್ಕೃತಿಯನ್ನೇ ಲಿಂಗಾಯತನ ಧರ್ಮವು ನುಂಗಿತ್ತಲ್ಲದೆ ಮುಂದಿನ ಎರಡೂವರೆ ಶತಮಾನಗಳಲ್ಲಿ ಶೈವವು ಅದರಲ್ಲಿ ಸಂಪೂರ್ಣ ಕರಗಿ ಹೋದದ್ದನ್ನು ನಶಿಸಿದ ಎರಡು ಶೈವ ಪಂಥಗಳು ಎಂಬ ಬರ್ಕಲಿ ವಿಶ್ವ ವಿದ್ಯಾಲಯವು ಪ್ರಕಟಿಸಿರುವ ಗ್ರಂಥದಲ್ಲಿ ವಿವರಿಸಲಾಗಿದೆ.

ಆಗಿನ ಶೈವವು ಲಿಂಗಾಯತದಲ್ಲಿ ಕರಗಿ ಹೋದಂತೆ, ಕಾಳಾಮುಖರು ಲಿಂಗಾಯತ ಧರ್ಮವನ್ನು ಅಪ್ಪಿಕೊಂಡಿದ್ದಲ್ಲದೆ ಬಸವಣ್ಣನಿಂದ ವ್ಯವಸ್ಥಿತವಾಗಿ ಆ ಧರ್ಮದಲ್ಲಿ ಕರಗಿ ಹೋದರು. ಈಗ ನಾವು ಹೆಸರಿಸುವ ವೀರಶೈವವು ಕಾಳಾಮುಖರು ತಮ್ಮ ಹಿಂದೆ ಬಿಟ್ಟು ಹೋದ ಎಲುಬಿನ ಹಂದರದಲ್ಲಿ 'ಚುಕು ಚುಕು' ಎನ್ನುತ್ತ ಆಗೀಗ ಗದ್ದಲ ಮಾಡುತ್ತಿದೆ.

ಲಿಂಗಾಯತ ಧರ್ಮವು 'ವಿಪ್ರ' 'ಅರ್ಚಕ' ಮತ್ತು 'ಅಯ್ಯಪ್ಪ'ನ ಧರ್ಮವಲ್ಲ. ಅದು ಶೈವರ ಅಭಿಷೇಕ, ಮಂತ್ರ ಗಣ್ಯತಾ ವಾದವನ್ನು, ನಾವು ಶ್ರೇಷ್ಠರು ಎಂದು ಹೇಳಿಕೊಳ್ಳುವವರನ್ನು ತಿರಸ್ಕರಿಸುತ್ತದೆ. ಕರ್ಮ, ಪುನರ್ಜನ್ಮ ಸ್ವರ್ಗ ನರಕಗಳನ್ನು ಹೊರಗೆ ಹಾಕಿದ ಪ್ರಜಾಧರ್ಮವಾಗಿದೆ. ಇಂದು ಪ್ರಪಂಚಕ್ಕೆ ಪ್ರಪಂಚವೇ ಅಪ್ಪಿಕೊಂಡಿರುವ ಲೌಕಿಕ ಮೌಲ್ಯಗಳನ್ನು ಎಂದರೆ ಸಮತೆ, ಸೋದರ ಭಾವ, ಎಲ್ಲ ಬಗೆಯ ಸ್ವಾತಂತ್ರ್ಯ , ಮಾನವೀಯ ಗುಣಗಳನ್ನು, ಹಕ್ಕುಗಳನ್ನು ದೇವತ್ವಕ್ಕೇರಿಸಿದ್ದನ್ನು ಜಾಗತಿಕ ಪಂಡಿತರು ಗುರುತಿಸಿದ್ದಾರೆ. ಬಸವನಿಂದ ಸಂಸ್ಥಾಪಿತವಾದ ಲಿಂಗಾಯತನ ಧರ್ಮವು ಅಂತಹ ವಿಶ್ವಧರ್ಮದ ಪಂಕ್ತಿಯಲ್ಲಿ ನಿಂತು ಪ್ರಜಾತತ್ತ್ವಗಳನ್ನು ದೇವತ್ವದ ಮಟ್ಟಕೇರಿಸಿದ ಪ್ರಜಾ ಧರ್ಮವಾಗಿದೆ. ಶೈವರ ಶಿವನು ಲಿಂಗಾಯತನ ಇಷ್ಟಲಿಂಗವಲ್ಲ. ಬಸವಪೂರ್ವದಲ್ಲಿ 'ವೀರಶೈವ' ಪದವು ಇದ್ದರೆ ಇದ್ದಿರಬಹುದು. ಆದರೆ ಅದಕ್ಕೂ ಲಿಂಗಾಯತ ಪದಕ್ಕೂ ಸಂಬಂಧವೇ ಇಲ್ಲ. 'ಶೈವ'ಕ್ಕೆ 'ವೀರ' ಪದವನ್ನು ಸೇರಿಸಿ ಸಮಾಜಕ್ಕೆ ಶೂದ್ರರಿಗೆ, ಮಹಿಳೆಯರ ಕಲ್ಯಾಣಕ್ಕೆ ವೀರಶೈವವು ಏನು ಮಾಡಿದೆ ? ಲಿಂಗಾಯತ ಅಲ್ಲದವನನ್ನು, ಶೂದ್ರರನ್ನು, ಮಹಿಳೆಯರನ್ನು ಧರ್ಮಗುರುವನ್ನಾಗಿ ಮಾಡಿಕೊಳ್ಳಬಲ್ಲಿರಾ ? ಗಂಡಸರಾದರೆ ಆ ಕೆಲಸವನ್ನು 'ವೀರಶೈವ'ಪದವನ್ನು ಉಗ್ಗಡಿಸುವವರು ಮಾಡಬಲ್ಲರೆ ?

ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ, ಲಿಂಗವಂತನು ಲಿಂಗವಂತರಿಗೆ ಬುದ್ಧಿಯನ್ನು ಹೇಳಿದರೆ, ಲಿಂಗಭಕ್ತನು ಲಿಂಗ ಪಥವ ಹೇಳಿದರೆ, ಅದಕ್ಕೆ ಮತ್ಸರ ಧಮಕಿಗಳು ಏಕೆ ?

-ಲಿಂ॥ ಡಾ. ಹಿರೇಮಲ್ಲೂರ ಈಶ್ವರನ್

(ಕೃಪೆ : 11-4-1996. ಒಡುಗರ ವೇದಿಕೆ , ನವೋದಯ ಪತ್ರಿಕೆ, ಗದಗ)

2001ನೆಯ ಇಸವಿಯ ಶರಣ ಮೇಳದ ಚಿಂತನ ಗೋಷ್ಠಿಯಲ್ಲಿ ಚರ್ಚಿಸಲು ಕೆಲವರು ಕೇಳಿರುವ ಸಂದೇಹಗಳು :

1. ಶರಣ. ವೀರಭದ್ರಯ್ಯ ಸ್ವಾಮಿ, ಜಿರಾದ್ ಸಿರ್ಸಿ, ಬೀದರ್. -ಏಕದೇವೋಪಾಸನೆ ಬಹಳ ಒಪ್ಪಿತವಾದ ವಿಷಯ. ಶರಣರು, ಶಿವಯೋಗಿಗಳ ಗದ್ದುಗೆಗಳನ್ನು ಪೂಜಿಸಿದರೆ ಏಕದೇವೋಪಾಸನೆಗೆ ಚ್ಯುತಿ ಬರುವುದೆ ? ಹಾಗಾದರೆ ಹಿಂದಿನವರ ಗದ್ದುಗೆಗಳನ್ನು ಏಕದೇವೋಪಾಸನೆಗೆ ಕುಂದು ಬರದಂತೆ ಯಾವ ರೀತಿ ಗೌರವಿಸಬೇಕು?

2. ಆದಿ ಶರಣರ ಕಾಲದಲ್ಲಿ ತ್ರಿಕಾಲ ಲಿಂಗಾರ್ಚನೆ ಇತ್ತು. ಮಧ್ಯಾಹ್ನ ಕಾಯಕದ ಸ್ಥಳಗಳಲ್ಲೇ ಶರಣರು ಲಿಂಗಪೂಜೆಗೆ ವ್ಯವಸ್ಥೆ ಮಾಡಿಕೊಂಡಿದ್ದರು. ಈಗಿನ ಕಾಲಮಾನದ ಪ್ರಕಾರ ಅದು ಸಾಧ್ಯವಿಲ್ಲ. ಹಾಗಾದರೆ ಎಷ್ಟು ಸಲ ಮಾಡಬೇಕು ?

3. ಸುವರ್ಣಮ್ಮ, ಬೆಂಗಳೂರು -ಈಗಿನ ಕಾಲದ ತರುಣ-ತರುಣಿಯರು ಕೆಲವರು ದೀಕ್ಷೆ , ಮಂತ್ರೋಪದೇಶ ಮಾಡಿಸಿಕೊಳ್ಳಲು ಸಿದ್ಧರಿದ್ದಾರೆ. ಆದರೆ ಸದಾ ಅಂಗದ ಮೇಲೆ ಇಷ್ಟಲಿಂಗ ಧರಿಸಲು ಇಷ್ಟಪಡುವುದಿಲ್ಲ. ಇದಕ್ಕೇನು ಪರಿಹಾರ ?

4. ದೇವಿಕಾ ಶರಣಪ್ಪ. ಬೆಂಗಳೂರು. -ಓರ್ವ ಹುಡುಗಿ ಋತುಮತಿಯಾದಾಗ, ಲಿಂಗಾಯತರಲ್ಲಿ ಕಡ್ಡಾಯವಾಗಿ ದೀಕ್ಷೆ ಮಾಡಿಸುವುದು ಇದ್ದರೂ ನಮ್ಮ ಬಂಧುಗಳೊಬ್ಬರು ಮಾಡಿಸಲಿಲ್ಲ. ಕಾರಣ ಕೇಳಿದರೆ, ಶಾಲೆಗೆ ಹೋಗುವ ಮಕ್ಕಳು ಕರಡಿಗೆ ಹಾಕಿದರೆ ಎದ್ದು ಕಾಣುತ್ತೆ. ಅದಕ್ಕೆ ಮಾಡಿಸಲಿಲ್ಲ ಎಂದರು. ಇದಕ್ಕೆ ಏನು ಮಾಡಬೇಕು ?

5. ಟಿ.ಎ.ದಾಸಪ್ಪ ಮತ್ತು ರಾಜಮ್ಮ, ತಿಪಟೂರು. ಡಾ॥ ಚಿದಾನಂದ ಮೂರ್ತಿಯವರು ಲಿಂಗಾಯತರು ಹಿಂದುಗಳು ಎಂದು ಪತ್ರಿಕಾ ಹೇಳಿಕೆ ನೀಡಿದ್ದು (23-9-2000) ನೋಡಿ ಆಘಾತವಾಗಿದೆ. ಶರಣ ಮೇಳದಲ್ಲಿ ಚರ್ಚಿಸಿರಿ.

ಆಸಕ್ತಿ ಇರುವವರು ಮೊದಲೇ ಪ್ರಶ್ನೆಗಳನ್ನು ಕಳಿಸಿದರೆ ಜನರು ಚಿಂತನೆ ಮಾಡಿಕೊಂಡು ಬರಲು ಅನುಕೂಲವಾಗುವುದು.

Digitalized by e-Sahithya Documentation Forum
Sponsored by Sarayu Foundation Trust

ಆಗಸ್ಟ್-ಸೆಪ್ಟೆಂಬರ ತಿಂಗಳಲ್ಲಿ ದೇಣಿಗೆ ಸಲ್ಲಿಸಿದ ದಾಸೋಹಿಗಳು

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

ಎಂ.ಬಿ.ಗೋಕರ್ಣ ಮತ್ತು ನಿಂಗರಾಜು, ಚಳ್ಳಕೆರೆ, (ಸಿಂಗಲ್ ಕೋಣೆ)	51000-00
ಅನಂತಮ್ಮ ಮತ್ತು ಡಿ.ಎಸ್ ಮೂಡ್ಲಗಿರಿ, ದಾವಣಗೆರೆ	51000-00
ಪುಸ್ತಕ ಮುದ್ರಣಕ್ಕಾಗಿ-ವಿಶ್ವಕಲ್ಯಾಣ ಮಿಷನ್‌ಗೆ	
ಶರಣೆ ಅಂಬುಜಾಕ್ಷಮ್ಮ, ಶಿವಮೊಗ್ಗ	15000-00
(ಬೆಂಗಳೂರು ಬಸವ ಮಂಟಪದಲ್ಲಿ ಭಾನುವಾರದ ದಾಸೋಹ ನಡೆಸಲು ಪುದುವಟ್ಟಿಗಾಗಿ)	
ಶರಣ. ಶರಣಬಸವ ಹಿರೇಮಠ	2001-00
ಗುರುಕಾಣಿಕೆ : ಶರಣ. ವೀರಪ್ಪ ಕುಮಸಿ, ಬೆಂಗಳೂರು	2001-00
ಶರಣ. ಎಸ್.ಎಸ್.ಶಹಾಪುರಕರ (ದಾಸೋಹ ನಿಧಿಗೆ)	1111-00

ಜನಗಣತಿ ಪ್ರಚಾರಕ್ಕಾಗಿ ಕರಪತ್ರ ಮುದ್ರಣಕ್ಕೆ ಧನ ದಾಸೋಹ ಮಾಡಿದ ಶರಣರು

(ಸೆಪ್ಟಂಬರ್ ಸಂಚಿಕೆಯಿಂದ ಮುಂದುವರಿದ ಪಟ್ಟಿ)

10,000 (ಹತ್ತು ಸಾವಿರ) ಪ್ರತಿಗೆ 1100 ರೂ.

ಶರಣರುಗಳಾದ :

ರಾಜೇಂದ್ರಕುಮಾರ ಎಸ್. ಪಾಟೀಲ್, ನಿರ್ಣಾ, ಬೀದರ
ರವಿಚಂದ್ರ ಬಸವಣ್ಣೆಪ್ಪ ಶಿವಪೂಜಿ, ಚಿಟಗುಪ್ಪ
ಬಸವಂತರಾವ್ ರಾಚಪ್ಪ ಪಾಟೀಲ್, ಕಂದಗುಳ
ಬಸವಂತರಾವ್ ಬಂಡೆಪ್ಪ ಪಾಟೀಲ್, ಮರಕುಂದಾ
ಬಸವ ಕಿರಣ ವೈಜನಾಥ ಪಾಟೀಲ್, ಜನವಾಡಾ
ಶಾಂತಕುಮಾರ ವೀರಭದ್ರಪ್ಪ ಪನಸಾಲೆ, ಜನವಾಡಾ (ರೂ. 1142-00)
ಬಸವ ಸಮಿತಿ, ಹಳ್ಳಿಖೇಡ
ಕೇಶವರಾಜ ಮಹಾರಾಜ, ಹಳ್ಳಿಖೇಡ (ಬ)
ರಾಷ್ಟ್ರೀಯ ಬಸವ ದಳ, ಕೋಳಾರ (ಕೆ)
ರಾಮರೆಡ್ಡಿ ನರ್ಸಾರೆಡ್ಡಿ ಗಂಗಾವರ, ಬೀದರ
ತುಕಾರಾಂ ಗಿರೆಪ್ಪ ಗೌರಶೆಟ್ಟಿ, ಬೀದರ

5000ಪ್ರತಿಗೆ 650 ರೂ. ಕೊಟ್ಟವರು

ಸಿದ್ದರಾಮಪ್ಪ ಮಲ್ಲಶೆಟ್ಟಪ್ಪ ಸೊಪ್ಪಣ್ಣ, ನಿರ್ಣಾ, ಬೀದರ
ಸಂಗಪ್ಪ ಮಾಣಿಕಪ್ಪ ಕಾಶಂಪುರ, ನಿರ್ಣಾ, ಬೀದರ
ರಾಷ್ಟ್ರೀಯ ಬಸವ ದಳ, ಕಂದಗುಳ
ಸೊಪ್ಪಣ್ಣಪ್ಪ ಗುಂಡಪ್ಪ ದೇವಣಿ, ಕಂದಗುಳ
ಕಂದಗುಳ ಬಸವ ಭಕ್ತರು, ಕಂದಗುಳ
ಹನುಮಂತಪ್ಪ ಬಸಪ್ಪ ಪುರ್ಮೆ, ಮರಕುಂದಾ

ಬಸವರಾಜ ಮಾಣಿಕಪ್ಪ ಪಾಟೀಲ, ರಂಜೋಳಖೇಣಿ
ರಾಷ್ಟ್ರೀಯ ಬಸವ ದಳ, ಸಂಗೊಳಗಿ
ಗೋದಾವರಿ ವೀರಭದ್ರಪ್ಪ ಪನಸಾಲ, ಜನವಾಡಾ
ವಿಶ್ವನಾಥ ಶಿವಗಂಗಾರಾಮ್ ಪಾಟೀಲ್, ಜನವಾಡಾ
ಬಕ್ಕಪ್ಪ ಶರಣಪ್ಪ ಕುಸನೂರೆ, ಬೀದರ
ಶಾಂತಕುಮಾರ ನಾಗಪ್ಪಾ ಸ್ವಂತ, ಹಳ್ಳಿಖೇಡ (ಬಿ).
ಸರಸ್ವತಿ. ಭೀಮಶೆಟ್ಟಿ ಮೀನಕೇರಿ, ಹಳ್ಳಿಖೇಡ (ಬಿ).
Prema Kandasamy Maniagar, Barur, Dharmapuri
K. Kannappan & Swarnalatha, Nagarsampatti, Dharmapuri
ಗಂಗಮ್ಮ ಸಿದ್ಧಪ್ಪಾ ಸಾವಳೆ, ಬೀದರ
ಮಡೆಪ್ಪಾ ಅಮರಪ್ಪಾ ಧನಾಶ್ರಿ, ಹಳ್ಳಿಖೇಡ (ಬಿ)
ಶ್ರೀ ಗುರು ಬಸವ ಫೈನಾನ್ಸ್, ಸಿಂದಬಂದಗಿ, ಬೀದರ
ಸಂಜೀವಕುಮಾರ, ಅಶೋಕ, ಮಲ್ಲಿಕಾರ್ಜುನ ಸಾವಳಗಿ, ಆಣದೂರ, ಬೀದರ
ಮಲ್ಲಿಕಾರ್ಜುನ ಎಸ್.ಎಸ್. ಬೀದರ
ಡಾ॥ ಕಾಶೀನಾಥ ಹಾವಪ್ಪ ರಾಂಪುರೆ, ಔರಾದ (ಎಸ್) ಬೀದರ
ರಾಷ್ಟ್ರೀಯ ಬಸವ ದಳ, ಗಾದಗಿ, ಬೀದರ
ಶಂಕ್ರಪ್ಪ ಮಲ್ಲಪ್ಪ ಹಂಗರಗಿ, ಹಳ್ಳದಕೇರಿ, ಬೀದರ
ಶಿವಕುಮಾರ ಸಾವದಗೆ, ಬೀದರ
ಶರಣಪ್ಪ ಈರಪ್ಪ ಮೈಲೂರಕರ, ಬೀದರ
ಮಲ್ಲಿಕಾರ್ಜುನ ಶರಣಪ್ಪ ಚರಾಲ
ಅಣೆಪ್ಪ ಬಸಪ್ಪ ಎಣಕುರ, ಸಿರ್ಸಿ (ಔ), ಬೀದರ
ಪ್ರಕಾಶ ಶಿವನಾಥ ಧರಣೆ, ಖತಗಾಂವ, ಬೀದರ
ಕಾಶಪ್ಪ ರಾಮಶೆಟ್ಟಿ ಶಿವಪೂಜಿ. ಬೆಳಕೂಣಿ (ಚೌಧರಿ)
ಚಿರಂಜೀವಿ ಚಂದ್ರಶೇಖರ ಪಾಟೀಲ ಮತ್ತು ಶರಣಪ್ಪ ಬಸವಂತರಾವ್ ಮಾಲಿಪಾಟೀಲ, ಮಸ್ಕಲ್
ಚಿರಂಜೀವಿಗಳಾದ ನಿಜಲಿಂಗಪ್ಪ, ಬಸವರಾಜು ಮತ್ತು ಮಲಶೆಟ್ಟಿ ಶಿವರಾಯ ಪೊಲೀಸ್ ಪಾಟೀಲ, ಮಸ್ಕಲ್
ಚಿರಂಜೀವಿಗಳಾದ ರಾಜಕುಮಾರ, ಮಹಾದೇವ ಬಿರಾದಾರ. ಹನುಮಂತಪ್ಪ ನಾಗಶೆಟ್ಟಿ, ಬಿರಾದಾರ
ಬಸವರಾಜ ಚಂದ್ರಕಾಂತ ಲುಕ್, ಬಾಗಲಕೋಟೆ
ಎಸ್.ಎಫ್. ಹುನಗುಂದ ಮತ್ತು ಸಹೋದರರು. ಹುಬ್ಬಳ್ಳಿ
ಸಂಗಪ್ಪ ಗುರಪ್ಪ ಪಿಟ್ಟ, ಬೆಳಕೂಣಿ (ಚೌಧರಿ), ಬೀದರ
Rashtreeya Basava Dala, Rajapura, Maharashtra

(ಮುಂದುವರಿಯುವುದು)

★ ಮುದ್ರಣಕ್ಕೆ ದೇಣಿಗೆ ಕೊಟ್ಟವರದ್ದು ಇನ್ನೂ ಬಹಳ ಹೆಸರು ಇದ್ದು, ಸ್ಥಳಾಭಾವದಿಂದ ಕೆಲವು ಹೆಸರುಗಳನ್ನು ಮಾತ್ರ ಮುದ್ರಿಸಲಾಗಿದೆ. ಎಲ್ಲ ದಾನಿಗಳಿಗೂ ಶುಭವನ್ನು ಹಾರೈಸುತ್ತೇವೆ.

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ.
-ವ್ಯವಸ್ಥಾಪಕರು

Digitalized by e-Sahithya Documentation Forum
Sponsored by Sarayu Foundation Trust

ಭಾರತದ ಜನಗಣತಿ-2001


೨೦೦೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ್" ಎಂದು ಬರೆಸಲು ಕಳಕಳಿಯ ಕರೆ


ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ.ಶ.೧೧೩೪-೧೧೯೬)ನವರಿಂದ ಸ್ಥಾಪಿತವಾದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಭಾರತದ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಾಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಇದು ಹಿಂದು ಧರ್ಮದ ಒಂದು ಅಂಗವಾಗದೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ.

೧.	ಧರ್ಮ ಸ್ಥಾಪಕರು	- ವಿಶ್ವಗುರು ಬಸವಣ್ಣನವರು
೨.	ಧರ್ಮ ಸಂಹಿತೆ	- ಸಮಾನತೆ ಸಾರುವ ವಚನ ಸಾಹಿತ್ಯ
೩.	ಧರ್ಮದ ದೇವರ ಹೆಸರು	- ಲಿಂಗದೇವ
೪.	ಧರ್ಮ ಲಾಂಛನ	- ನಿರಾಕಾರ ಲಿಂಗದೇವನ ಕುರುಹಾದ ಇಷ್ಟಲಿಂಗ
೫.	ಧರ್ಮ ಕ್ಷೇತ್ರ	- ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ
೬.	ಧಾರ್ಮಿಕ ವಾರ್ಷಿಕ ಸಮಾವೇಶ	- ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ
೭.	ಧಾರ್ಮಿಕ ವ್ರತ	- ಶರಣ ವ್ರತ
೮.	ಧರ್ಮ ಧ್ವಜ	- ಷಟ್ಕೋನ- ಇಷ್ಟಲಿಂಗ ಸಹಿತ ಬಸವ ಧ್ವಜ
೯.	ಧರ್ಮ ಸಂಸ್ಕಾರ	- ಇಷ್ಟಲಿಂಗ ದೀಕ್ಷೆ
೧೦.	ಧರ್ಮ ಮಂದಿರ	- ಬಸವ (ಅನುಭವ)ಮಂಟಪ
೧೧.	ಧಾರ್ಮಿಕ ವಿಧಿ-ವಿಧಾನ	- ಗುರು-ಬಸವಣ್ಣ, ಲಿಂಗ-ಗೋಳಾಕಾರದ ಇಷ್ಟಲಿಂಗ, ಜಂಗಮ-ಪವಿತ್ರಾತ್ಮರ ಪೂಜೆ
೧೨.	ಧಾರ್ಮಿಕ ಕೂಟ	- ಶರಣ ಸಂಗಮ-ವಾರದ ಪ್ರಾರ್ಥನೆ
೧೩.	ಧಾರ್ಮಿಕ ಮಾಸ	- ಶ್ರಾವಣ
೧೪.	ಧರ್ಮ ಭಾಷೆ	- ಕನ್ನಡ
೧೫.	ಧರ್ಮ ಪರಂಪರೆ	- ಶರಣ ಪರಂಪರೆ
೧೬.	ಧಾರ್ಮಿಕ ಸೋದರತ್ವ	- ಜಾತಿ ವರ್ಗ ವರ್ಣಾತೀತ ಸಮಾನತೆ
೧೭.	ಧರ್ಮದ ಧ್ಯೇಯ	- ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಶರಣ ಸಮಾಜ (ಕಲ್ಯಾಣ ರಾಜ್ಯ)ನಿರ್ಮಾಣ

ಆದ್ದರಿಂದ ಜನಗಣತಿಯ ೮ನೆಯ ಕಾಲಂ ಮತ (**Religion**) ಎಂದಿರುವಲ್ಲಿ ಲಿಂಗಾಯತ (**Lingayat-L**) ಎಂದು ಬರೆಸಿರಿ. (ಇಂಗ್ಲೀಷಿನ **Religion** ಪದವನ್ನು ಧರ್ಮ ಎಂದು ಭಾಷಾಂತರಿಸುವುದೇ ಸೂಕ್ತ ಆದರೆ ಜನಗಣತಿಯ ಕನ್ನಡ ಪರಿಪತ್ರದಲ್ಲಿ **Religion** ಪದವನ್ನು ಮತ ಎಂದು ಭಾಷಾಂತರಿಸಲಾಗಿದ) ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ, ನಾಗರಿಕ ಅಧಿಕಾರಿಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶೇಷ ಎಚ್ಚರಿಕೆ: ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು ಬಳಸಿ ಲಿಂಗಾಯತ ಧರ್ಮಕ್ಕೆ ಸಿಗುವ ಮಾನ್ಯತೆಯನ್ನು ತಪ್ಪಿಸುವ ಪ್ರಮಾದ ಮಾಡಬೇಡಿರಿ.






ಸೆಪ್ಟೆಂಬರ್ 3ನೇ ತಾರೀಖು ಬೀದರ್‌ನಲ್ಲಿ ನಡೆದಂತಹ ಲಿಂಗೈಕ್ಯ ಪೂಜ್ಯ ಶ್ರೀ ಲಿಂಗಾನಂದ ಮಹಾ ಸ್ವಾಮೀಜಿಯವರ ಜಯಂತಿ ಉತ್ಸವ ಮತ್ತು ಪೂಜ್ಯ ಶ್ರೀ ಗಂಗಾ ಮಾತಾಜಿಯವರ ವರ್ಧಂತಿ ಉತ್ಸವ

Digitalized by e-Sahithya Documentation Forum
Sponsored by Sarayu Foundation Trust

R.NO. 19980/70



Digitalized by e-Sahithya Documentation Forum
Sponsored by Sarayu Foundation Trust